Swabhimani Sahakari

Pages : 44 / 20₹

Volume - 21
Issue - 10
October - 2024

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ




ಅಕ್ಟೋಬರ್ 31
ದೀಪಾವಳಿ



ಅಕ್ಟೋಬರ್ ೦3
ದಸರಾ ಆರಂಭ

ಬನ್ನಿ ಬನ್ನಿ ಬನ್ನಿ ಕೊಡುವ ಬನ್ನಿ ಬಂಗಾರದ ಬನ್ನಿ ಸಂತಸ ತನ್ನಿ
ನಿನ್ನೆ ಮೊನ್ನಿಯ ದ್ವೇಶವ ಮರೆತು ಬನ್ನಿ ಬನ್ನಿ ಕೊಡಿ ಬಂಗಾರದ ಬನ್ನಿ



ಅಕ್ಟೋಬರ್ ೦2
ಮಹಾತ್ಮಾ ಗಾಂಧಿ ಹಾಗೂ
ಲಾಲ್ ಬಹದ್ದೂರ್ ಶಾಸ್ತ್ರೀ
ಅವರುಗಳ ಜಯಂತಿ

ಅಕ್ಟೋಬರ್ 11/12
ಮಹಾನವಮಿ
ವಿಜಯದಶಮಿ



ಅಕ್ಟೋಬರ್ 17
ವಾಲ್ಮೀಕಿ
ಜಯಂತಿ



ಸೌಹಾರ್ದ ಸಹಕಾರಿಗಳ ಸಂಖ್ಯೆ : 6361

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1670



ಜಿ. ನಂಜನಗೌಡ

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ನಾಡಹಬ್ಬ ದಸರಾ ಹಾಗೂ ದೀಪಗಳ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು. ಎರಡು ಹಬ್ಬಗಳು ಸಹಕಾರಿಗಳ ಜೀವನದಲ್ಲಿ ಉತ್ತರೋತ್ತರ ಅಭಿವೃದ್ಧಿಯನ್ನು ನೀಡಲಿ. ಹೆಚ್ಚಿನ ಉತ್ಸಾಹವನ್ನು ನೀಡಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮ ಅಭಿವೃದ್ಧಿಯನ್ನು ಸಾಧಿಸಲಿಕ್ಕೆ ಶಕ್ತಿಯನ್ನು ನೀಡಲಿ ಎಂದು ಹಾರೈಸುತ್ತೇನೆ.

# ಸಹಕಾರಿಗಳ ಅಧ್ಯಯನ ಪ್ರವಾಸ ಪ್ರಗತಿಗೆ ಪೂರಕ

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ನಾಡಹಬ್ಬ ದಸರಾ ಹಾಗೂ ದೀಪಗಳ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು. ಎರಡು ಹಬ್ಬಗಳು ಸಹಕಾರಿಗಳ ಜೀವನದಲ್ಲಿ ಉತ್ತರೋತ್ತರ ಅಭಿವೃದ್ಧಿಯನ್ನು ನೀಡಲಿ. ಹೆಚ್ಚಿನ ಉತ್ಸಾಹವನ್ನು ನೀಡಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮ ಅಭಿವೃದ್ಧಿಯನ್ನು ಸಾಧಿಸಲಿಕ್ಕೆ ಶಕ್ತಿಯನ್ನು ನೀಡಲಿ ಎಂದು ಹಾರೈಸುತ್ತೇನೆ.

ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಹಲವಾರು ಮೆಟ್ಟಿಲುಗಳು ಇವೆ. ಸಕ್ರೀಯ ಸದಸ್ಯರು, ಉತ್ತಮ ಆಡಳಿತ ಮಂಡಳಿ, ನುರಿತ ಸಿಬ್ಬಂದಿವರ್ಗದವರು ಪ್ರಥಮ ಮೆಟ್ಟಿಲು ಎಂದುಕೊಂಡರೆ ಸಮಗ್ರ ಸಹಕಾರಿ ಕ್ಷೇತ್ರದ ಬಗ್ಗೆ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಯ ಬಗ್ಗೆ ಮಾಹಿತಿಯನ್ನು ಹಾಗೂ ಉತ್ತಮ ಆಡಳಿತದ ಬಗ್ಗೆ ಮಾಹಿತಿಯನ್ನು ಆಡಳಿತ ಮಂಡಳಿಯವರು ಹೊಂದಿರುವುದು ಅವಶ್ಯಕ. ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಯವರು ತಮ್ಮ ದೈನಂದಿನ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವಲ್ಲಿ ಅಗತ್ಯ ವಿದ್ಯಾರ್ಹತೆ, ಅನುಭವದ ಜೊತೆಗೆ ನಿರಂತರ ತರಬೇತಿ ಹೊಂದುವುದು ಅವಶ್ಯಕ. ರಾಜ್ಯದಾದ್ಯಂತ ಅನೇಕ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳ ಅಧ್ಯಯನಕ್ಕಾಗಿ ಸಹಕಾರಿಗಳು ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡು ಸಹಕಾರಿ ಸಂಸ್ಥೆಗಳನ್ನು ಅಧ್ಯಯನ ಮಾಡುವುದು ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗುತ್ತದೆ.

ಸಹಕಾರಿ ಕ್ಷೇತ್ರ ಅತ್ಯಂತ ವಿಶಾಲವಾದ ಕ್ಷೇತ್ರ, ಗ್ರಾಮೀಣ ಮಟ್ಟದಿಂದ ರಾಷ್ಟ್ರಮಟ್ಟದ ವರೆವಿಗೂ ಈ ಕ್ಷೇತ್ರ ಕಾರ್ಯನಿರ್ವಹಿಸುತ್ತಿದೆ. ಸಮಾಜದ ಎಲ್ಲಾ ವರ್ಗದ ಜನರೂ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ ಸಮಾಜದ ಕಡುಬಡವನಿಗೂ ಸೇವೆ ನೀಡುವ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಉದ್ದೇಶವನ್ನು ಹೊಂದಿದ ಕ್ಷೇತ್ರ ಇದಾಗಿದೆ. ಸಹಕಾರ ಕ್ಷೇತ್ರಕ್ಕೆ ಪರ್ಯಾಯವಾದ ಸೇವಾ ಕ್ಷೇತ್ರ ಬೇರೊಂದಿಲ್ಲ. ಜನರ ಜೀವನ ಪದ್ಧತಿ ಇದಾಗಿದೆ. ಆದ್ದರಿಂದ ಈ ಕ್ಷೇತ್ರದಲ್ಲಿ ಹಲವಾರು ವಿಷಯಗಳನ್ನು ತಿಳಿಯುವುದಕ್ಕಾಗಿ ಅಧ್ಯಯನ ಯೋಗ್ಯವಾಗಿವೆ. ಯಾವುದೇ ಒಂದು ಸಹಕಾರಿ ತಾನು ಸರ್ವತೋಮುಖ ಅಭಿವೃದ್ಧಿ ಸಾಧಿಸಬೇಕಿದ್ದರೆ ಬೇರೆಯವರು ಹೇಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದರ ಬಗ್ಗೆ, ಅವರ ಕಾರ್ಯಚಟುವಟಿಕೆಗಳ ಬಗ್ಗೆ ಅಧ್ಯಯನ ಮಾಡುವುದು ಅವಶ್ಯಕ. ಹೀಗೆ ಅಧ್ಯಯನ ಮಾಡುವುದರಿಂದ ಸದರಿ ಸಹಕಾರ ಸಂಘದ ಪ್ರಸಕ್ತ ಸ್ಥಿತಿಗತಿ ವಿಶೇಷವಾಗಿ ತಮ್ಮ ಶಕ್ತಿ ಸಾಮರ್ಥ್ಯ ಹಾಗೂ ಅವಕಾಶಗಳ ಸದುಪಯೋಗದ ಬಗ್ಗೆ ಅರಿವಾಗುತ್ತದೆ ಮತ್ತು ಸವಾಲುಗಳನ್ನು ಹೇಗೆ ಎದುರಿಸಬೇಕು ಎಂಬ ಬಗ್ಗೆ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಉತ್ತಮ ಹಾಗೂ ಯಶಸ್ವಿ ಸಹಕಾರಿ ಸಂಸ್ಥೆಗಳನ್ನು ಅಧ್ಯಯನ ಮಾಡಲು ಬೇರೆ ರಾಜ್ಯಗಳಿಗೆ ಅಥವಾ ಬೇರೆ ದೇಶಗಳಿಗೆ ಪ್ರವಾಸ ಹೋಗುವ ಜೊತೆಗೆ ನಮ್ಮ ಪಕ್ಕದಲ್ಲಿಯೇ ಇರುವ ಸಂಸ್ಥೆಗಳನ್ನು ಮೊದಲು ಅಧ್ಯಯನ ಮಾಡಬೇಕಿದೆ. ಅಕ್ಕ ಪಕ್ಕದ ಜಿಲ್ಲೆಗಳಲ್ಲಿಯೇ ಉತ್ತಮವಾಗಿ ಕಾರ್ಯನಿರ್ವಹಿಸುವ ಸಂಸ್ಥೆಗಳಿಗೆ ಭೇಟಿ ನೀಡಿ ಅಧ್ಯಯನ ಮಾಡಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ಅಗತ್ಯ ಕ್ರಮವಿಡುವಿರಾಗಿ ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–17
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 18–35
**ಲೇಖನಗಳು :**
ದುಷ್ಟಶಕ್ತಿಗಳ ವಿರುದ್ಧ ಗೆಲುವು ಸಾಧಿಸಿದ ದಿನವೇ 'ವಿಜಯದಶಮಿ'................................ 36–37
ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರ ಭಾಗವಹಿಸುವಿಕೆ ........................................ 38–39
ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಜಿಯವರ ಜಯಂತಿ ................ 40–41
ಯಶಸ್ವಿ ಸಹಕಾರ ನಿರ್ವಹಣೆಗೆ ಅತ್ಯುತ್ತಮ ಅಭ್ಯಾಸಗಳು ಅಗತ್ಯ ........................ 42–44

# ಸಂಪಾದಕೀಯ

## ಗುಣಮಟ್ಟದ ಸಾಲ ನೀಡಿಕೆ ಹಾಗೂ ದಾಖಲಾತಿಗಳ ಪ್ರಾಮುಖ್ಯತೆ

ಸದಸ್ಯರಿಂದ ಠೇವಣಿ ಸ್ವೀಕರಿಸುವುದು ಮತ್ತು ಸದಸ್ಯರಿಗೆ ಸಾಲ ನೀಡುವುದು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಲ್ಲಿ ಮಹತ್ವದ ಸ್ಥಾನ ಪಡೆದಿದೆ. ಇದು ಸೌಹಾರ್ದ ಸಹಕಾರಿಗಳ ಜೀವಾಳ. ಈ ಕಾರ್ಯದಲ್ಲಿ ವಿಶೇಷವಾಗಿ ಸಾಲ ನೀಡಿಕೆ ವಿಷಯದಲ್ಲಿ ಸಹಕಾರಿಗಳ ಆಡಳಿತ ಮಂಡಳಿಯವರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಅತ್ಯಂತ ಜಾಗೃತೆ ವಹಿಸುವುದು ಅವಶ್ಯಕ. ಪ್ರಾರಂಭದಲ್ಲಿ ಠೇವಣಿ ಸಂಗ್ರಹಿಸುವಾಗ ಹಲವು ವಿಧವಾಗಿ ನಿಮ್ಮ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ತಿಳುವಳಿಕೆ ನೀಡಿ ಸಹಕಾರಿ ಉತ್ತಮವಾಗಿ ಲಾಭದಾಯಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಭರವಸೆ ನೀಡಲಾಗುತ್ತದೆ. ಸಾಲ ನೀಡುವಾಗ ಈ ವಿಷಯ ಗಮನದಲ್ಲಿರಬೇಕು. ಸಾಲ ಗುಣಮಟ್ಟದ ಸಾಲವಾಗಿರಬೇಕು. ಸಾಲ ಮರುಪಾವತಿ ಸಾಮರ್ಥ್ಯ ಪರಿಶೀಲಿಸಿ ದೃಢಪಡಿಸಿ ಸಾಲ ನೀಡಬೇಕು. ಹಾಗಾದರೆ ಮಾತ್ರ ಸಕಾಲದಲ್ಲಿ ಅದರ ಮರುಪಾವತಿ ಸಾಧ್ಯವಾಗುತ್ತದೆ.

ಗುಣಮಟ್ಟದ ಸಾಲ ಎಂದರೇನು? ಸಾಲ ಉತ್ತಮ ಉದ್ದೇಶ ಇರಬೇಕು. ಉತ್ತಮ ಉದ್ದೇಶ ಕಾರ್ಯರೂಪಕ್ಕೆ ಬಂದಿರಬೇಕು. ಬೇರೆ ಕಾರ್ಯಗಳಿಗೆ ವಿನಿಯೋಗವಾಗಿರಬಾರದು. ಸಾಲಗಾರನ ಕ್ರೆಡಿಟ್ ವರ್ದಿನೆಸ್ಸ್ ಅಂದರೆ ಆತನ ಪತ್ತು ನಿರ್ವಹಣೆ ತೃಪ್ತಿಕರವಾಗಿರಬೇಕು. ಸಾಲಕ್ಕೆ ಅಗತ್ಯ ಭದ್ರತೆಯ ದೃಷ್ಟಿಯಿಂದ ಜಾಮೀನದಾರರು ಇರಬೇಕು. ಸರಿಯಾದ ಸಮಯದಲ್ಲಿ ಸಾಲ ಬಿಡುಗಡೆಯಾಗಿರಬೇಕು ಮತ್ತು ಸರಿಯಾದ ಸಮಯಕ್ಕೆ ಸಾಲ ವಸೂಲಾತಿ ಕ್ರಮಗಳನ್ನು ನಿರ್ವಹಿಸುತ್ತಿರಬೇಕು. ಸಾಲ ಸುಸ್ತಿಯಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ.

ಸಾಲ ನೀಡುವಾಗ ಅಗತ್ಯ ದಾಖಲಾತಿಗಳನ್ನು ಪಡೆಯುವುದು ಅತ್ಯಂತ ಮಹತ್ವದ ಹಾಗೂ ಜವಾಬ್ದಾರಿಯುತ ಕೆಲಸವಾಗಿದೆ. ಸಾಲಗಾರನ ಒತ್ತಡಕ್ಕೆ ಅಥವಾ ಬೇರೆ ಯಾವುದೇ ಬಾಹ್ಯ ಒತ್ತಡಕ್ಕೆ ಸಾಲ ಬಿಡುಗಡೆ ಮಾಡುವುದು ಸರಿಯಲ್ಲ. ಸಾಲ ಬಿಡುಗಡೆ ಮಾಡುವುದಕ್ಕಿಂತ ಮೊದಲು ಸಾಲಗಾರನಿಂದ ಮತ್ತು ಜಾಮೀನುದಾರರಿಂದ ಸಾಲದ ಅರ್ಜಿಗೆ ಲಗತ್ತಿಸಬಹುದಾದ ಎಲ್ಲ ಅಗತ್ಯ ದಾಖಲಾತಿಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಿಸಬೇಕು. ಅರ್ಜಿಯ ಯಾವ ಭಾಗವೂ ಖಾಲಿ ಬಿಡಬಾರದು. ಲಗತ್ತಿಸಬಹುದಾದ ದಾಖಲಾತಿಗಳು ಸರಕಾರದ ಅಥವಾ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಅಧಿಕೃತ ದಾಖಲೆಗಳಾಗಿರಬೇಕು. ಸಾಲಗಾರನು ಸಾಲ ಪಡೆಯುವುದಕ್ಕಾಗಿ ಕುಟುಂಬದ ಸಮ್ಮತಿ ಪತ್ರದೊಂದಿಗೆ ಕುಟುಂಬದ ಸದಸ್ಯರ ಸಂಪೂರ್ಣ ವಿವರಗಳ್ನು ದಾಖಲಿಸಿಕೊಳ್ಳುವುದು ಅಗತ್ಯ. ಯಾವುದೇ ದಾಖಲಾತಿಗಳಲ್ಲಿ ವೈಟನರ್ ಉಪಯೋಗಿಸಬಾರದು. ಸಾಲ ಒಂದು ವೇಳೆ ಸುಸ್ತಿಯಾಗಿ ವ್ಯಾಜ್ಯ ಹೂಡುವ ಸಂದರ್ಭ ಬಂದಾಗ ದಾವಾ ದಾಖಲಾತಿ ಸಲ್ಲಿಸುವಾಗ ಸಲ್ಲಿಸಬೇಕಿರುವ ಎಲ್ಲ ದಾಖಲಾತಿಗಳನ್ನ ಪ್ರಾರಂಭದಲ್ಲಿಯೇ ಪಡೆದುಕೊಂಡಿದ್ದರೆ ಸಾಲ ವಸೂಲಾತಿ ಪ್ರಕ್ರಿಯೇ ಸುಲಭವಾಗುತ್ತದೆ. ದಾಖಲಾತಿಗಳು ಅಪೂರ್ಣವಾಗಿದ್ದರೆ ದಾವಾ ಸಂದರ್ಭದಲ್ಲಿ ಹಾಜರುಪಡಿಸುವಾಗ ದಾವಾ ಪ್ರಕ್ರಿಯೇಗೆ ಹಿನ್ನಡೆಯಾಗುತ್ತದೆ. ಆದ್ದರಿಂದ ಸಹಕಾರಿಗಳು ಸಾಲ ನೀಡುವಾಗ ದಾಖಲಾತಿಗಳನ್ನು ಬಹಳ ಜಾಗರೂಕತೆಯಿಂದ ಪರಿಶೀಲಿಸಿ ತೆಗೆದುಕೊಳ್ಳಬೇಕು. ಅಪೂರ್ಣ ದಾಖಲಾತಿಗಳಿರದಂತೆ ಎಚ್ಚರವಹಿಸಬೇಕು.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಮತ್ಸರ"

ಇಂದ್ರಿಯಗಳು ಹಾಗೂ ಮನಸ್ಸು ನಮಗಿರುವ ಸಾಧನಗಳು, ಅವುಗಳ ಮೂಲಕ ನಾವು ಜಗತ್ತನ್ನು ಅನುಭವಿಸುತ್ತೇವೆ. ನಮ್ಮ ಬದುಕನ್ನು ರೂಪಿಸುತ್ತೇವೆ. ಬದುಕಿನ ಮೌಲ್ಯ ಹೆಚ್ಚು ಕಡಿಮೆಯಾಗುವುದು ಈ ಎರಡನ್ನು ಅವಲಂಬಿಸಿದೆ. ಮನಸ್ಸು–ಇಂದ್ರಿಯಗಳನ್ನು ಸರಿಯಾಗಿ ಬಳಸಿದರೆ ಬದುಕು ಒಳ್ಳೆಯ ರೂಪ ಹೊಂದುತ್ತದೆ. ಇವೆರಡೂ ಮಹತ್ವದ ಸಾಧನಗಳು, ಎರಡನ್ನೂ ನಿಸರ್ಗ ದೇವತೆ ಕೊಟ್ಟಿದ್ದಾಳೆ.

ಇಂದ್ರಿಯಗಳು ಕಾಣುತ್ತವೆ. ಮನಸ್ಸು ಕಾಣುವುದಿಲ್ಲ. ಕಾಣದ ಮನಸ್ಸು ಮಹತ್ವದ್ದಾಗಿದೆ. ಬದುಕನ್ನು ಶ್ರೀಮಂತಗೊಳಿಸುವುದು, ಶಾಂತಗೊಳಿಸುವುದು ಈ ಮನಸ್ಸು. ಅದನ್ನು ಬಳಸುವುದು ಹೇಗೆ? ನಮ್ಮ ಉದ್ದೇಶ ನಾವು ಶ್ರೀಮಂತರಾಗಿರಬೇಕು. ಸಮರ್ಥರಾಗಿರಬೇಕು; ನಮ್ಮ ಬದುಕು ಸುಂದರವಾಗಿರಬೇಕು. ಆದರೆ ಕೇವಲ ಬಾಹ್ಯ ಸಂಪತ್ತಿನಿಂದ ಬದುಕನ್ನು ಕಟ್ಟಲಿಕ್ಕಾಗುವುದಿಲ್ಲ. ಎಲ್ಲ ವಸ್ತುಗಳಿಗೂ ಬೆಲೆ ಕಟ್ಟುವುದು ಮನಸ್ಸು. ಕುರೂಪ ಸುರೂಪಗಳನ್ನು ನಿರ್ಧರಿಸುವುದು ಮನಸ್ಸು. ಮನಸ್ಸು ಎಲ್ಲ ಪದಾರ್ಥಗಳನ್ನು ಅಳೆಯುತ್ತದೆ. ಎಷ್ಟೋ ಸಲ ಮನಸ್ಸು ಸಾವಿನ ಕೊನೆಯ ಕ್ಷಣದಲ್ಲಿ, "ನಿನ್ನ ಬದುಕಿನ ಸಾಧನೆ ಏನು?" ಎಂದು ಪ್ರಶ್ನಿಸುತ್ತದೆ. ಅದು ಬದುಕಿನ ಮೌಲ್ಯ ಕಟ್ಟುತ್ತದೆ. ತಿಳಿದುಕೊಳ್ಳುವ, ಅನುಭವಿಸುವ ಸಾಮರ್ಥ್ಯ ಇದಕ್ಕಿದೆ. ವಸ್ತುಗಳು ಸಣ್ಣದಿರಬಹುದು, ದೊಡ್ಡದಿರಬಹುದು, ಆದರೆ ಅದನ್ನು ಅನುಭವಿಸುವ ಮನಸ್ಸು ಮಹತ್ವದ್ದು.

ರವೀಂದ್ರನಾಥ ಟ್ಯಾಗೋರ್ ಭಾರತದ ಒಬ್ಬ ಮಹಾನ್ ಕವಿ. ನೊಬೆಲ್ ಪಾರಿತೋಷಕ ವಿಜೇತ. ಒಂದು ದಿನ ಸಾಯಂಕಾಲ ಅವರು ದಾರಿಯಲ್ಲಿ ನಡೆದು ಹೋಗುತ್ತಿದ್ದಾಗ, ಅವರಿಗೆ ಒಂದು ಗುಲಾಬಿ ಹೂವಿನ ಬಳ್ಳಿ ಕಂಡಿತು. ಅವರಿಗೆ ಅವಸರದ ಕೆಲಸವಿತ್ತು. ಆದರೆ ಎಲ್ಲವನ್ನೂ ಮರೆತು ಅಲ್ಲಿಯೇ ನಿಂತು ಬಿಟ್ಟರು. ಎಷ್ಟು ಮಗ್ನರಾದರೆಂದರೆ ಸೂರ್ಯ ಮುಳುಗಿದ, ಅದು ಅವರಿಗೆ ಗೊತ್ತಾಗಲಿಲ್ಲ. ಅಕ್ಕಪಕ್ಕದವರು ಇವರನ್ನು ಎಚ್ಚರಿಸಿದರು. ಆಗ ಅವರು, "ಇಂತಹ ಅದ್ಭುತ ಕ್ಷಣಗಳನ್ನು ಬಿಟ್ಟು ಏನು ಮಾಡುವುದು! ಈ ಸಾಯಂಕಾಲದ ಸೂರ್ಯನ ಕೆಂಪು ಕಿರಣಗಳು, ಈ ಗುಲಾಬಿ ಎಷ್ಟು ಅದ್ಭುತ!" ಎಂದರು. ಜಗತ್ತನ್ನು ಮರೆಯಿಸಿ ಭಗವಂತನ ಸಾಕ್ಷಾತ್ಕಾರ ಮಾಡಿಸಲಿಕ್ಕೆ ಒಂದು ಹೂವು ಸಾಕು. ಇದಕ್ಕೆ ಸುಂದರ ಮನಸ್ಸು ಇರಬೇಕು. ರವೀಂದ್ರರಿಗೆ ಹೂವಿನಲ್ಲಿ ಭಗವಂತನ ದರ್ಶನವಾಯಿತು. ಕವಿಮನಸ್ಸಿಗೆ ಸಾಮಾನ್ಯ ವಸ್ತುಗಳಲ್ಲಿಯೂ ಭಗವಂತನ ದರ್ಶನವಾಯಿತು. ಆದರೆ ನಮ್ಮ ಸಾಧಾರಣ ಮನಸ್ಸುಗಳು ತೂಗುವುದರಲ್ಲಿ, ಅಳೆಯುವುದರಲ್ಲಿ ತೊಡಗಿರುತ್ತವೆ. ಇಂತಹ ಮನಸ್ಸನ್ನು ಸುಧಾರಿಸಿ ಸಾಧನೆಯಲ್ಲಿ ತೊಡಗಬೇಕು.

**ಪ್ರಶ್ನೆ ; ಮನಸ್ಸಿನ ಕುರೂಪಗಳಾವುವು ?**

ಯಾವ ಭಾವನೆಗಳಿದ್ದರೆ ಈ ಮನುಷ್ಯ ಒಳ್ಳೆಯವನಲ್ಲ ಅನ್ನಿಸುತ್ತದೆಯೋ ಅಂತಹ ಭಾವನೆಗಳು ಮನಸ್ಸಿನ ಕುರೂಪಗಳು. ಇದಕ್ಕೆ ಕೆಲವು ಗುಣಗಳಿವೆ. ಉದಾಹರಣೆಗೆ, ಮತ್ಸರ, ಕೆಲವು ವಸ್ತು ನಮಗೆ ಸೇರುವುದಿಲ್ಲ. ಯಾಕೆ ಸೇರುವುದಿಲ್ಲ ಅಂದರೆ ಅವು ನಮ್ಮ ಹತ್ತಿರ ಇರುವುದಿಲ್ಲ. ತನ್ನ ಬಳಿ ಇರದ ವಸ್ತು ಬೇರೆಯವರ ಬಳಿ ಇದ್ದರೆ ಮತ್ಸರ ಆರಂಭವಾಗುತ್ತದೆ. ಮತ್ಸರ ಇದು ಮಾನಸಿಕ ವಿಕಾರ. ಅದು ಅಂತರಂಗದಲ್ಲಿ ವಿಷವನ್ನು ಹರಡುತ್ತದೆ. ನೋವನ್ನುಂಟು ಮಾಡುತ್ತದೆ. ಅದು ಒಂದು ರೀತಿಯ ಬೆಂಕಿ, ಬಹಳ ವಿಚಿತ್ರ, ಮತ್ಸರವಿರುವ ಮನುಷ್ಯನಿಗೆ ಏನು ಸೇರುವುದಿಲ್ಲ. ಅದಕ್ಕೆ ಸರಳ ಭಾಷೆಯಲ್ಲಿ ಹೊಟ್ಟೆಕಿಚ್ಚು ಎನ್ನುತ್ತಾರೆ. ಅದು ನಮಗೆ ತಾಪವನ್ನು ಕೊಡುತ್ತದೆ. ಇದು ಮನಸ್ಸಿನ ಕುರೂಪ.

ಆನಂದ ಹೊರಗಿನಿಂದ ಬರುವುದಿಲ್ಲ. ಅದು ಮನಸ್ಸಿನ ಸೌಂದರ್ಯದಿಂದ ಬರುತ್ತದೆ. ಎಲ್ಲವನ್ನೂ ಕಟ್ಟುವುದು ಸುಂದರವಾದ ಮನಸ್ಸು. ಇದರಲ್ಲಿ ಒಂದು ಬಗೆಯ ಪ್ರೇಮಭಾವ ಇರಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 8625 | 863 | 1345 | 594 | 11427 |
| 2 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 5211 | 474 | 746 | 262 | 6693 |
| 3 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 3416 | 389 | 643 | 332 | 4780 |
| ಸೆಪ್ಟೆಂಬರ್ 2024ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 174 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 376 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 6414 | 1100 | 1957 | 694 | 10165 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 964 | 204 | 463 | 145 | 1776 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 5450 | 896 | 1494 | 549 | 8389 |
| ಸೆಪ್ಟೆಂಬರ್ ತಿಂಗಳಿನಲ್ಲಿ ಒಟ್ಟು 228 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |



## ಸಹಕಾರಿಗಳ ನಿಬಂಧಕರಾಗಿ ಶ್ರೀ ಟಿ.ಹೆಚ್.ಎಂ. ಕುಮಾರ್ ಐ.ಎ.ಎಸ್

**ಬೆಂಗಳೂರು :** ಸಹಕಾರಿ ಇಲಾಖೆಯ ಸಹಕಾರಿಗಳ ನಿಬಂಧಕರಾಗಿ ಶ್ರೀ ಟಿ. ಹೆಚ್. ಎಂ. ಕುಮಾರ್, ಐ.ಎ.ಎಸ್ ಇವರನ್ನು ಸರ್ಕಾರ ನೇಮಕ ಮಾಡಿದೆ.



**ಬೆಳಗಾವಿ :** ಬೆಳಗಾವಿ ಪ್ರಾಂತೀಯ ಕಚೇರಿಗೆ ಶ್ರೀ ಎಂ. ಡಿ. ಮಲ್ಲೂರ, ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಇವರು ಭೇಟಿ ನೀಡಿ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ಪ್ರಗತಿ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಅವರಿಗೆ ಸನ್ಮಾನಿಸಲಾಯಿತು.

## ಉದ್ಘಾಟನೆ




**ಚಿಕ್ಕಮಗಳೂರು :** ದಿನಾಂಕ : 22.09.2024 ರಂದು ಚಿಕ್ಕಮಗಳೂರಿನಲ್ಲಿ ಸಮಾನ ಪತ್ತಿನ ಸೌಹಾರ್ದ ಕೋಆಪರೇಟಿವ್ ಸೊಸೈಟಿ ಲಿ., ಇದರ ನೂತನ ಸ್ವಂತ ಕಟ್ಟಡ ಉದ್ಘಾಟನಾ ಕಾರ್ಯಕ್ರಮನ್ನು ಏರ್ಪಡಿಸಲಾಗಿತ್ತು, ಸದರಿ ಕಟ್ಟಡ ಉದ್ಘಾಟನೆಯನ್ನು ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಹೆಚ್ ಡಿ ತಮ್ಮಯ್ಯ ರವರು, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು.

ಬ್ಯಾಂಕಿಂಗ್ ವಿಭಾಗ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ನೆರವೇರಿಸಿದರು. ಕಾರ್ಯಕ್ರಮದಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರು, ಹಿರಿಯ ಸಹಕಾರಿಗಳು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರಾ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಪಾಲ್‌ರಾಜ್ ಎ ಇವರು ಉಪಸ್ಥಿತರಿದ್ದರು.



**ಚಿಕ್ಕಮಗಳೂರು :** ದಿನಾಂಕ: 04.09.2024 ರಂದು ಚಿಕ್ಕಮಗಳೂರು, ಕೊಪ್ಪ ತಾಲೂಕಿನಲ್ಲಿ ಯಡಗೆರೆ ಸೌಹಾರ್ದ ಕೋಆಪರೇಟಿವ್ ಸೊಸೈಟಿ ಲಿ., ಇದರ ಯಸ್ಕಾನ್ ವಾಣಿಜ್ಯ ಸಂಕೀರ್ಣ ಕಟ್ಟಡ ಉದ್ಘಾಟನಾ ಕಾರ್ಯಕ್ರಮನ್ನು ಏರ್ಪಡಿಸಲಾಗಿತ್ತು, ಸದರಿ ಕಟ್ಟಡ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಹಾಡ್‌ವೇರ್ ಮಾರಾಟ ವಿಭಾಗ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಆರ್ ಪ್ರಸನ್ನಕುಮಾರ್ ಇವರು ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಬಿವಿ ರವೀಂದ್ರನಾಥ್, ಹಿರಿಯ ಸಹಕಾರಿಗಳು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರಾ ಇವರು ಉಪಸ್ಥಿತರಿದ್ದರು.



**ಚಿಕ್ಕಮಗಳೂರು :** ದಿನಾಂಕ : 04.09.2024ರಂದು ಸಂಯುಕ್ತ ಸಹಕಾರಿಯ ಮಾನ್ಯ ಅದ್ಯಕ್ಷರು ಹಾಗೂ ಉಪಾಧ್ಯಕ್ಷರು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಗಾಯತ್ರಿ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿ., ಇದರ ಕಛೇರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಸಹಕಾರಿಯ ಅಧ್ಯಕ್ಷರೊಂದಿಗೆ ಮತ್ತು ನಿರ್ದೇಶಕರೊಂದಿಗೆ ಚರ್ಚೆ ನಡೆಸಿದರು ಮತ್ತು ಸಹಕಾರಿಯ ಬೆಳವಣಿಗೆಗೆ ಅಗತ್ಯ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿದರು.

# "ಯುವಜನ ಹಾಗೂ ಸಹಕಾರ" ಸಂವಾದ ಕಾರ್ಯಕ್ರಮ



**ವಿಜಯಪುರ** : ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ವಿಜಯಪುರ, ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ "ಯುವಜನ ಹಾಗೂ ಸಹಕಾರ" ಕುರಿತು ಸಂವಾದ ಕಾರ್ಯಕ್ರಮವನ್ನು ದಿನಾಂಕ 13.09.2024ರಂದು "ಕನ್ನಡ ಭವನ" ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ 250 ವಿದ್ಯಾರ್ಥಿನಿಯರು ಹಾಗೂ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಮತ್ತು ಸ್ಥಳೀಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರೊ. ಬಿ.ಕೆ. ತುಳಸಿಮಾಲ, ಮಾನ್ಯ ಕುಲಪತಿಗಳು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಾಮನಗೌಡ ಬ ಪಾಟೀಲ, ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ್ ಇಂಡಿ, ಶ್ರೀ ಶಿವಶಂಕರ ಸ್ವಾಮಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ವಿಜಯಪುರ, ಶ್ರೀ ಶಂಕರಗೌಡ ಸೋಮನಾಳ, ಕೆ.ಎ.ಎಸ್. (ಸೂಪರ್ ಟೈಮ್ ಸ್ಕೇಲ್) ಮಾನ್ಯ ಕುಲಸಚಿವರು ಮತ್ತು ಆರ್ಥಿಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಪ್ರೊ. ಚಂದ್ರಶೇಖರ ಎಚ್.ಎಂ, ಮಾನ್ಯ ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಪ್ರೊ. ಆರ್.ವಿ. ಗಂಗಶೆಟ್ಟಿ, ಮಾನ್ಯ ಮುಖ್ಯಸ್ಥರು ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಪ್ರೊ. ಡಿ.ಎಂ. ಮದರಿ, ಮಾನ್ಯ ನಿರ್ದೇಶಕರು, ಪ್ರಾದೇಶಿಕ ಕೇಂದ್ರ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ಬೀದರ್, ಪ್ರೊ. ಯು.ಕೆ. ಕುಲಕರ್ಣಿ, ಮಾನ್ಯ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಡಾ. ಸುರೇಶ ಕೆ.ಪಿ. ಮಾನ್ಯ ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಡಾ. ಎ. ಆರ್. ಶ್ರೀನಾಥ್, ಮಾನ್ಯ ನಿರ್ದೇಶಕರು (ನಿ.), ನ್ಯಾಷನಲ್ ಕೋ–ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ, ನವದೆಹಲಿ, ಪ್ರೊ. ಜಿ.ಬಿ. ಸೋನಾರ, ಮಾನ್ಯ ಮುಖ್ಯಸ್ಥರು, ಸಮಾಜಕಾರ್ಯ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಸಂಯುಕ್ತ ಸಹಕಾರಿಯ ತರಬೇತಿ ಸಲಹೆಗಾರರಾದ ಶ್ರೀ ವಿ.ಜೆ. ಕಾರಕೂನ, ತರಬೇತಿ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್, ಸಹಾಯಕರಾದ ಶ್ರೀಮತಿ ಪ್ರತಿಭಾ ಮಠ, ಹಾಗೂ ಶ್ರೀ ಮಲ್ಲಿನಾಥ ಇವರು ಭಾಗವಹಿಸಿದ್ದರು.

**ಸ್ವಾಗತ :** ಪ್ರೊ. ಆರ್.ವಿ. ಗಂಗಶೆಟ್ಟಿ, ಮಾನ್ಯ ಮುಖ್ಯಸ್ಥರು ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಇವರು ವೇದಿಕೆಯ ಮೇಲೆ ಉಪಸ್ಥಿತವಿರುವ ಗಣ್ಯ ಮಾನ್ಯರ ಸ್ವಾಗತವನ್ನು ನಡೆಸಿಕೊಟ್ಟರು. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಇದರ ವಿದ್ಯಾರ್ಥಿನಿಯಾದ ಶ್ರೀಮತಿ ಗಿರೀಜಾ ನವಲಿಮಠ, ಇವರು ಗಣ್ಯಮಾನ್ಯರ ಪರಿಚಯವನ್ನು ನೆರವೇ–ರಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕವನ್ನು ಸಂಯುಕ್ತ ಸಹಕಾರಿಯ ಮಾನ್ಯ ತರಬೇತಿ ಸಲಹೆಗಾರರಾದ ಶ್ರೀ ವಿ.ಜೆ.ಕಾರಕೂನ ಇವರು ನಡೆಸಿಕೊಟ್ಟರು.



## ಸಹಕಾರ ಸಂಘಗಳ ತೊಟ್ಟಿಲು ಕರ್ನಾಟಕ - ಪ್ರೊ. ಬಿ.ಕೆ. ತುಳಸಿಮಾಲ

ಪ್ರೊ. ಬಿ.ಕೆ. ತುಳಸಿಮಾಲ, ಮಾನ್ಯ ಕುಲಪತಿಗಳು ಇವರು ಮಾತನಾಡುತ್ತಾ ಇವತ್ತಿನ ಈ ಯುವಜನ ಮತ್ತು ಸಹಕಾರ ಕಾರ್ಯಕ್ರಮವನ್ನು ಆಯೋಜಿಸಿದಂತಹ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮತಕ್ಕೆ ವಿಶ್ವವಿದ್ಯಾನಿಲಯದ ವತಿಯಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದರು. ಕರ್ನಾಟಕ ಸಹಕಾರ ಸಂಘಗಳ ತೊಟ್ಟಿಲು ಎಂದು ಪ್ರಖ್ಯಾತಿಯನ್ನು ಪಡೆದಿದೆ. ಕರ್ನಾಟಕದಲ್ಲಿ ಪ್ರಪ್ರಥಮವಾಗಿ 1905ರಲ್ಲಿ ಸಹಕಾರ ಸಂಘದ ಸ್ಥಾಪನೆಯಾಯಿತು. ಕರ್ನಾಟಕದಲ್ಲಿ ಸಹಕಾರ ಆಂದೋಲನ ಸಾಕಷ್ಟು ಪ್ರಗತಿಯನ್ನು ಸಾಧಿಸಿ ಆರ್ಥಿಕ

ಅಭಿವೃದ್ಧಿಗೆ ಕಾಣಿಕೆಯನ್ನು ಕೊಟ್ಟಿದೆ, ಸಾಮಾಜಿಕ ಸುಸ್ಥಿರತೆಗೆ ಅದು ಬೆಂಬಲವನ್ನು ಕೊಟ್ಟಿದೆ ಹಾಗೆಯೇ ಯುವಜನಗಳ ಸಬಲೀಕರಣಕ್ಕೆ ಹೊಸ ಆಶಯಗಳನ್ನು ಕೂಡ ಹುಟ್ಟು ಹಾಕಿದೆ ಎಂದರು. ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ ಹಾಗೇನೆ ಈ ಸಹಕಾರಿ ಕ್ಷೇತ್ರದ ಸಂರಚನೆ ಕೂಡ ಜನರ ಕೂಡಿಸುವಿಕೆ ಅವರ ಒಗ್ಗೂಡುವಿಕೆಗೆ, ಸಹಭಾಗಿತ್ವಕ್ಕೆ ಸಾಕಷ್ಟು ಅನುಕೂಲಗಳನ್ನು ಒದಗಿಸುತ್ತದೆ. ಈ ಸಹಕಾರಿ ಚಳುವಳಿ ಇನ್ನಷ್ಟು ಸುಸ್ಥಿರವಾಗಿ ಮುಂದುವರೆಯುವುದಕ್ಕೆ ಈಗಿನ ಯುವಜನತೆ ಹೆಚ್ಚು ಹೆಚ್ಚು ಪಾಲ್ಗೊಳ್ಳುವ ಅವಶ್ಯಕತೆ ಇದೆ. ಹಾಗಾಗಿ ಯುಜನತೆಯನ್ನು ಸಹಕಾರಿ ಕ್ಷೇತ್ರದ ಕಡೆಗೆ ಆಕರ್ಷಿತಗೊಳಿಸಬೇಕಿದೆ, ಅವರನ್ನು ಈ ಕ್ಷೇತ್ರದ ಜೊತೆಗೆ ಸಮನ್ವಯ ಮಾಡಬೇಕಿದೆ, ಹೀಗೆ ಸಮನ್ವಯ ಮಾಡುವುದರಿಂದ ಸಹಕಾರಿ ಕ್ಷೇತ್ರದಲ್ಲೂ ಕೂಡ ಹೊಸ ಆಯಾಮಗಳು ಬರುತ್ತವೆ. ಸಹಕಾರಿ ಕೇತ್ರದ ಮೂಲಕ ಯುಜನತೆಯ ಸಬಲೀಕರಣ ಕೂಡ ಆಗುತ್ತದೆ. ಇವತ್ತು ಭಾರತದಲ್ಲಿ 35 ವರ್ಷ ವಯಸ್ಸಿನ ಜನಸಂಖ್ಯೆಯ ಪ್ರಮಾಣ ಶೇ.65 ಇದೆ, ಈ ಯುವಜನತೆ ಸಾಕಷ್ಟು ಸವಾಲುಗಳನ್ನು ಅಂದರೆ ನಿರುದ್ಯೋಗ, ಆರ್ಥಿಕ ಅಸ್ಥಿರತೆ, ಸಾಮಾಜಿಕ ಅಸ್ಥಿರತೆಯನ್ನು ಹೀಗೆ ಅನೇಕ ಸವಾಲುಗಳನ್ನು ಎದುರಿಸುತ್ತಾ ಇದೆ, ಈ ಸವಾಲುಗಳಿಗೆಲ್ಲಾ ಸಹಕಾರಿ ಕ್ಷೇತ್ರದ ಮೂಲಕ ಅನೇಕ ಅವಕಾಶಗಳನ್ನು ಕಲ್ಪಿಸುತ್ತಾ ಪರಿಹಾರಗಳನ್ನು ಕಂಡುಕೊಳ್ಳಬಹುದಾಗಿದೆ. ಈ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕೋತ್ತರ ಪದವಿಯನ್ನು ಹೊಂದಿರುವ ವಿದ್ಯಾರ್ಥಿಗಳು ಮುಖ್ಯ ವಾಹಿನಿಗೆ ಬರುವುದಕ್ಕೆ ಈ ಸಹಕಾರಿ ಕ್ಷೇತ್ರ ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ, ವಿದ್ಯಾರ್ಥಿನಿಯರು ನೀವು ಯಾರಿಗೂ ಉದ್ಯೋಗ ಕೇಳುವ ಅವಶ್ಯಕತೆ ಇರುವುದಿಲ್ಲ, ಬದಲಾಗಿ ನಿಮ್ಮಿಂದ ಸಾಕಷ್ಟು ಜನತೆ ಉದ್ಯೋಗ ಪಡೆಯುವಂತಾಗುತ್ತದೆ ಎಂದು ಹೇಳಿದರು. ಇವತ್ತಿನ ದಿನ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ಮುಕ್ತ ಸಂವಾದ ಕಾರ್ಯಕ್ರಮ ಏರ್ಪಟ್ಟಿರುತ್ತದೆ. ಈ ಮುಕ್ತ ಸಂವಾದದಲ್ಲಿ ಹಲವಾರು ಮಹತ್ತರವಾದ ವಿಷಯಗಳನ್ನು ಚರ್ಚಿಸಲಾಗುತ್ತದೆ, ಹಲವಾರು ಸಂಪನ್ಮೂಲ ವ್ಯಕ್ತಿಗಳು ಚರ್ಚೆ ಮಾಡುತ್ತಾರೆ. ಮುಖ್ಯವಾಗಿ ಈ ಯುವಜನತೆ ಸಹಕಾರಿ ಕ್ಷೇತ್ರದ ಜೊತೆ ಸಮನ್ವಯ ಮಾಡುವುದಕ್ಕೆ ಇರುವ ಮಾರ್ಗಗಳ ಕುರಿತು ಹಾಗೂ ಯುವಜನತೆಯನ್ನು ಈ ಕ್ಷೇತ್ರದೊಂದಿಗೆ ಸಮನ್ವಯ ಮಾಡುವುದರಿಂದ ಈ ಕ್ಷೇತ್ರಕ್ಕೆ ಆಗುವ ಪ್ರಯೋಜನಗಳು ಹಾಗೂ ಯುವಜನತೆಗೆ ಆಗುವ ಪ್ರಯೋಜನಗಳ ಕುರಿತು ಹಾಗೂ ಅದೇ ರೀತಿ ಈ ಸಮನ್ವಯದಿಂದ ದೇಶದ ಸುಸ್ಥಿರ ಅಭಿವೃದ್ಧಿಗೆ ಆಗುವ ಪ್ರಯೋಜನಗಳ ಬಗ್ಗೆ ಚರ್ಚಿಸಲಾಗುತ್ತದೆ. ಹಾಗಾಗಿ ಈ ಎಲ್ಲಾ ವಿಷಯಗಳನ್ನು ಇಟ್ಟುಕೊಂಡು ಈ ಕಾರ್ಯಕ್ರಮ ಏರ್ಪಡಿಸಲಾಗಿದೆ, ಹಾಗಾಗಿ ಎಲ್ಲಾ ವಿದ್ಯಾರ್ಥಿಗಳು ಸಕ್ರೀಯವಾಗಿ ಪಾಲ್ಗೊಂಡು ಇದರ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಬೇಕು, ಹಾಗೂ ತಮಗೂ ಕೂಡ ಈ ಸಹಕಾರಿ ಕ್ಷೇತ್ರದ ಕುರಿತು ಅನೇಕ ಪೂರ್ವಾಗ್ರಹಗಳು ಇರುತ್ತವೆ. ಅವುಗಳಿಗೆಲ್ಲಾ ಇವತ್ತು ತಮ್ಮೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಉಪಸ್ಥಿತವಿರುವ ಪರಿಣಿತರಿಂದ ಮಾಹಿತಿ ಪಡೆದುಕೊಳ್ಳಬೇಕು ಹಾಗೂ ಈ ಭಾಗದಲ್ಲಿ ಮಹಿಳಾ ಸಹಕಾರಿಗಳಾಗಿ ಸಹಕಾರಿ ಕ್ಷೇತ್ರಕ್ಕೆ ಒಂದು ಹೊಸ ಅಧ್ಯಾಯವನ್ನು ಬರೆಯುತ್ತೀರಿ ಎಂದು ಆಶೀಸುತ್ತೇನೆ ಎಂದು ಹೇಳಿ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಪಾಲ್ಗೋಳಿರಿ ಎಂದು ಹೇಳಿದರು.



## ಮಹಿಳೆಯರು ಮತ್ತು ಯುವಕರು ಸಹಕಾರಿ ಕ್ಷೇತ್ರದಲ್ಲಿ ಹೆಚ್ಚಾಗಿ ಬರಬೇಕು

**- ಶ್ರೀ ಜಿ. ನಂಜನಗೌಡ**

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಮಾತನಾಡುತ್ತಾ ಇಂದಿನ ಕೇಂದ್ರ ಸಹಕಾರ ಮಂತ್ರಿಗಳಾದ ಸನ್ಮಾನ್ಯ ಶ್ರೀ ಅಮಿತ ಶಾ ರವರು ಹೇಳಿದಂತೆ ಈ ಸಹಕಾರವನ್ನು ಅಭಿವೃದ್ಧಿ ಪಡಿಸಲಿಕ್ಕೆ ಮುಖ್ಯ ವಾಹಿನಿಗೆ ಬರಬೇಕಾದವರು ಮಹಿಳೆಯರು ಮತ್ತು ಯುವಕರು ಎಂದು ಹೇಳಿರುತ್ತಾರೆ, ಈ ಅಕ್ಕಮಹಾದೇವಿ ವಿಶ್ವವಿದ್ಯಾನಿಲಯದಲ್ಲಿ ಎರಡೂ ಒಂದೇ ಕಡೆ, ಮಹಿಳೆಯರು ಮತ್ತು ಯುವಜನತೆ ಸಿಗಲಿಕ್ಕೆ ವಿಶ್ವವಿದ್ಯಾನಿಲಯ ಅವಕಾಶ ಮಾಡಿಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ಹೇಳಿದರು. ಸಹಕಾರಿ ಕ್ಷೇತ್ರಕ್ಕೆ ತುಂಬಾ ಆದ್ಯತೆ ಕೊಟ್ಟು ಮಾತನಾಡಿದ ಎಲ್ಲಾ ಶಿಕ್ಷಕ ವೃಂದಕ್ಕೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು. ಸಹಕಾರಿ ಕ್ಷೇತ್ರ ಭಾರತದಲ್ಲಿ 1904ರಲ್ಲಿ ಆರಂಭಗೊಂಡಿತು. ಕರ್ನಾಟಕ ಸಹಕಾರಿ ಪಿತಾಮಹರಾದ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರಿಂದ ಪ್ರಥಮ ಸಹಕಾರಿ ಸಂಘವು ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಹುಟ್ಟಿತು. ಅದರ ಉದ್ದೇಶ ದೇಶದಲ್ಲಿ ಉಂಟಾದ ಆರ್ಥಿಕ ಅಥವಾ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವುದಾಗಿತ್ತು. ಇವತ್ತು ಬಲಿಷ್ಟವಾದ ಸಹಕಾರಿ ಸಂಸ್ಥೆಗಳು ಭಾರತದಲ್ಲಿವೆ, ಇತ್ತೀಚಿನ ದಿನಗಳಲ್ಲಿ ಸಹಕಾರಿ ಕ್ಷೇತ್ರ ಬಹಳಷ್ಟು ಅಭಿವೃದ್ಧಿಯನ್ನು ಹೊಂದುತ್ತಾ ಸಾಗುತ್ತಿದೆ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸ ಮುಗಿಸಿದ ನಂತರ ಭವಿಷ್ಯದ ಯೋಚನೆಯಲ್ಲಿರುತ್ತೀರಿ ಸರ್ಕಾರಿ ಉದ್ಯೋಗಗಳು ಸಿಗುವುದು ತುಂಬಾ ಕಷ್ಟಸಾಧ್ಯದ ವಿಷಯ, ಆದರೆ ಸಹಕಾರಿ ಕ್ಷೇತ್ರದಲ್ಲಿ ಹಲವಾರು ಉದ್ಯೋಗದ ಅವಕಾಶಗಳು ಲಭ್ಯವಿರುತ್ತವೆ. ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡರೆ ಲಾಭದ ಜೊತೆಗೆ ಸಮಾಜ ಸೇವೆಯನ್ನು ಕೂಡ ಮಾಡುವಂತಹ ಅವಕಾಶ ಈ ಕ್ಷೇತ್ರದಲ್ಲಿ ಲಭ್ಯವಿದೆ. ನಾವು ಸಹಕಾರಿ ಕ್ಷೇತ್ರದಲ್ಲಿ ಬೆಳೆದು ಮುಂದೆ ಸಾವಿರಾರು ಜನರಿಗೆ ಉದ್ಯೋವನ್ನು ಕಲ್ಪಿಸಬಹುದಾಗಿರುತ್ತದೆ. ಸಹಕಾರಿ ಕ್ಷೇತ್ರದಲ್ಲಿ ಯಾವುದೇ ಸ್ವಾರ್ಥವಿಲ್ಲದೆ ಕೆಲಸ ಮಾಡಿದರೇ ಮುಂದೆ ಶ್ರೇಷ್ಠ ಸಹಕಾರಿಯಾಗಿ ಹೊರಹೊಮ್ಮಬಹುದು, ಇದರಲ್ಲಿ ಸಾಕಷ್ಟು ಸವಾಲುಗಳು ಇವೆ ಅದೇ ರೀತಿ ಉನ್ನತ ಯೋಜನೆಗಳು ಕೂಡ ಇದರಲ್ಲಿ ಇರುತ್ತವೆ, ಅನೇಕ ರಾಜಕೀಯ ನಾಯಕರೂ ಕೂಡ ಈ ಸಹಕಾರ ರಂಗದಿಂದ ಬಂದವರೇ ಆಗಿರುತ್ತಾರೆ. ಈ

ಕ್ಷೇತ್ರದಲ್ಲಿ ಒಬ್ಬ ಜನನಾಯಕನಾಗಿ ಹೊರಹೊಮ್ಮಲ್ಲಿಕೆ ಅವಕಾಶವಿದೆ. ಮಹಿಳೆಯರ ಸಬಲೀಕರಣಕ್ಕೆ ಈ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿರುತ್ತವೆ. ಈಗಿನ ಯುವಜನತೆ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುರಿಂದ ಲಾಭವನ್ನು ಹೊಂದುವುದರ ಜೊತೆಗೆ ಸಮಾಜದ ಸೇವೆಯನ್ನು ಮಾಡಬಹುದಾಗಿರುತ್ತದೆ, ತಾವೆಲ್ಲ ಯುವಜನರು ಹಾಗೂ ಮಹಿಳೆಯರು ಈ ಸಹಕಾರಿ ಕ್ಷೇತ್ರದ ಮಾಹಿತಿ ಪಡೆಯಬೇಕು, ತಮ್ಮನ್ನೂ ಸಹ ಈ ಕ್ಷೇತ್ರಕ್ಕೆ ಪರಿಚಯಿಸಬೇಕು ಎನ್ನುವ ಉದ್ದೇಶದಿಂದ ಇವತ್ತು 'ಯುವಜನ ಹಾಗೂ ಸಹಕಾರ' ವಿಷಯದ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ, ಇವತ್ತಿನ ಈ ಸಂವಾದ ಕಾರ್ಯಕ್ರಮದಲ್ಲಿ ಎಲ್ಲರೂ ಕ್ರೀಯಾಶೀಲತೆಯಿಂದ ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆಯಿರಿ ಎಂದು ಹೇಳಿದರು.



## ಐತಿಹಾಸಿಕ ಕಾರ್ಯಕ್ರಮ - ಶ್ರೀ ಶಂಕರಗೌಡ ಸೋಮನಾಳ

ಶ್ರೀ ಶಂಕರಗೌಡ ಸೋಮನಾಳ, ಕೆ.ಎ.ಎಸ್. ಮಾನ್ಯ ಕುಲಸಚಿವರು ಇವರು ಮಾತನಾಡುತ್ತಾ ಇವತ್ತಿನ ಈ ಕಾರ್ಯಕ್ರಮ ಒಂದು ಐತಿಹಾಸಿಕ ಕಾರ್ಯಕ್ರಮವಾಗಿದೆ. ಸಹಕಾರ ಮೊದಲು ನಮ್ಮ ಮನೆಯಿಂದಲೇ ಆರಂಭವಾಗುತ್ತದೆ. ಈ ಸಹಕಾರಿ ಸಂಘದ ಮೂಲ ಉದ್ದೇಶವೆಂದರೆ ಎಲ್ಲಾ ಸದಸ್ಯರು ಸೇರಿ ಹಣಕಾಸಿನ ನೆರವನ್ನು ಪಡೆದುಕೊಂಡು ಸಾಂಸ್ಥಿಕ ರೂಪವನ್ನು ತರುವುದೇ ಸಹಕಾರ ಸಂಘ ಎಂದರು.



## ನಿರುದ್ಯೋಗ ನಿವಾರಣೆ ಸಹಕಾರ ಕ್ಷೇತ್ರದಿಂದ ಸಾಧ್ಯ - ಶ್ರೀ ರಾಮನಗೌಡ ಬ. ಪಾಟೀಲ

ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಾಮನಗೌಡ ಬ. ಪಾಟೀಲ ಇವರು ಮಾತನಾಡುತ್ತಾ ಸಹಕಾರ ಚಳುವಳಿಯು ಸ್ವಾತಂತ್ರ್ಯ ಪೂರ್ವ 1844ರಲ್ಲಿ ಆರಂಭವಾಯಿತು, 1905 ರಲ್ಲಿ ಭಾರತದಲ್ಲಿ ಪ್ರಥಮ ಸಹಕಾರಿ ಸಂಘ ಆರಂಭಗೊಂಡಿತು. ಸಹಕಾರಿ ಕ್ಷೇತ್ರದಲ್ಲಿ ನಿರುದ್ಯೋಗವನ್ನು ಹೋಗಲಾಡಿಸಬಹುದು, ಸಾಕಷ್ಟು ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟ ಕ್ಷೇತ್ರ ಇದಾಗಿದೆ. ಇವತ್ತು ಕರ್ನಾಟಕದಲ್ಲಿ ಸುಮಾರು ಆರು ಸಾವಿರಕ್ಕೂ ಹೆಚ್ಚು ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿವೆ. ಸರಿ ಸುಮಾರು ಎಂಭತ್ತು ಸಾವಿರ ಜನ ಉದ್ಯೋಗ ಪಡೆದುಕೊಂಡಿರುತ್ತಾರೆ. ಇದರಲ್ಲಿ ಮುನ್ನಡೆಯಲು ಸಾಕಷ್ಟು ಅವಕಾಶಗಳು ಲಭ್ಯವಿರುತ್ತವೆ, ಆದ್ದರಿಂದ ಯುವಜನತೆ, ಮಹಿಳೆಯರು ಈ ಕ್ಷೇತ್ರಕ್ಕೆ ಬರಬೇಕು. ಮಹಿಳೆಯರು ಸಹಕಾರಿ ಕ್ಷೇತ್ರದ ಮೂಲಕ ಮುಖ್ಯವಾಹಿನಿಗೆ ಬರಬೇಕು. ಇಲ್ಲಿರುವ ಪ್ರತಿಯೊಬ್ಬ ಮಹಿಳೆಯು ಸಹಕಾರಿಗಳಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ವಂದನಾರ್ಪಣೆಯನ್ನು ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರಾದ ಡಾ॥ ಸುರೇಶ ಕೆ.ಪಿ. ಇವರು ನಡೆಸಿಕೊಟ್ಟರು.

ಉಪನ್ಯಾಸ : 'ಸಹಕಾರ ಕ್ಷೇತ್ರದ ಪರಿಚಯ ಹಾಗೂ ಯುವಕರ ಪಾತ್ರ' ವಿಷಯದ ಕುರಿತು ಡಾ. ಎ.ಆರ್. ಶ್ರೀನಾಥ್, ಮಾನ್ಯ ನಿರ್ದೇಶಕರು (ನಿ.), ನ್ಯಾಷನಲ್ ಕೋ–ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ, ನವದೆಹಲಿ ಇವರು ಉಪನ್ಯಾಸ ನೀಡಿದರು.

## ಸಂವಾದ ಕಾರ್ಯಕ್ರಮ:




ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ವಹಿಸಿದ್ದರು. ಶ್ರೀ ಶಿವಶಂಕರ ಸ್ವಾಮಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ವಿಜಯಪುರ, ಪ್ರೊ. ಆರ್.ವಿ. ಗಂಗಶೆಟ್ಟಿ, ಮಾನ್ಯ ಮುಖ್ಯಸ್ಥರು ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ್ ಇಂಡಿ, ಸಂಯುಕ್ತ ಸಹಕಾರಿಯ ತರಬೇತಿ ಸಲಹೆಗಾರರಾದ ಶ್ರೀ ವಿ.ಜೆ. ಕಾರಕೂನ, ಡಾ. ಎ.ಆರ್. ಶ್ರೀನಾಥ್, ಮಾನ್ಯ ನಿರ್ದೇಶಕರು (ನಿ.), ನ್ಯಾಷನಲ್ ಕೋ–ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ, ನವದೆಹಲಿ, ಶ್ರೀ ಕೆ.ಎನ್. ರಮೇಶ, ಮಾನ್ಯ ಸ್ಥಾನಿಕ ಸಂಪಾದಕರು ವಿಜಯವಾಣಿ ದಿನಪತ್ರಿಕೆ ಹಾಗೂ ಡಾ. ಸುರೇಶ ಕೆ.ಪಿ. ಮಾನ್ಯ ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇವರುಗಳು ಭಾಗವಹಿಸಿದ್ದರು.

## “ಕ್ಯಾಂಪಸ್ ಕೋ-ಆಪರೇಟಿವ್” ಪ್ರವರ್ತಕರ ಸಭೆ ಮುಖ್ಯ ಪ್ರವರ್ತಕರಾಗಿ ಪ್ರೊ. ಆರ್. ವಿ ಗಂಗಶೆಟ್ಟಿ ಆಯ್ಕೆ



ಮಧ್ಯಾಹ್ನದ ಅವಧಿಯಲ್ಲಿ ಯುವಜನ ಹಾಗೂ ಸಹಕಾರ ಕುರಿತು ಪ್ರವರ್ತಕರ ಸಭೆಯನ್ನು ಪ್ರೊ. ಆರ್.ವಿ. ಗಂಗಶೆಟ್ಟಿ, ಮಾನ್ಯ ಮುಖ್ಯಸ್ಥರು ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಯಿತು. ಸಭೆಯಲ್ಲಿ ವಿಶ್ವವಿದ್ಯಾನಿಲಯದ ಡಾ॥ ಸುರೇಶ ಕೆ.ಪಿ. ಡಾ. ಎ.ಆರ್. ಶ್ರೀನಾಥ್, ಮಾನ್ಯ ನಿರ್ದೇಶಕರು (ನಿ.), ನ್ಯಾಷನಲ್ ಕೋ–ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ, ನವದೆಹಲಿ, ಸಂಯುಕ್ತ ಸಹಕಾರಿಯ ಮಾನ್ಯ ತರಬೇತಿ ಸಲಹೆಗಾರರಾದ ಶ್ರೀ ವಿ.ಜೆ.ಕಾರಕೂನ, ತರಬೇತಿ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್, ಶ್ರೀಮತಿ ಪ್ರತಿಭಾ ಮಠ, ಸಹಾಯಕರಾದ ಶ್ರೀ ಮಲ್ಲಿನಾಥ ಇವರುಗಳು ಹಾಗೂ ವಿಶ್ವವಿದ್ಯಾನಿಲಯದ ಹಲವು ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕ್ಯಾಂಪಸ್ ಕೋ ಆಪರೇಟಿವ್ ಸೌಹಾರ್ದ ಸಹಕಾರಿಯ ಮುಖ್ಯ ಪ್ರವರ್ತಕರಾಗಿ ಪ್ರೊ. ಆರ್.ವಿ ಗಂಗಶೆಟ್ಟಿ ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇವರು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಭೆಯ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್, ಇವರು ಹಾಗೂ ವಂದನಾರ್ಪಣೆಯನ್ನು ಶ್ರೀಮತಿ ಪ್ರತಿಭಾ ಮಠ ಇವರು ನೆರವೇರಿಸಿದರು.



ಯುವಜನ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರು

## ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ



**ಕಲಬುರಗಿ :** ದಿನಾಂಕ 17.09.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ನಿಮಿತ್ಯ ಧ್ವಜಾರೋಹಣವನ್ನು ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರು ಮತ್ತು ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಸಿದ್ರಾಮಪ್ಪ ಬಿ. ಹರಸೂರು ರವರು ನೆರವೇರಿಸಿ ಮಾತನಾಡುತ್ತ ಸ್ವಾತಂತ್ರ ದೇಶದಲ್ಲಿ ಸ್ವಾತಂತ್ರ ಪಡೆದ ನಾಡು ಕಲ್ಯಾಣ ಕರ್ನಾಟಕ ಭಾಗ, ನಮ್ಮ ದೇಶದ ಸ್ವಾತಂತ್ರಕ್ಕಾಗಿ ನಮ್ಮ ಕಲ್ಯಾಣ ಕರ್ನಾಟಕ ಭಾಗದ ಹಲವು ನಾಯಕರು ಹೋರಾಡಿ ಸ್ವಾತಂತ್ರ ಪಡೆದರು. ಆದರೆ ಇಂದಿನ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಅಗಸ್ಟ 15, 1947 ರಂದು ತ್ರಿವಣ ಧ್ವಜ ಹಾರಲಿಲ್ಲ ಏಕೆಂದರೆ ಕಲ್ಯಾಣ ಕರ್ನಾಟಕದ ಭಾಗವು ಹೈದರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದು ನಿಜಾಮ ಸಂಸ್ಥಾನ ಭಾರತ ಸರಕಾರಕ್ಕೆ ಸೇರಲು ಹಿಂದೇಟ್ಟು ಹಾಕ್ಕಿದ್ದರಿಂದ ನಿಜಾಮನ ಕುಮ್ಮಕ್ಕಿನಿಂದ ರಜಾಕರ ದೌರ್ಜನ್ಯ ಕಲ್ಯಾಣ ಕರ್ನಾಟಕದ ಭಾಗದ ಮೇಲೆ ಮಾಡಿದರು. ರಜಾಕರ ದೌರ್ಜನ್ಯವನ್ನು ತಡೆಗಟ್ಟಲು ಈ ಭಾಗದ ಜನರು ಆರ್ಯ ಸಮಾಜದ ನೇತೃತ್ವದಲ್ಲಿ ಒಟ್ಟುಗೂಡಿ ಹೋರಾಟ ಜರುಗಿಸಿ ಹಲವರ ಬಲಿದಾನದ ಪರಿಣಾಮ ಹೈದ್ರಾಬಾದ ನಿಜಾಮನಿಂದ ಈ ಭಾಗ ವಿಮೋಚನೆಗೊಂಡಿದೆ ಎಂದು ತಿಳಿಸಿದರು. ನಾವು ಅವರನ್ನು ಸ್ಮರಿಸಿಕೊಂಡು ಕಲ್ಯಾಣ ಕರ್ನಾಟಕ ವಿಮೋಚನೆ ದಿನಾಚರಣೆ ಇನ್ನು ವಿಜೃಂಭಣೆಯೊಂದಿಗೆ ಆಚರಿಸೋಣ ಎಂದರು. ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ರವರು ಮಾತನಾಡುತ್ತಾ ಭಾರತದ ಅಂದಿನ ಮಾನ್ಯ ಗೃಹಮಂತ್ರಿಗಳಾದ ಶ್ರೀ ಸರ್ದಾರ ವಲ್ಲಭಭಾಯಿ ಪಟೇಲ ರವರ ದಿಟ್ಟ ನಿರ್ಧಾರದಿಂದ ಜರುಗಿದ ಆಪರೇಷನ್ ಪೋಲೋ ಕಾರ್ಯಾಚರಣೆಯ ಮೂಲಕ ಕಲ್ಯಾಣ ಕರ್ನಾಟಕ (ಹೈದ್ರಾಬಾದ ಕರ್ನಾಟಕ) ಪ್ರದೇಶವನ್ನು ಅಂದಿನ ನಿಜಾಮರ ಮತ್ತು ರಜಾಕಾರ ದಬ್ಬಾಳಿಕೆಯಿಂದ ಸ್ವತಂತ್ರ್ಯಗೊಳಿಸಿ 17 ಸೆಪ್ಟೆಂಬರ್ 1948 ರಂದು ಭಾರತದ ಒಕ್ಕೂಟಕ್ಕೆ ಸೇರಿದ ಸುದಿನವನ್ನು ಕಲ್ಯಾಣ ಕರ್ನಾಟಕ ವಿಮೋಚನಾ ದಿನವನ್ನಾಗಿ ಆಚರಿಸಲಾಗುತ್ತಿದೆ. ನಾವೆಲ್ಲ ಸ್ವಾತಂತ್ರ ಹೋರಾಟಗಾರರ ಆದರ್ಶ ಪಾಲಿಸೋಣ ಎಂದರು. ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಮತ್ತು ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# "ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ" ಕೋರ್ಸಿನ ಭೌತಿಕ ಸಂಪರ್ಕ ವರ್ಗಗಳು (ಕಂಟ್ಯಾಕ್ಟ ಕ್ಲಾಸುಗಳು)



**ಬೆಂಗಳೂರು :** ದಿನಾಂಕ 14 ಹಾಗೂ 15ನೇ ಸೆಪ್ಟೆಂಬರ್ 2024ರಂದು "ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಸಂಪರ್ಕ ವರ್ಗವನ್ನು ಆಯೋಜಿಸಲಾಗಿತ್ತು. ಅದರಂತೆ ದಿನಾಂಕ 14.09.2024ರಂದು ಉದ್ಘಾಟನಾ ಕಾರ್ಯಕ್ರಮವನ್ನು ಡಿಸಿಬಿಎಂ ಕೋರ್ಸಿನ ಅಭ್ಯರ್ಥಿಯಾದ ಶ್ರೀಮತಿ ಪ್ರಿಯಾ ಎಸ್. ರವರು ಪ್ರಾರ್ಥನೆಯನ್ನು ನೆರವೇರಿಸುವ ಮೂಲಕ ಪ್ರಾರಂಭಿಸಲಾಯಿತು.

ಉದ್ಘಾಟಕರಾಗಿ ಪ್ರೊ. ಡಾ. ಸುರೇಶ ವಿ. ನಾಡಗೌಡರ, ಮಾನ್ಯ ಕುಲಪತಿಗಳು (ಪ್ರ) ಹಾಗೂ ಕುಲಸಚಿವರು, ಕ.ರಾ.ಗ್ರಾ.ಪಂ.ರಾ. ವಿಶ್ವವಿದ್ಯಾಲಯ, ಗದಗ ಇವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿಕೊಂಡಿದ್ದರು.

ಪ್ರಾರಂಭದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿ ಗಣ್ಯರನ್ನು ಸ್ವಾಗತಿಸಿ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ತರಬೇತಿ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ಇವರು ನಡೆಸಿಕೊಟ್ಟರು.

ಉಪನ್ಯಾಸದ ಅವಧಿ : ದಿನಾಂಕ 14.09.2024ರಂದು ವಿಷಯ 01 ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆಯ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನಡೆಸಿಕೊಟ್ಟರು. ಮಧ್ಯಾಹ್ನದ ಅವಧಿಯಲ್ಲಿ ವಿಷಯ 02 ಸಹಕಾರ ಪತ್ತು ವ್ಯವಸ್ಥೆಗೆ ಬಗ್ಗೆ ಸಂಯುಕ್ತ ಸಹಕಾರಿಯ ಮಾನ್ಯ ತರಬೇತಿ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ಇವರು ನಡೆಸಿಕೊಟ್ಟರು.

ದಿನಾಂಕ 15.09.2024ರಂದು ವಿಷಯ 03 ಸಹಕಾರ ಕಾಯ್ದೆಗಳು ವಿಷಯದ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಬೆಳಗಾವಿ & ಕಲಬುರಗಿ ಪ್ರಾಂತದ ಟಾಸ್ಕ್ ಫೋರ್ಸ್ ವಿಭಾದ ಅಧಿಕಾರಿಯಾದ ಶ್ರೀಮತಿ ಶೋಭ ಆರ್. ರವರು ಉಪನ್ಯಾಸ ನೀಡಿದರು. ಮಧ್ಯಾಹ್ನ ಅವಧಿಯಲ್ಲಿ ವಿಷಯ 04 ಡಿಜಿಟಲ್ ಬ್ಯಾಂಕಿಂಗ್ ಕಾರ್ಯಚಾರಣೆಗಳು ವಿಷಯದ ಕುರಿತು ಎಸ್‌ಬಿಐ ಬ್ಯಾಂಕಿನ ನಿವೃತ್ತ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಆರ್.ಎಸ್. ಪ್ರಕಾಶ್ ರವರು ಉಪನ್ಯಾಸ ನೀಡಿದರು. ಬೆಂಗಳೂರು ಕೇಂದ್ರದಲ್ಲಿ ಒಟ್ಟು 57 ಅಭ್ಯರ್ಥಿಗಳು ಸಂಪರ್ಕ ವರ್ಗದಲ್ಲಿ ಭಾಗವಹಿಸಿದ್ದರು.



**ಬಳ್ಳಾರಿ:** ದಿನಾಂಕ 14 ಹಾಗೂ 15ನೇ ಸೆಪ್ಟೆಂಬರ್ 2024ರಂದು ಸೈಂಟ್ ಆಥೋನಿ ಪಬ್ಲಿಕ್ ಸ್ಕೂಲ್, ಲಿಂಗರಾಜನಗರ, ಸಿದ್ದೇಶ್ವರ ಪಾರ್ಕ್, ಭಾರತಿ ಕಾಲೋನಿ, ಹುಬ್ಬಳ್ಳಿ ಇಲ್ಲಿ ಸಂಪರ್ಕ ವರ್ಗವನ್ನು ಆಯೋಜಿಸಲಾಗಿತ್ತು. ದಿನಾಂಕ 14.09.2024ರಂದು ಉದ್ಘಾಟನೆಯನ್ನು ಸಂಜಯ್ ಗಾಂಧಿ ಪಾಲಿಟೆಕ್ನಿಕ್ ಕಾಲೇಜ್, ಬಳ್ಳಾರಿ ಇದರ ಮಾನ್ಯ ಪ್ರಾಂಶುಪಾಲರಾದ ಶ್ರೀ ಗೌರಿಶಂಕರ್ ಹಿರೇಮಠ್ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯ ಶೆಟ್ಟರವರು ವಹಿಸಿದರು.

ಮುಖ್ಯ ಅತಿಥಿಗಳಾಗಿ ಮೇಘ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣ ರವರು ಹಾಗೂ ಪ್ರಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆ ರವರು ನಡೆಸಿಕೊಟ್ಟರು.

ಉಪನ್ಯಾಸದ ಅವಧಿ : ದಿನಾಂಕ 14.09.2024ರಂದು ವಿಷಯ 02 ಸಹಕಾರ ಪತ್ತು ವ್ಯವಸ್ಥೆಯ ಕುರಿತು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರ‍್ಯಾಕಲೆ ಇವರು ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ವಿಷಯ 01 ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆಯ ಬಗ್ಗೆ ಶ್ರೀಮತಿ ಸಾವಿತ್ರಿ ಮಸ್ಕಿ, ಮಾನ್ಯ ಪ್ರಾಧ್ಯಾಪಕರು, ಬಳ್ಳಾರಿ ಇವರು ನಡೆಸಿಕೊಟ್ಟರು. ದಿನಾಂಕ 15.09.2024ರಂದು ವಿಷಯ 03 ಸಹಕಾರ ಕಾಯ್ದೆಗಳು ವಿಷಯದ ಕುರಿತು ಸಂಯುಕ್ತ ಸಹಕಾರಿಯ ಸಿಬ್ಬಂದಿಯಾದ ಶ್ರೀ ಶ್ರೀಧರ ಮಟೋಳ್ಳಿ ರವರು ಉಪನ್ಯಾಸ ನೀಡಿದರು. ಮಧ್ಯಾಹ್ನ ಅವಧಿಯಲ್ಲಿ ವಿಷಯ 04 ಡಿಜಿಟಲ್ ಬ್ಯಾಂಕಿಂಗ್ ಕಾರ್ಯಚಾರಣೆಗಳು ವಿಷಯದ ಕುರಿತು ಡಾ. ಸಾತ್ವಿಕ್, ಮಾನ್ಯ ಪ್ರಾಧ್ಯಾಪಕರು ಇವರು ಉಪನ್ಯಾಸ ನೀಡಿದರು.

ಬಳ್ಳಾರಿ ಕೇಂದ್ರದಲ್ಲಿ ಒಟ್ಟು 52 ಅಭ್ಯರ್ಥಿಗಳು ಸಂಪರ್ಕ ವರ್ಗದಲ್ಲಿ ಭಾಗವಹಿಸಿದ್ದರು.




**ಚಿಕ್ಕೋಡಿ :** ದಿನಾಂಕ 14 ಹಾಗೂ 15ನೇ ಸೆಪ್ಟೆಂಬರ್ 2024ರಂದು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ ಇಲ್ಲಿ ಸಂಪರ್ಕ ವರ್ಗವನ್ನು ಆಯೋಜಿಸಲಾಗಿತ್ತು. ದಿನಾಂಕ 14.09.2024ರಂದು ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಜಗದೀಶ ಕವಟಗಿಮಠ, ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಷಡಕ್ಷರಿ ಮುಗೇರಿ, ಉಪಾಧ್ಯಕ್ಷರು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ, ಡಾ. ಎ.ಆರ್. ಶ್ರೀನಾಥ ಮಾನ್ಯ ನಿರ್ದೇಶಕರು (ನಿ.) ಎನ್.ಸಿ.ಯು.ಐ., ನವದೆಹಲಿ ಹಾಗೂ ಶ್ರೀ ಬಸವರಾಜ ಹೊಂಗಲ, ಪ್ರಾಂತೀಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.

ಉಪನ್ಯಾಸದ ಅವಧಿ : ದಿನಾಂಕ 14.09.2024ರಂದು ಮೊದಲನೇಯ ಅವಧಿಗೆ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ವಿಷಯದ ಕುರಿತು ಡಾ. ಎ.ಆರ್. ಶ್ರೀನಾಥ, ಮಾನ್ಯ ನಿರ್ದೇಶಕರು (ನಿ.) ಎನ್.ಸಿ.ಯು.ಐ., ನವದೆಹಲಿ ಎರಡನೇಯ ಅವಧಿಗೆ ಸಹಕಾರಿ ಪತ್ತು ವ್ಯವಸ್ಥೆ ವಿಷಯದ ಕುರಿತು ಶ್ರೀ ಚನ್ನಬಸವಸ್ವಾಮಿ, ತರಬೇತುದಾರರು ಧಾರವಾಡ ರವರು ಉಪನ್ಯಾಸ ನೀಡಿದರು. ದಿನಾಂಕ 15.09.2024ರಂದು ಮೊದಲನೇಯ ಅವಧಿಗೆ ಸಹಕಾರ ಕಾಯ್ದೆಗಳು ವಿಷಯದ ಕುರಿತು ಶ್ರೀ ಶ್ರೀಕಾಂತ ಬರುವೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಮ್ಯಾಮ್ಕೋಸ್, ಶಿವಮೊಗ್ಗ ಎರಡನೇಯ ಅವಧಿಗೆ ಡಿಜಿಟಲ್ ಬ್ಯಾಂಕಿಂಗ ಕಾರ್ಯಚರಣೆಗಳು ವಿಷಯದ ಕುರಿತು ಶ್ರೀ ಅಭಯಕುಮಾರ ಗಸ್ತಿ, ಎಂ.ಕಾಂ ಹಾಗೂ ಡಿ.ಸಿ.ಬಿ.ಎಂ ಸಂಯೋಜಕರು ಇವರು ಉಪನ್ಯಾಸ ನೀಡಿದರು. ಚಿಕ್ಕೋಡಿ ಕೇಂದ್ರದಲ್ಲಿ ಒಟ್ಟು 27 ಅಭ್ಯರ್ಥಿಗಳು ಸಂಪರ್ಕ ವರ್ಗದಲ್ಲಿ ಭಾಗವಹಿಸಿದ್ದರು.




**ಹುಬ್ಬಳ್ಳಿ :** ದಿನಾಂಕ 14 ಹಾಗೂ 15ನೇ ಸೆಪ್ಟೆಂಬರ್ 2024ರಂದು ಸೆಂಟ್ ಆಂಥೋನಿ ಶಾಲೆ, ಹುಬ್ಬಳ್ಳಿ ಇಲ್ಲಿ ಸಂಪರ್ಕ ವರ್ಗವನ್ನು ಆಯೋಜಿಸಲಾಗಿತ್ತು. ದಿನಾಂಕ 14.09.2024ರಂದು ಸಂಪರ್ಕ ವರ್ಗದ ಉದ್ಘಾಟನೆಯನ್ನು ಶ್ರೀ ರಾಮಚಂದ್ರ ಚವ್ಹಾಣ, ಮಾನ್ಯ ನಿರ್ದೇಶಕರು ಶ್ರೀ ಮಲ್ಲಿಕಾರ್ಜನ್ ಸೌಹಾರ್ದ ಸಹಕಾರಿ ನಿ., ಧಾರವಾಡ ಇವರು ನೆರವೇ-ರಿಸಿದರು. ಮುಖ್ಯ ಅತಿಥಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಸ್.ಜಿ. ಜೋಶಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.) ಮತ್ತು ಶ್ರೀ ಗಂಗಾರಾಮ ಸಗ್ಗು ಕೊಳಾಪ್ಪೆ ಅಧಿಕಾರಿ ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಅಧಿಕಾರಿಗಳಾದ ಶ್ರೀ ಗಂಗಾರಾಮ ಕೊಳಾಪ್ಪೆ ಹಾಗೂ ವಂದನಾರ್ಪಣೆಯನ್ನು ಸಹಾಯಕರಾದ ಶ್ರೀ ರವಿ ಹಲಗತ್ತಿ ಇವರು ನಡೆಸಿಕೊಟ್ಟರು.

ಉಪನ್ಯಾಸದ ಅವಧಿ : ದಿನಾಂಕ 14.09.2024ರಂದು ಮೊದಲನೇಯ ಅವಧಿಗೆ ಸಹಕಾರ ಪತ್ತು ವ್ಯವಸ್ಥೆ ವಿಷಯದ ಕುರಿತು ಶ್ರೀ ಎಸ್.ಜಿ. ಜೋಶಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.) ಎರಡನೇಯ ಅವಧಿಗೆ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ವಿಷಯದ ಕುರಿತು ಶ್ರೀ ಗಂಗಾರಾಮ ಕೊಳಾಪ್ಪೆ, ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಇವರು ಉಪನ್ಯಾಸ ನೀಡಿದರು. ದಿನಾಂಕ 15.09.2024ರಂದು ಮೊದಲನೇಯ ಅವಧಿಗೆ ಸಹಕಾರ ಕಾಯ್ದೆಗಳು ವಿಷಯದ ಕುರಿತು ಶ್ರೀ ಮಹಾಂತಪ್ಪ ಅಧಿಕಾರಿ ಕ.ರಾ.ಸೌ.ಸಂ.ಸ.ನಿ., ಹಾಗೂ ಎರಡನೇಯ ಅವಧಿಗೆ ಡಿಜಿಟಲ್ ಬ್ಯಾಂಕಿಂಗ್ ಕಾರ್ಯಚರಣೆಗಳು ವಿಷಯದ ಕುರಿತು ಡಾ. ಪ್ರಶಾಂತ ಹೆಚ್. ಮೇರವಾಡೆ ಉಪನ್ಯಾಸಕರು ಕ.ರಾ.ಗ್ರಾ.ಪಂ.ರಾ. ವಿಶ್ವವಿದ್ಯಾಲಯ, ಗದಗ ಇವರುಗಳು ಉಪನ್ಯಾಸ ನೀಡಿದರು. ಹುಬ್ಬಳ್ಳಿ ಕೇಂದ್ರದಲ್ಲಿ ಒಟ್ಟು 32 ಅಭ್ಯರ್ಥಿಗಳು ಸಂಪರ್ಕ ವರ್ಗದಲ್ಲಿ ಭಾಗವಹಿಸಿದ್ದರು.



**ವಿಜಯಪುರ :** ದಿನಾಂಕ 14 ಹಾಗೂ 16ನೇ ಸೆಪ್ಟೆಂಬರ್ 2024ರಂದು ಜೆ.ಎಸ್.ಎಸ್. ಆಸ್ಪತ್ರೆ, ಹೈಪರ್ ಮಾರ್ಟ್, ವಿಜಯಪುರ ಇಲ್ಲಿ ಸಂಪರ್ಕ ವರ್ಗವನ್ನು ಆಯೋಜಿಸಲಾಗಿತ್ತು. ದಿನಾಂಕ 14.09.2024ರಂದು ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ್ ಇಂಡಿ ರವರು ನೆರವೇರಿಸಿದ್ದರು. ಮುಖ್ಯ ಅತಿಥಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕರಾದ ಶ್ರೀ ಮಹಾಂತಪ್ಪ ಎಸ್.ಎಂ. ಹಾಗೂ ಶ್ರೀ ಶ್ರೀಕಾಂತ್ ಬರುವೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು,

ಮ್ಯಾಮಕೋಸ್ ಶಿವಮೊಗ್ಗ ಇವರು ಭಾಗವಹಿಸಿದ್ದರು.

ಅತಿಥಿಗಳ ಸ್ವಾಗತವನ್ನು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕಾಂತ ಎನ್. ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕರಾದ ಶ್ರೀ ಮಹಾಂತಪ್ಪ ಎಸ್.ಎಮ್. ನಡೆಸಿಕೊಟ್ಟರು.

ಉಪನ್ಯಾಸದ ಅವಧಿ : ದಿನಾಂಕ 14.09.2024ರಂದು ಮೊದಲನೇಯ ಅವಧಿಗೆ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ವಿಷಯದ ಕುರಿತು ಶ್ರೀ ಮಹಾಂತಪ್ಪ ಎಸ್.ಎಮ್. ಹಾಗೂ ಎರಡನೇಯ ಅವಧಿಗೆ ಸಹಕಾರ ಕಾಯ್ದೆಗಳು ವಿಷಯದ ಕುರಿತು ಶ್ರೀ ಶ್ರೀಕಾಂತ ಬರುವೆ ಇವರುಗಳು ಉಪನ್ಯಾಸ ನೀಡಿದರು. ದಿನಾಂಕ 16.09.2024ರಂದು ಮೊದಲನೇಯ ಅವಧಿಗೆ ಸಹಕಾರ ಪತ್ತು ವ್ಯವಸ್ಥೆ ವಿಷಯದ ಕುರಿತು ಶ್ರೀ ಚನ್ನಬಸವಸ್ವಾಮಿ ಪ್ರಾಧ್ಯಾಪಕರು ಅರ್ಥಶಾಸ್ತ್ರ ವಿಭಾಗ ಹಾಗೂ ಎರಡನೇಯ ಅವಧಿಗೆ ಡಿಜಿಟಲ್ ಬ್ಯಾಂಕಿಂಗ್ ಕಾರ್ಯಾಚರಣೆಗಳು ವಿಷಯದ ಕುರಿತು ಶ್ರೀ ಎಸ್.ಜಿ. ಕುಲಕರ್ಣಿ, ಬ್ಯಾಂಕಿಂಗ್ ತಜ್ಞರು ಇವರುಗಳು ಉಪನ್ಯಾಸ ನೀಡಿದರು. ವಿಜಯಪುರ ಕೇಂದ್ರದಲ್ಲಿ ಒಟ್ಟು 34 ಅಭ್ಯರ್ಥಿಗಳು ಸಂಪರ್ಕ ವರ್ಗದಲ್ಲಿ ಭಾಗವಹಿಸಿದ್ದರು.

## ದಕ್ಷಿಣ ಕನ್ನಡ ನೂತನ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ



**ದಕ್ಷಿಣ ಕನ್ನಡ :** ದಿನಾಂಕ 05.09.2024 ರಂದು ದಕ್ಷಿಣ ಕನ್ನಡ ಜಿಲ್ಲಾ ಸಂಪರ್ಕ ಕಛೇರಿಯನ್ನು ಮಂಗಳೂರು ನಗರದ ಜನತಾ ಭಜಾರ್ ಇದರ ಎರಡನೆ ಮಹಡಿಯಲ್ಲಿ ನೂತನ ಜಿಲ್ಲಾ ಸಂಪರ್ಕ ಕಛೇರಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿ ಸಂಘಗಳ ಉಪನಿಬಂಧಕರಾದ ಶ್ರೀ ಎಚ್. ಎನ್ ರಮೇಶ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ, ಶ್ರೀಮತಿ ಭಾರತಿ ಜಿ ಭಟ್. ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್. ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ, ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಭಾಸ್ಕರ್ ದೇವಸ್ಯ, ಒಕ್ಕೂಟ ಸೌಹಾರ್ದ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಲ. ಸುರೇಶ್ ರೈ ರವರು ಉಪಸ್ಥಿತರಿದ್ದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ದಕ್ಷಿಣ ಕನ್ನಡ :** ದಿನಾಂಕ 05.09.2024 ರಂದು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಒಂದು ದಿನದ ವಿಷಯಾದಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಶ್ರೀನಿವಾಸ ಇಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ಕಾರ್ಯಗಾರದ ಉದ್ಘಾಟನೆಯನ್ನು ಸಹಕಾರಿ ಸಂಘಗಳ ಉಪನಿಬಂಧಕರಾದ ಶ್ರೀ ಹೆಚ್.ಎನ್. ರಮೇಶ್ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿದ್ದರು. ಸದರಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್, ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಭಾಸ್ಕರ್ ದೇವಸ್ಯ ಜನತಾ ಭಜಾರ್ ಇದರ ಅಧ್ಯಕ್ಷರಾದ ಶ್ರೀ ಪುರುಷೋತ್ತಮ್ ಭಟ್, ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಲ ಸುರೇಶ್ ರೈ ಮತ್ತು ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಭಾಗವಹಿಸಿದ್ದರು. ಸದರಿ ಕಾರ್ಯಗಾರದ ಪ್ರಥಮ ಅವಧಿಯಲ್ಲಿ ಸಹಕಾರಿ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳು ಹಾಗೂ ಇತ್ತಿಚಿನ ಸೌಹಾರ್ದ ಕಾಯ್ದೆ ತಿದ್ದುಪಡಿಯ ಅಂಶಗಳ ಕುರಿತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ್ ರವರು ಸಹಕಾರಿಗಳಿಗೆ ಮಾಹಿತಿ ನೀಡಿದರು. ನಂತರದ ಅವಧಿಯಲ್ಲಿ ಸಮಾಜದ ಆರ್ಥಿಕ ಅಭಿವೃದ್ಧಿಯಲ್ಲಿ ಸೌಹಾರ್ದ ಸಹಕಾರಿಗಳ ಪಾತ್ರ ಇದರ ಕುರಿತು ಹಿರಿಯ ವಕೀಲರಾದ ಶ್ರೀ ವಸಂತ ಅಡ್ಯಂತಾಯ ಇವರು ಸಹಕಾರಿಗಳೊಂದಿಗೆ ಚರ್ಚೆಯನ್ನು ನಡೆಸಿದರು. ಸದರಿ ಸಭೆಯಲ್ಲಿ 86 ಸೌಹಾರ್ದ ಸಹಕಾ–ರಿಗಳಿಂದ 105 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055
www.souharda.coop, Ph: 080–23378375–80, Email:souharda@souharda.coop

ಸಂಖ್ಯೆ : ಸಂಸ/71ನೇ ಅ.ಭಾ.ಸ.ಸ./2024–25 ದಿನಾಂಕ : 01.10.2024

ಮಾನ್ಯರೇ,

**ವಿಷಯ : 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ವರ್ಷ ರಾಷ್ಟ್ರಾದ್ಯಂತ ನವೆಂಬರ್ 14 ರಿಂದ 20ರ ವರೆಗೆ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ನಡೆಯುತ್ತದೆ. ಅದರಂತೆ ಕರ್ನಾಟಕ ರಾಜ್ಯಾದ್ಯಂತ ಒಂದು ವಾರಗಳ ಕಾಲ ಸಹಕಾರ ಸಪ್ತಾಹದ ಒಂದೊಂದು ದಿನಕ್ಕೂ ಒಂದೊಂದು ವಿಷಯಗಳಿಗೆ ಸಂಬಂಧಿಸಿದಂತೆ, ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಲಾಗುತ್ತಿದೆ.

ಪ್ರಸ್ತುತ ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿ ಇವರು ದಿನಾಂಕ 14 ರಿಂದ 20ನೇ ನವೆಂಬರ್ 2024ರ ವರೆಗೆ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯನ್ನು ಆಚರಿಸಲು ಸೂಚಿಸಲಾಗಿದ್ದು, ಪ್ರತಿ ದಿನದ ವಿಷಯವು ಕೆಳಕಂಡತ್ತಿದೆ.

**71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯ :**
**"ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಘಗಳ ಪಾತ್ರ"**
**"Role of Cooperatives in building 'Viksit Bharat"**

| ದಿನಾಂಕ | ವಿಷಯ |
|---|---|
| 14.11.2024 | ಕೇಂದ್ರ ಸಹಕಾರ ಸಚಿವಾಲಯದ ನೂತನ ಯೋಜನೆಗಳ ಮೂಲಕ ಸಹಕಾರಿ ಚಳುವಳಿಯನ್ನು ಬಲಪಡಿಸುವುದು |
| | Strengthening Cooperation Movement through New Initiatives of Ministry of Cooperation. |
| 15.11.2024 | ಸಹಕಾರ ಕ್ಷೇತ್ರದಲ್ಲಿ ನೂತನ ವಿಷಯಗಳ ಆವಿಷ್ಕಾರ, ತಂತ್ರಜ್ಞಾನ ಹಾಗೂ ಉತ್ತಮ ಆಡಳಿತದ ವ್ಯವಸ್ಥೆ |
| | Innovation, Technology and Good Governance in Cooperatives. |
| 16.11.2024 | ಉದ್ಯಮಶೀಲತೆ, ಕೌಶಲ್ಯ ಅಭಿವೃದ್ಧಿ ಹಾಗೂ ನಿರುದ್ಯೋಗ ನಿವಾರಣೆಯಲ್ಲಿ ಸಹಕಾರಿ ಸಂಘಗಳ ಪಾತ್ರ |
| | The Role of Cooperatives in Fostering Entrepreneurship, Employment, and Skill Development. |
| 17.11.2024 | ಸಹಕಾರಿ ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸುವುದು |
| | Transforming Cooperative Enterprises. |
| 18.11.2024 | ಸಹಕಾರಿಗಳ ಆಂತರಿಕ ಸಹಕಾರವನ್ನು ಬಲಪಡಿಸುವುದು |
| | Strengthening Cooperation Among Cooperatives. |
| 19.11.2024 | ಮಹಿಳೆಯರು, ಯುವಕರು ಹಾಗೂ ಅಬಲವರ್ಗಗಳ ಅಭಿವೃದ್ಧಿಗಾಗಿ ಸಹಕಾರ ಸಂಘಗಳು |
| | Cooperatives for Women, Youth and Weaker Sections |
| 20.11.2024 | ಸುಸ್ಥಿರ ಅಭಿವೃದ್ಧಿ ಸಾಧನೆ ಮತ್ತು ಉತ್ತಮ ವಿಶ್ವ ನಿರ್ಮಾಣದಲ್ಲಿ ಸಹಕಾರಿ ಸಂಘಗಳ ಪಾತ್ರ |
| | Role of Cooperatives in Achieving SDGs and way forward for Better World. |

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಅವಗಾಹನೆಗಾಗಿ ಹಾಗೂ ವ್ಯವಸ್ಥಿತವಾಗಿ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲು ವಿನಂತಿಯೊಂದಿಗೆ ಕಳುಹಿಸಲಾಗಿದೆ.

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

# ಕಲಂ 34ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು ಆಡಳಿತ ಮಂಡಳಿ ಸಭೆ ಮತ್ತು ಸಹಕಾರ ಶಿಕ್ಷಣ ನಿಧಿ ಹಾಗೂ ವಾರ್ಷಿಕ ಶುಲ್ಕಗಳ ಪಾವತಿ ಕುರಿತು ಮತ್ತು ಲೆಕ್ಕಪರಿಶೋಧಕರ ನೇಮಕಾತಿ ವಿಷಯಗಳ ಬಗ್ಗೆ ಕ್ಲಸ್ಟರ್ ಮಟ್ಟದ ತರಬೇತಿ

**ಬೆಳಗಾವಿ : ದಿನಾಂಕ 03.09.2024 ರಂದು** ಬೆಳಿಗ್ಗೆ 11.30 ಕ್ಕೆ ಬೆಳಗಾವಿ ಜಿಲ್ಲೆಯ ಅಥಣಿ ಮತ್ತು ಕಾಗವಾಡ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಗುಜರಾತಿ ಮಂಗಲ ಕಾರ್ಯಾಲಯ ಎಸ್.ಎಸ್. ರೋಡ, ಅಥಣಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 35 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 05.09.2024 ರಂದು** ಬೆಳಿಗ್ಗೆ 11.30 ಕ್ಕೆ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ನಾಗನೂರ ಅರ್ಬನ್ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ., ನಾಗನೂರ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 29 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 05.09.2024 ರಂದು** ಮಧ್ಯಾಹ್ನ 3 ಘಂಟೆಗೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಜಾಗೃತಿ ಅರ್ಬನ್ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ., ಹಾರೂಗೇರಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 33 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 06.09.2024 ರಂದು** ಬೆಳಿಗ್ಗೆ 11.30 ಘಂಟೆಗೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಶ್ರೀ ಸಾಯಿ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 62 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 09.09.2024 ರಂದು** ಬೆಳಿಗ್ಗೆ 11.30 ಘಂಟೆಗೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಯಮಕನಮರಡಿ ಹಾಗೂ ಯಮಕನಮರಡಿ ಸುತ್ತಮುತ್ತಲಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ತರಬೇತಿ ಸಭಾಂಗಣ, ಪ್ರಾಂತೀಯ ಕಛೇರಿ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 41 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 10.09.2024 ರಂದು** ಬೆಳಿಗ್ಗೆ 11.00 ಘಂಟೆಗೆ ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಆಯ್ದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ತರಬೇತಿ ಸಭಾಂಗಣ, ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 26 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 11.09.2024 ರಂದು** ಬೆಳಿಗ್ಗೆ 11.00 ಘಂಟೆಗೆ ಬೆಳಗಾವಿ ಜಿಲ್ಲೆಯ ಖಾನಾಪೂರ, ಬೈಲಹೊಂಗಲ ಹಾಗೂ ಚನ್ನಮ್ಮನ ಕಿತ್ತೂರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ತರಬೇತಿ ಸಭಾಂಗಣ, ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 32 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 12.09.2024 ರಂದು** ಬೆಳಿಗ್ಗೆ 10.30 ಘಂಟೆಗೆ ಬೆಳಗಾವಿ ಜಿಲ್ಲೆಯ ಯರಗಟ್ಟಿ, ಸವದತ್ತಿ ಹಾಗೂ ರಾಮದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಕಿತ್ತೂರ ರಾಣಿ ಚನ್ನಮ್ಮ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ ಶಾಖೆ–ಯರಗಟ್ಟಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 36 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 12.09.2024 ರಂದು** ಬೆಳಿಗ್ಗೆ 11.00 ಘಂಟೆಗೆ ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ (ಸದಸ್ಯತ್ವ ಸಂಖ್ಯೆ–ಬಿಜಿಎಮ್– 0489 ರಿಂದ ಬಿಜಿಎಮ್–0832) ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ತರಬೇತಿ ಸಭಾಂಗಣ, ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 28 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 13.09.2024 ರಂದು** ಬೆಳಿಗ್ಗೆ 10.30 ಘಂಟೆಗೆ ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ (ಸದಸ್ಯತ್ವ ಸಂಖ್ಯೆ ಬಿಜಿಎಮ್–0834 ರಿಂದ ಬಿಜಿಎಮ್–1222) ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ತರಬೇತಿ ಸಭಾಂಗಣ, ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 23 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ವಿಜಯಪುರ : ದಿನಾಂಕ 21.09.2024 ರಂದು** ಬೆಳಿಗ್ಗೆ 10.30 ಕ್ಕೆ ವಿಜಯಪುರ ಜಿಲ್ಲೆಯ ವಿಜಯಪುರ ತಾಲೂಕಿನ ಆಯ್ದ ಸೌಹಾರ್ದ ಸಹಕಾರಿಗಳ (ಬಿಜೆಪಿ–0001 ರಿಂದ ಬಿಜೆಪಿ–0184) ಮುಖ್ಯಕಾರ್ಯ ನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಮಾರ್ಗದರ್ಶಿ

ಕೆರಿಯರ ಅಕಾಡೆಮಿ, ವಿಜಯಪುರದಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 25 ಸಹಕಾರಿಗಳಿಂದ 27 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 23.09.2024 ರಂದು** ಬೆಳಿಗ್ಗೆ 10.30 ಕ್ಕೆ ವಿಜಯಪುರ ಜಿಲ್ಲೆಯ ವಿಜಯಪುರ ತಾಲೂಕಿನ ಆಯ್ದ ಸೌಹಾರ್ದ ಸಹಕಾರಿಗಳ (ಬಿಜೆಪಿ–0185 ರಿಂದ ಬಿಜೆಪಿ–0371) ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಮಾರ್ಗದರ್ಶಿ ಕೆರಿಯರ ಅಕಾಡೆಮಿ, ವಿಜಯಪುರದಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 31 ಸಹಕಾರಿಗಳಿಂದ 33 ಜನ ಮುಖ್ಯ ಕಾರ್ಯನಿರ್ವಾಹಕರು ಹಾಜರಾಗಿದ್ದರು.

**ದಿನಾಂಕ 27.09.2024 ರಂದು** ಬೆಳಿಗ್ಗೆ 10.30ಕ್ಕೆ ವಿಜಯಪುರ ಜಿಲ್ಲೆಯ ವಿಜಯಪುರ ತಾಲ್ಲೂಕಿನ ಆಯ್ದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಮಾರ್ಗದರ್ಶಿ ಕೆರಿಯರ ಅಕಾಡೆಮಿ, ವಿಜಯಪುರದಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಾಮನಗೌಡ ಪಾಟೀಲ ಇವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಅಮರನಾಥ ಬಿರಾದಾರ, ಹಿರಿಯ ಸಹಕಾರಿಗಳಯ ಆಗಮಿಸಿದ್ದರು. ಸದರಿ ತರಬೇತಿಯಲ್ಲಿ 28 ಸಹಕಾರಿಗಳಿಂದ 31 ಜನ ಮುಖ್ಯಕಾರ್ಯನಿರ್ವಾಹಕರು ಹಾಜರಾಗಿದ್ದರು.

**ತುಮಕೂರು :** ದಿನಾಂಕ 01–10–2024ರಂದು ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಉದಯರವಿ ಸೌಹಾರ್ದ ಸಹಕಾರಿ ಸಂಗ ನಿ, ತಿಪಟೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಜಣ್ಣನವರು ಉದ್ಘಾಟಿಸಿದರು. 14 ಸೌಹಾರ್ದ ಸಹಕಾರಿಗಳಿಂದ 18 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

## "2ನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ" ಕೋರ್ಸಿನ 1ನೇ ಸೆಮಿಸ್ಟರ್‌ನ ಪರೀಕ್ಷೆಯ ವರದಿ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆಸುತ್ತಿರುವ "ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ" ಕೋರ್ಸಿನ 1ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು ದಿನಾಂಕ: 28 ಹಾಗೂ 29ನೇ ಸೆಪ್ಟೆಂಬರ್ 2024ರಂದು ಬೆಂಗಳೂರು, ಬಳ್ಳಾರಿ, ಚಿಕ್ಕೋಡಿ, ಹುಬ್ಬಳ್ಳಿಯಲ್ಲಿ ಹಾಗೂ ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು.

ದಿನಾಂಕ 28.09.2024ರಂದು ಬೆಳಿಗ್ಗೆ 10.30ರಿಂದ 12.30ರ ವರೆಗೆ ವಿಷಯ 01: ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ಹಾಗೂ ಮಧ್ಯಾಹ್ನ 02.00ರಿಂದ 04.00ರ ವರೆಗೆ ವಿಷಯ 02 : ಸಹಕಾರಿ ಪತ್ತು ವ್ಯವಸ್ಥೆ ವಿಷಯದ ಕುರಿತು ಪರೀಕ್ಷೆಯನ್ನು ಆಯೋಜಿಸಲಾಗಿತ್ತು.

ದಿನಾಂಕ 29.09.2024ರಂದು ಬೆಳಿಗ್ಗೆ 10.30ರಿಂದ 12.30ರ ವರೆಗೆ ವಿಷಯ 03: ಸಹಕಾರ ಕಾಯ್ದೆಗಳು ಹಾಗೂ ಮಧ್ಯಾಹ್ನ 02.00ರಿಂದ 04.00ರ ವರೆಗೆ ವಿಷಯ 04 : ಡಿಜಿಟಲ್ ಬ್ಯಾಂಕಿಂಗ್ ಕಾರ್ಯಾಚರಣೆಗಳು ವಿಷಯದ ಕುರಿತು ಪರೀಕ್ಷೆಯನ್ನು ಆಯೋಜಿಸಲಾಗಿತ್ತು.

**ಬೆಂಗಳೂರು ಕೇಂದ್ರ :** ಡಿಸಿಬಿಎಂ ಕೋರ್ಸಿನ 1ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು "ಸೌಹಾರ್ದ ಸಹಕಾರಿ ಸೌಧ", 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ದಿನಾಂಕ 28.09.2024ರಂದು ಬೆಂಗಳೂರು ಕೇಂದ್ರದಲ್ಲಿ ಒಟ್ಟು 72 ಅಭ್ಯರ್ಥಿಗಳು ಹಾಜರಾಗಿದ್ದರು ಹಾಗೂ ದಿನಾಂಕ 29.09.2024ರಂದು ಒಟ್ಟು 71 ಅಭ್ಯರ್ಥಿಗಳು ಹಾಜರಿದ್ದರು.

**ಬಳ್ಳಾರಿ ಕೇಂದ್ರ :** ಡಿಸಿಬಿಎಂ ಕೋರ್ಸಿನ 1ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು ಅಲ್ಲಂ ಕರಿಬಸಪ್ಪ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಏರ್ಪೋರ್ಟ್ ರಸ್ತೆ, ಬಳ್ಳಾರಿ ಇಲ್ಲಿ ಆಯೋಜಿಸಲಾಗಿತ್ತು. ದಿನಾಂಕ 28.09.2024ರಂದು ಹಾಗೂ ದಿನಾಂಕ 29.09.2024ರಂದು ಬಳ್ಳಾರಿ ಕೇಂದ್ರದಲ್ಲಿ ಒಟ್ಟು 55 ಅಭ್ಯರ್ಥಿಗಳು ಹಾಜರಿದ್ದರು.

**ಚಿಕ್ಕೋಡಿ ಕೇಂದ್ರ :** ಡಿಸಿಬಿಎಂ ಕೋರ್ಸಿನ 1ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು ಕೆ.ಎಲ್.ಇ. ಸೊಸೈಟೀಸ್ ಲಾ ಕಾಲೇಜ್, ಬಿ.ಕೆ. ಕಾಲೇಜ್ ಆವರಣ, ಮಿರಾಜ್ ರಸ್ತೆ, ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು. ದಿನಾಂಕ 28.09.2024ರಂದು 37 ಅಭ್ಯರ್ಥಿಗಳು ಹಾಗೂ ದಿನಾಂಕ 29.09.2024ರಂದು ಚಿಕ್ಕೋಡಿ ಕೇಂದ್ರದಲ್ಲಿ ಒಟ್ಟು 31 ಅಭ್ಯರ್ಥಿಗಳು ಹಾಜರಿದ್ದರು.

**ಹುಬ್ಬಳ್ಳಿ ಕೇಂದ್ರ :** ಡಿಸಿಬಿಎಂ ಕೋರ್ಸಿನ 1ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು ಕೆ.ಎಸ್.ಎಸ್.ಕಲಾ ಮತ್ತು ವಾಣಿಜ್ಯ ಕಾಲೇಜ್, ದೇಸಾಯಿ ಕಾಂಪೌಂಡ್, ವಿದ್ಯಾನಗರ, ಹುಬ್ಬಳ್ಳಿ ಇಲ್ಲಿ ಆಯೋಜಿಸಲಾಗಿತ್ತು. ದಿನಾಂಕ 28.09.2024ರಂದು ಹಾಗೂ ದಿನಾಂಕ 29.09.2024ರಂದು ಹುಬ್ಬಳ್ಳಿ ಕೇಂದ್ರದಲ್ಲಿ ಒಟ್ಟು 51 ಅಭ್ಯರ್ಥಿಗಳು ಹಾಜರಿದ್ದರು.

**ವಿಜಯಪುರ ಕೇಂದ್ರ:** ಡಿಸಿಬಿಎಂ ಕೋರ್ಸಿನ 1ನೇ ಸೆಮಿಸ್ಟರ್‌ನ ಪರೀಕ್ಷೆಯನ್ನು ಬಿಎಲ್‌ಡಿಇ'ಎಸ್. ವಾಣಿಜ್ಯ ಕಾಲೇಜು, ನ್ಯೂ ಕ್ಯಾಂಪಸ್, ಬಿ.ಎಂ. ಪಾಟೀಲ ರಸ್ತೆ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ದಿನಾಂಕ 28.09.2024ರಂದು 51 ಅಭ್ಯರ್ಥಿಗಳು ಹಾಗೂ ದಿನಾಂಕ 29.09.2024ರಂದು ವಿಜಯಪುರ ಕೇಂದ್ರದಲ್ಲಿ ಒಟ್ಟು 48 ಅಭ್ಯರ್ಥಿಗಳು ಹಾಜರಿದ್ದರು.

## ಸೆಪ್ಟೆಂಬರ್– 2024 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ವಿಶೇಷಾಧಿಕಾರಿ ನೇಮಕದ ಕುರಿತು.**

ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಹಿನ್ನಲೆಯಲ್ಲಿ ಕಾಯ್ದೆ ಕಲಂ 38ಎ ರನ್ವಯ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸಿ ಆದೇಶವನ್ನು ಹೊರಡಿಸಲಾಗಿದೆ.

| ಕ್ರ. ಸಂ | ಸಹಕಾರಿ ಹೆಸರು | ವಿಶೇಷಾಧಿಕಾರಿ ಹೆಸರು | ವಿಶೇಷಾಧಿಕಾರಿ ನೇಮಕವಾದ ದಿನಾಂಕ |
|---|---|---|---|
| 1 | ಗ್ರೀನ್ ಎಕರ್ಸ್ ಆರಗ್ಯಾನಿಕ್ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಜೋಯಿಡಾ (ಕೆಡಬ್ಲ್ಯುಆರ್–0141) | ಶ್ರೀ ಸಂತೋಷ ಕುಮಾರ ಎಮ್.ಜೆ., ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ | (ದಿನಾಂಕ 29.08.2024) |

**2. ಸಮಾಪನಾಧಿಕಾರಿ ನೇಮಕವಾಗಿರುವ ಕುರಿತು.**

**ಅ. ಸೌಹಾರ್ದ ಸಹಕಾರಿಗಳಿಗೆ ಸಮಾಪನಾಧಿಕಾರಿಯಾಗಿರುವ ಕುರಿತು.**

1. ಸಸ್ಯಶಾಮಲ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ.
2. ಹಂಪಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹಂಪಿ, ತಾ॥ ಹೊಸಪೇಟೆ.
3. ಸಮೃದ್ಧಿ ಸ್ವಶಕ್ತಿ ಸೌಹಾರ್ದ ಸ್ವಸಹಾಯ ಸಹಕಾರಿ ನಿ., ಬನವಿನಕಲ್ಲು ತಾ॥ ಕೂಡ್ಲಗಿ.
4. ಆದರ್ಶ ಸ್ವಶಕ್ತಿ ಸೌಹಾರ್ದ ಸ್ವಸಹಾಯ ಸಹಕಾರಿ ನಿ., ಸಾಸಲವಾಡ, ತಾ॥ ಕೂಡ್ಲಗಿ.
5. ನಂದಿ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ತಂಬ್ರಹಳ್ಳಿ, ತಾ॥ ಹಗರಿಬೊಮ್ಮನಹಳ್ಳಿ.
6. ರೇಣುಕಾಚಾರ್ಯ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ.
7. ಕವಾಡ ಸರ್ವೋದಯ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಚಿಕ್ಕಕುಂಬಲಕುಂಟೆ, ತಾ॥ ಕೂಡ್ಲಗಿ.
8. ಕವಾಡ್ಸ ಪ್ರಗತಿ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಲೋಕಿಕೆರೆ, ತಾ॥ ಕೂಡ್ಲಗಿ.
9. ಕವಾಡ ನವಜೀವನ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಕನ್ನಿಗೋರಯ್ಯನಹಟ್ಟಿ ತಾ॥ಕೂಡ್ಲಗಿ.
10. ಕವಾಡ ಕಾಮದೇನು ಸೌಹಾರ್ದ ವಿವಿದೋದ್ಧೇಶ ಸಹಕಾರಿ ನಿ., ಖಾನಹೊಸಹಳ್ಳಿ ತಾ॥ ಕೂಡ್ಲಗಿ.
11. ಕವಾಡ ಆದರ್ಶ ಸೌಹಾರ್ದ ವಿವಿದೋದ್ಧೇಶ ಸಹಕಾರಿ ನಿ., ಕುಲಿಮೆಹಟ್ಟಿ, ತಾ॥ ಕೂಡ್ಲಗಿ.
12. ಕವಾಡ ದಿವ್ಯಜ್ಯೋತಿ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಪೂಜಾರಹಳ್ಳಿ, ತಾ॥ ಕೂಡ್ಲಗಿ.
13. ಕವಾಡ ವಿಜಯನಗರ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಹಿರೇಕುಂಬಲಕುಂಟೆ, ತಾ॥ ಕೂಡ್ಲಗಿ.

ಸದರಿ ಮೇಲ್ಕಂಡ ಸೌಹಾರ್ದ ಸಹಕಾರಿಗಳಿಗೆ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಹೊಸಪೇಟೆ ಇವರು ದಿನಾಂಕ 12.08.2024ರಂದು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಬಳ್ಳಾರಿ ಮತ್ತು ವಿಜಯಪುರ ಇವರನ್ನು ಸಮಾಪನಾಧಿಕಾರಿಯಾಗಿ ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

**ಆ. ಸಮಾಪನಾಧಿಕಾರಿಗಳ ಮಾರ್ಪಾಡು ಆದೇಶ:**

1. ದಿ ಕೊರಟಕೆರೆ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಕೊರಟಕೆರೆ.
2. ದಿ ಶಿರಾ ಟೌನ್ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಶಿರಾ.
3. ದಿ ಮಧುಗಿರಿ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಮಧುಗಿರಿ.

ಸದರಿ ಮೇಲ್ಕಂಡ ಸೌಹಾರ್ದ ಸಹಕಾರಿಗಳಿಗೆ ಈ ಹಿಂದೆ ಸಮಾಪನಾಧಿಕಾರಿಯಾಗಿದ್ದ ಶ್ರೀ ಉಮೇಶ್ ಎ.ಎಸ್., ಇವರು ವರ್ಗಾವಣೆಯಾಗಿರುವುದರಿಂದ ಸದರಿಯವರು ಸ್ಥಾನಕ್ಕೆ ಸಹಕಾರಿಗಳ ಸಮಾಪನಾಧಿಕಾರಿಯಾಗಿ ಶ್ರೀ ಶಶಿಕುಮಾರ್ ಎಸ್., ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು, ತುಮಕೂರು ಜಿಲ್ಲೆ ಇವರನ್ನು ಸಮಾಪನಾಧಿಕಾರಿಯಾಗಿ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಉಪ–ವಿಭಾಗ, ಮಧುಗಿರಿ ಇವರು ದಿನಾಂಕ 21.09.2024ರಂದು ಮಾರ್ಪಾಡು ಆದೇಶದ ಮೂಲಕ ನೇಮಕ ಮಾಡಿರುತ್ತಾರೆ.

**3. ಸೌಹಾರ್ದ ಸಹಕಾರಿಯ ನೊಂದಣಿಯು ರದ್ದುಗೊಂಡಿರುವ ಕುರಿತು.**

ಮಂಜುನಾಥ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಈ ಸಹಕಾರಿಯನ್ನು ಕರ್ನಾಟಕ ಸೌಹಾರ್ದ ಸಹಕಾರ ಅಧಿನಿಯಮ–1997ರ ಕಲಂ 48(5)(i)ರ ಪ್ರಕಾರ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ, ಮೈಸೂರು ಇವರು ಸಹಕಾರಿಯ ನೊಂದಣಿಯನ್ನು ರದ್ದುಗೊಳಿಸಿ ದಿನಾಂಕ 19.09.2024ರಂದು ಆದೇಶ ಮಾಡಿರುತ್ತಾರೆ.




# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ

## ತರಬೇತಿ, ಸೆಮಿನಾರ್ ಹಾಗೂ ಕಾರ್ಯಗಾರ

- ಹವಾ ನಿಯಂತ್ರಣ ಕೊಠಡಿ ವ್ಯವಸ್ಥೆ
- ೮೦ ರಿಂದ 100 ಜನ ಆಸನ ಸಾಮರ್ಥ್ಯ
- ಪ್ರತ್ಯೇಕ ಊಟದ ಕೋಣೆ (60 ಜನ)
- ಡಿಜಿಟಲ್ ಪರದೆಯೊಂದಿಗೆ ಹೆಚ್.ಡಿ. ಧ್ವನಿವರ್ಧಕವನ್ನು ಅಳವಡಿಸಲಾಗಿದೆ.
- ಬೆಂಗಳೂರು, ಬೆಳಗಾವಿ, ಕಲಬುರಗಿ ಜಿಲ್ಲೆಯ ಸ್ಥಳಗಳಲ್ಲಿ ತರಬೇತಿ ಸಭಾಂಗಣ ಲಭ್ಯವಿರುತ್ತದೆ.







**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ**

ಬೆಂಗಳೂರು – ಮಲ್ಲೇಶ್ವರಂ
ದೂ : 080–23378375–80
ಶ್ರೀ ಮಲ್ಲಿನಾಥ 8884466734
6363835279

ಬೆಳಗಾವಿ – ಆಟೋ ನಗರ
ದೂ : 0831– 2401551
ಶ್ರೀ ರವಿ ಹಲಗಟ್ಟಿ 9513566654

ಕಲಬುರಗಿ – ಜಿಡಿಎ ಲೇಔಟ್
ದೂ : 0847–2270222
ಶ್ರೀ ಆನಂದರಾಯ 9513566618

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 24.10.2024 ರಂದು ಯುವಕರು ಮತ್ತು ಸಹಕಾರ ಸಂವಾದ ಕಾರ್ಯಕ್ರಮವನ್ನು ಚಾಣುಕ್ಯ ವಿಶ್ವವಿದ್ಯಾಲಯ, ಬೆಂಗಳೂರು ಗ್ರಾಮಾಂತರ ದೇವನಹಳ್ಳಿಯಲ್ಲಿ ಹಮ್ಮಿಕೊಳ್ಳಲಾಗಿದೆ.
2. ದಿನಾಂಕ 17.10.2024 ರಂದು ಕ್ರೆಡಿಟ್ ಅಧಿಕಾರಿಗಳಿಗೆ / ವಸೂಲಾತಿ ಅಧಿಕಾರಿಗಳಿಗಾಗಿ ಆಡಳಿತ ಅಭಿವೃದ್ಧಿ ತರಬೇತಿ ಹಾಗೂ ಸಾಲ ವಸೂಲಾತಿ ನಿರ್ವಹಣೆ ತರಬೇತಿಯನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

## ಉದ್ಘಾಟನೆ



**ಕಲಬುರಗಿ** : ದಿನಾಂಕ 15.09.2024 ರಂದು ಶ್ರೀ ವೀರಗಣೇಶ ಸೌಹಾರ್ದ ಸಹಕಾರಿ ನಿ., ಕಲಬುರಗಿ ಈ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆಯನ್ನು ಮಾನ್ಯ ಶಾಸಕರಾದ ಶ್ರೀ ಅಲ್ಲಮಪ್ರಭು ಪಾಟೀಲರವರು ಉದ್ಘಾಟಿಸಿದರು. ಸಹಕಾರಿಯ ಧ್ವಜಾರೋಹಣವನ್ನು ಮಾನ್ಯ ಮಾಜಿ ಶಾಸಕರಾದ ಶ್ರೀ ದತ್ತಾತ್ರೇಯ ಪಾಟೀಲ ಸಿ ರೇವೂರರವರು ನೆರವೇರಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೆಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಶರಣಪ್ಪ ಕರೂಟಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಸೋಮಶೇಖರ ಗೋನಾಯಕ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀಮತಿ ಶೈಲಜಾ ತಪಲಿ, ಶ್ರೀ ಜಿ ಶ್ರೀಧರ, ಶ್ರೀ ಹೆಚ್ ಜಿ ಹನುಮಂತಯ್ಯಶೆಟ್ಟಿ, ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರಾದ ಎಸ್.ಎಸ್. ಪಾಟೀಲ ರವರು, ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ವಿಶ್ವನಾಥ ಮಲಕೂಡ, ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀಮತಿ ಪಾರ್ವತಿ ರಾಜು ದೇವದುರ್ಗ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರುಗಳಾದ ಶ್ರೀಮತಿ ನಿರುಪಮಾ ಆರ್ ಕಮ್ಮಾ, ಆಡಳಿತ ಮಂಡಳಿ ಸದಸ್ಯರುಗಳು ಉಪಸ್ಥಿತರಿದ್ದರು.



**ಚಿತ್ರದುರ್ಗ** : ದಿನಾಂಕ 20-09-2024ರಂದು ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ 2023-24ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷರಾದ ಶ್ರೀ ಸಿ. ವೀರಭದ್ರಬಾಬು ಇವರು ವಹಿಸಿದ್ದರು. ಸಭೆಗೆ ವಿಶೇಷ ಆಹ್ವಾನಿತರಾಗಿ ಸಂಯುಕ್ತ ಸಹಕಾರಿಯ ಚಿತ್ರದುರ್ಗ ಜಿಲ್ಲಾ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ಭಾಗವಹಿಸಿ ಒಕ್ಕೂಟದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಡಿ. ಆರ್. ತಿಪ್ಪೇಸ್ವಾಮಿರವರು, ಒಕ್ಕೂಟದ ನಿರ್ದೇಶಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಚಿತ್ರದುರ್ಗ ಜಿಲ್ಲಾ ಒಕ್ಕೂಟದ ಸದಸ್ಯ ಸಹಕಾರಿಗಳು ಭಾಗವಹಿಸಿದ್ದರು.



**ಬೆಂಗಳೂರು** : ದಿನಾಂಕ 20-09-2024ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ನಂದಿನಿ ಸೌಹಾರ್ದ ಸಹಕಾರಿ ನಿಯಮಿತ ಇಲ್ಲಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು, ಕರ್ತವ್ಯಗಳು ಮತ್ತು ಜವಬ್ದಾರಿಗಳು ಹಾಗೂ ಸೌಹಾರ್ದ ಕಾಯ್ದೆಯ ಅಂಶಗಳ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್ ರಾವ್ ರವರು ಭಾಗವಹಿಸಿದ್ದರು.

## ವಾರ್ಷಿಕ ಸಾಮಾನ್ಯ ಸಭೆ



**ಉಡುಪಿ** : ದಿನಾಂಕ 21.09.2024 ರಂದು ಉಡುಪಿ ನಗರದ ಪುರಭವನದಲ್ಲಿ ಸೆ.21ರಂದು ನಡೆದ ಉಡುಪಿ ಮೀನುಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ 2023–2024ನೇ ಸಾಲಿನ 14ನೇ ವಾರ್ಷಿಕ ಮಹಾಸಭೆಯು ಜರುಗಿತು.

ಸಹಕಾರಿಯ ನಿರ್ದೇಶಕ ಮಂಡಳಿ ಹಾಗೂ ಉಡುಪಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಯಶ್‌ಪಾಲ್ ಎ. ಸುವರ್ಣ ಅವರು ಭಾಗವಹಿಸಿ, ವಿವಿಧ ಮಾರುಕಟ್ಟೆಗಳ 10 ಹಿರಿಯ ಮೀನುಗಾರ ಮಹಿಳೆಯರನ್ನು ಸನ್ಮಾನಿಸಿದರು. ಇದೇ ವೇಳೆ 50 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಆರೋಗ್ಯ ನೆರವನ್ನು ವಿತರಿಸಲಾಯಿತು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕ ಮಂಜುನಾಥ್ ಎಸ್.ಕೆ ರವರು ಸೌಹಾರ್ದ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ.ಎಸ್, ಸಹಕಾರಿ ಉಪಾಧ್ಯಕ್ಷೆ ಜಯಂತಿ ಗುರುದಾಸ್ ಬಂಗೇರ, ನಿರ್ದೇಶಕರುಗಳು ಉಪಸ್ಥಿತರಿದ್ದರು.



### ಸೌಹಾರ್ದ ಸಹಕಾರಿಯಿಂದ ಮಾನವೀಯ ಕೈಂಕರ್ಯದ ಸೇವೆ
### "ಬದುಕಿಗೊಂದು ಸೂರು "ತಥಾಸ್ತು ಯೋಜನೆ"

**ಉಡುಪಿ** : ದಿನಾಂಕ : 14.09.2024ರಂದು ಶ್ರೀ ರಾಮಾಂಜನೇಯ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ಸಂಘವು ತನ್ನ ದಶಮಾನೋತ್ಸವ ಆಚರಣೆಯ ಸುಸಂಧರ್ಭದ ಸವಿನೆನಪಿಗಾಗಿ ಸ್ಥಳೀಯವಾಗಿ ವಾಸವಿರುವ ಕೋಡಿ ಕನ್ಯಾಣ ಎಂಬ ಗ್ರಾಮದ ಶ್ರೀಮತಿ ಭವಾನಿ ಜಿ ನಾಯಕ್ ಇವರಿಗೆ "ತಥಾಸ್ತು ಯೋಜನೆ" ಅಡಿಯಲ್ಲಿ ಒಂದು ಗೃಹವನ್ನು ನಿರ್ಮಿಸಿ ಮಾನ್ಯ ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರ ಸಮ್ಮುಖದಲ್ಲಿ ಮನೆಯನ್ನು ಹಸ್ತಾಂತ–ರಿಸಿರುತ್ತಾರೆ. ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥಶೆಟ್ಟಿ ರವರು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಲೋಹಿತ್ ಸಾಲಿಯಾನ್, ಇವರು ಹಾಗೂ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಾಹಕರು, ಸಿಬ್ಬಂದಿಗಳು ಮತ್ತು ಸ್ಥಳೀಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಾಹಕರು ಭಾಗಿಯಾಗಿದ್ದರು.



**ದಾವಣಗೆರೆ** : ದಿನಾಂಕ 01–09–2024ರಂದು ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ ಜರುಗಿತು. ಸಾಮಾನ್ಯ ಸಭೆಯ ಉದ್ಘಾಟನೆಯನ್ನು ದಾವಣಗೆರೆ ಜಿಲ್ಲೆಯ ಮಾಜಿ ಸಂಸದರಾದ ಶ್ರೀ ಜಿ.ಎಂ. ಸಿದ್ದೇಶ್ವರ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು, ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಎಂ.ಪ್ರಸನ್ನಕುಮಾರ್ ರವರು, ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.

**ಮೈಸೂರು** : ದಿನಾಂಕ : 28.09.2024ರಂದು ಮೈಸೂರು ನಗರದಲ್ಲಿ ನೂತನ ಹೊಸ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ದೃಷ್ಟಿಯಿಂದ ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಪ್ರವರ್ತಕರ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಪ್ರವರ್ತಕರಿಗೆ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ್ ಆರ್ ಎಸ್ ರವರು ಉಪಸ್ಥಿತರಿದ್ದರು.



**ತುಮಕೂರು** : ದಿನಾಂಕ 24–09–2024ರಂದು ನಂದಿನಿ ಹಾಲು ಉತ್ಪಾದಕರುಗಳ ಸೌಹಾರ್ದ ಸಹಕಾರಿ ಸಂಘ ನಿ, ತಿಪಟೂರು, ತುಮಕೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಜರುಗಿತು. ಸಭೆಯ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಭಾಗವಹಿಸಿ ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ತ್ರಿಯಂಬಕರರವರು ವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್ ರವರು, ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಹಕಾರಿ ಸದಸ್ಯರು ಭಾಗವಹಿಸಿದ್ದರು.




**ಹಾನಗಲ್ಲ** : ದಿನಾಂಕ : 16.09.2024ರಂದು ಸೋಮವಾರ ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಹಾನಗಲ್ಲ ಇದರ 22ನೇ ವಾರ್ಷಿಕ ಸಾಮಾನ್ಯ ಸಭೆಯು ಸಂಸ್ಥೆಯ ಮಹಡಿಯ ಮೇಲೆ ಸಾಯಂಕಾಲ 4.00 ಗಂಟೆಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಬಿ. ಕಲಾಲ್ ಇವರ ಅಧ್ಯಕ್ಷತೆಯಲ್ಲಿ ಜರುಗಿರುತ್ತದೆ. ಸಂಸ್ಥೆಯು ಸನ್ 2023–24 ನೇ ಸಾಲಿನಲ್ಲಿ ರೂ, 28,78,684.73/– ಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ 12% ರಂತೆ ಡಿವಿಡೆಂಡ್ ವಿತರಣೆ ಮಾಡಲು ನಿರ್ಣಯಿಸಲಾಯಿತು.

ಈ ಸಂದರ್ಭದಲ್ಲಿ SSLC ಹಾಗೂ PUC ವಿಭಾಗದಲ್ಲಿ ಹೆಚ್ಚಿನ ಅಂಕ ಪಡೆದಂತಹ ಸದಸ್ಯರ ಮಕ್ಕಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರತಿಭಾ ಪುರಸ್ಕಾರಗಳನ್ನು ವಿತರಿಸಲಾಯಿತು.



**ಮಂಡ್ಯ** : ದಿನಾಂಕ : 25.09.2024ರಂದು ಶ್ರೀ ಶಿವಜ್ಯೋತಿ ಗಾಣಿಗರ ಸೌಹಾರ್ದ ಸಹಕಾರ ನಿ.,ಕೆ.ಆರ್ ಪೇಟೆ ಇದರ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಸಹಕಾರಿ ಆವರಣದಲ್ಲಿ ಜರುಗಿತು ಈ ಸಭೆಯನ್ನು ಶ್ರೀ ನಾರಾಯಣಗೌಡ, ಮಾಜಿ ಸಚಿವರು, ಕರ್ನಾಟಕ ಸರ್ಕಾರ ಇವರು ಉದ್ಘಾಟಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು ಸದರಿ ಸಭೆಯಲ್ಲಿ ಸಹಕಾರಿಯ ನಿರ್ದೇಶಕರುಗಳು ಹಾಗೂ ಸದಸ್ಯರುಗಳು ಹಾಜರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

### ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು



ಶ್ರೀ ಜಿ.ವಿ ಕೃಷ್ಣ
ಅಧ್ಯಕ್ಷರು



ಶ್ರೀಮತಿ ಭಾರ್ಗವಿ ಕೆ.ಎಸ್
ಉಪಾಧ್ಯಕ್ಷರು

### ವೀರಶೈವ ಮಹಾಸಭಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹುಲಿಯೂರುದುರ್ಗ



ಶ್ರೀ ಸಿ.ಜಿ ನಿತ್ಯಾನಂದಮೂರ್ತಿ
ಅಧ್ಯಕ್ಷರು



ಶ್ರೀ ವಿ.ಎನ್ ಹುಚ್ಚವೀರಯ್ಯ
ಉಪಾಧ್ಯಕ್ಷರು

## ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ



**ಮಾನ್ವಿ :** ದಿನಾಂಕ 15.09.2024 ರಂದು ನಾಗಲಾಂಬಿಕೆ ಸೌಹಾರ್ದ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆಯ ಸಹಕಾರಿಯ ಅಧ್ಯಕ್ಷರಾದ ನಾಗರತ್ನಮ್ಮ ಬಿ. ಪಾಟೀಲ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ನಂತರ ಮಾತನಾಡಿದ ಮಾನ್ಯ ಅಧ್ಯಕ್ಷರು 2014ರಲ್ಲಿ 39 ಲಕ್ಷ ಬಂಡವಾಳದೊಂದಿಗೆ ಪ್ರಾರಂಭಗೊಂಡ ನಾಗಲಾಂಬಿಕೆ ಪತ್ತಿನ ಸೌಹಾರ್ದ ಸಹಕಾರಿಯ ಪ್ರಸಕ್ತ ಸಾಲಿನಲ್ಲಿ 57.79ಲಕ್ಷ ಶೇರು ಬಂಡವಾಳ ಹಾಗೂ 3932 ಸದಸ್ಯತ್ವ, 16.53 ಕೋಟಿ ಠೇವಣಿ ಹೊಂದಿದ್ದು 16.89 ಕೋಟಿ ರೂಪಾಯಿಗಳ ಸಾಲ ಮತ್ತು ಮುಂಗಡ ಹೊಂದಿದೆ. ವಿವಿಧ ರೀತಿಯ ಠೇವಣಿಗಳ ಒಟ್ಟು ಮೊತ್ತ 16.53 ಕೋಟಿ ರೂ ಗಳಷ್ಟಿರುತ್ತದೆ. ನಮ್ಮ ಸಹಕಾರಿಯ ಒಟ್ಟು ದುಡಿಯುವ ಬಂಡವಾಳ ರೂ. 20.93 ಕೋಟಿ ಹೊಂದಿದೆ ಹಾಗೂ 64.19 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿದರು.



**ಕೊಪ್ಪಳ :** ಸೌಭಾಗ್ಯಲಕ್ಷ್ಮಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಕೊಪ್ಪಳ ಸಹಕಾರಿಯ 2023–24ನೇ ಸಾಲಿನ 12ನೇ ವಾರ್ಷಿಕ ಮಹಾ ಸಭೆಯು ದಿನಾಂಕ: 15–09–2024 ರಂದು ರವಿವಾರ ಬೆಳಿಗ್ಗೆ 10–30 ಗಂಟೆಗೆ ಸಹಕಾರಿಯ ಕಟ್ಟಡದ "ಸೌಭಾಗ್ಯಲಕ್ಷ್ಮಿ ಸಂಕೀರ್ಣದಲ್ಲಿ" ನೇರವೇರಿಸಲಾಯಿತು. ಮೊದಲಿಗೆ ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀಯುತ ಯಲ್ಲಪ್ಪ ಕೆ.ಮೇಟಿರವರು ಹೃತಪೂರ್ವಕವಾಗಿ ಸ್ವಾಗತಿಸಿದರು. ನಂತರ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಬೊಮ್ಮಣ್ಣ ಆರ್.ಅಕ್ಕಸಾಲಿಯವರು ಸುಧೀರ್ಘವಾಗಿ ವಾರ್ಷಿಕ ವರದಿ ಮಂಡಿಸಿ ವಿಷಯ ಸೂಚಿಗನುಗುಣವಾಗಿ ವಿಷಯ ಪ್ರಸ್ತಾಪಿಸಿ ಸದಸ್ಯರಿಂದ ಅನುಮೋದನೆ ಪಡೆಯಲಾಯಿತು ಕೊನೆಯದಾಗಿ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ತೇಜಸ್ವಿನಿ ಸಿ.ಸುಂಕದರವರು ಮಹಾ ಸಭೆಯನ್ನು ಯಶಸ್ವಿಗೊಳಿಸಿದ ಎಲ್ಲಾ ಆಡಳಿತ ಮಂಡಳಿಯ ನಿರ್ದೇಶಕರಿಗೂ, ಸರ್ವ ಸದಸ್ಯರಿಗೂ, ಸಿಬ್ಬಂದಿಯವರಿಗೆ ಮತ್ತು ಪಿಗ್ಮಿ ಸಂಗ್ರಾಹಕರಿಗೆ ವಂದಿಸಿದರು.

**ಮೈಸೂರು :** ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿ. ಸಹಕಾರಿಯ 2023–2024ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 01–09–2024 ರಂದು ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ನಿ., ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ನಮ್ಮ ಸಂಸ್ಥೆಯ ಹಿರಿಯ ನಾಗರೀಕರಿಗೆ ಸನ್ಮಾನಿಸಲಾಯಿತ್ತು, ಈ ಸಂದರ್ಭದಲ್ಲಿ ನಮ್ಮ ಅಧ್ಯಕ್ಷರಾದ ಶ್ರೀಮತಿ ಲಲಿತ ಕೆ.ಎಸ್, ಉಪಾಧ್ಯಕ್ಷರಾದ ಶ್ರೀಮತಿ ಭಾಗ್ಯಮ್ಮ ಮತ್ತು ನಿರ್ದೇಶಕರುಗಳಾದ ಶ್ರೀಮತಿ ರತ್ನಮ್ಮ ಹೆಚ್.ಜಿ, ಹೇಮಾಗಂಗಪ್ಪ, ಗೀತಾ ರಾಜಶೇಖರ್, ಲಕ್ಷ್ಮಿ ವಿಜಯ, ಮಂಜುಳಮ್ಮ ಸಿ, ಶಿವಮ್ಮ, ಭಾಗ್ಯಮ್ಮ, ರಶ್ಮಿ ಮಂಜುಳ ಎನ್ ಜೆ ಇವರುಗಳು ಉಪಸ್ಥಿತರಿದ್ದರು ಈ ವಿವರಗಳನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

**ಗದಗ :** ಭಾಗ್ಯಲಕ್ಷ್ಮೀ ವಿವಿದೊದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ ಸಹಕಾರಿಯ 2023–24ನೇಯ ಸಾಲಿನ 14 ನೇ ವಾರ್ಷಿಕ ಸರ್ವ ಸಾಧಾರಣ ಮಹಾಸಭೆಯನ್ನು ದಿನಾಂಕ 16–09–2024 ನೇ ಸೋಮವಾರ ದಿವಸ ಮದ್ಯಾಹ್ನ 12–00 ಘಂಟೆಗೆ ಸ್ಥಳ ನಮ್ಮ ಸಹಕಾರಿಯ ಆಫೀಸಿನ ಆವರಣ ದಲ್ಲಿ ಟ್ಯಾಗೋರ ರೋಡ , ಗದಗ. – 582101 ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ ಎಸ್ ಹೊಸಮಠ ಇದರ ಅಧ್ಯಕ್ಷತೆಯಲ್ಲಿ ಜರುಗಿತು.

ಸಹಕಾರಿಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಅಶೋಕ ಪಿ ಮುತ್ತಿನ ಇವರು ಸಹಕಾರಿಯ ಅಧ್ಯಕ್ಷರಿಗೆ ಮತ್ತು ನಿರ್ದೇಶಕರಿಗೆ ಹಾಗೂ ಆಡಳಿತ ಸದಸ್ಯರಿಗೆ ಸಿಬ್ಬಂದಿಗೆ ವರ್ಗದವರಿಗೆ ಪಿಗ್ಮಿ ಸಂಗ್ರಹಕಾರರಿಗೆ ಹಾಜರಿದ್ದ ಸಕಲ ಎಲ್ಲಾ ಸದಸ್ಯರಿಗೆ ಠೇವುದಾರಿಗೆ ಹಿತೈಷಿಗಳಿಗೆ ಸ್ವಾಗತ ಕೋರಿದರು. ಸಭೆಯ ಪ್ರಾರಂಭದ ಮೊದಲು ನಮ್ಮ ಸಹಕಾರಿಯ ಸದಸ್ಯರು ನಿಧನದ ನಿಮಿತ್ಯ 2 ನಿಮಿಷ ಮೌನ ಆಚರಿಸಲಾಯಿತು. ಸಹಕಾರಿಯ ಮ್ಯಾನೇಜರ ಇವರು ಅಜೆಂಡದ ಪ್ರಕಾರ ಸಹಕಾರಿಯ 1 ರಿಂದಾ 26 ರವರೆಗೆ ಎಲ್ಲಾ ವಿಷಯಗಳು ಚರ್ಚಿಸಿ ಸರ್ವಾನುಮತದಿಂದ ಸಭೆಯಲ್ಲಿ ಅನುಮೂದಿಸಿದರು ಸಹಕಾರಿಯ ಅಡಿಟ್ ಮಾಡಿದ ಜಮಾ–ಖರ್ಚು ಲಾಭ ಹಾನಿ ಮತ್ತು ಅಢಾವೆ ಪತ್ರಿಕೆಗಳನ್ನು ಮತ್ತು ಅಡಿಟ್ ವರದಿಗೆ ಅನುಪಾಲನಾ ವರದಿಯನ್ನು ಓದಿ ಸಹಕಾರಿಯ ಸಂಪೂರ್ಣ ಮಾಹಿತಿಯನ್ನು ಹಾಜರಿದ್ದ ಸದಸ್ಯರ ಸಭೆಯಲ್ಲಿ ಓದಿ ಹೇಳಿದರು



**ಚಿತ್ರದುರ್ಗ :** ದಿನಾಂಕ 21-09-2024 ರಂದು ನಿಸರ್ಗ ಸ್ವಶಕ್ತಿ ಸೌಹಾರ್ದ ಸ್ವಸಹಾಯ ಸಹಕಾರಿ ಸಂಘ ನಿ., ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ಸಹಕಾರಿಯ 2023-24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು & ಕರ್ತವ್ಯಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಟಿ. ಅನುಸೂಯ ರವರು ಮತ್ತು ಉಪಾಧ್ಯಕ್ಷರಾದ ಶ್ರೀಮತಿ ಎಂ. ನಿಂಗಮ್ಮ ರವರು ಹಾಗೂ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು ಮತ್ತು ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳ ನಿರ್ದೇಶಕರಾದ ಶ್ರೀ ಡಿ.ಆರ್ ನಾಗೇಶಪ್ಪ ರವರು ಹಾಗೂ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಹೆಚ್.ಆರ್ ಪ್ರಕಾಶಮೂರ್ತಿ ರವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಸಹಕಾ-ರಿಯ 145 ಮಹಿಳಾ ಸದಸ್ಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

---



## ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಸೇವಾ ಮನೋಭಾವ ಅವಶ್ಯಕ- ಸತೀಶ ಕಡಾಡಿ

**ಮೂಡಲಗಿ:** 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವ ಸಂಕಲ್ಪ ಹೊಂದಿರುವ ಪ್ರಧಾನಿ ನರೇಂದ್ರ ಮೋದಿ ಅವರ ಆಶಯ ಈಡೇರಬೇಕಾದರೆ ಸಹಕಾರ ರಂಗ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ತಲುಪುವುದರ ಜೊತೆಗೆ ಬಡವರ, ದೀನದಲಿತರ ಆರ್ಥಿಕ ಅಭ್ಯುದಯ ಮಾಡುವುದರ ಮೂಲಕ ಆರ್ಥಿಕವಾಗಿ ಸಶಕ್ತ ಭಾರತವನ್ನು ನಿರ್ಮಿಸಲು ಸಹಕಾರ ಸಂಸ್ಥೆಗಳು ಸೇವಾ ಮನೋಭಾವವನ್ನು ಬೆಳೆಸಿಕೊಳ್ಳುವುದು ಅವಶ್ಯಕವಾಗಿದೆ ಎಂದು ಸಹಕಾರಿಯ ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಸತೀಶ ಕಡಾಡಿ ಹೇಳಿದರು.

ಶನಿವಾರ ಕಲ್ಲೋಳಿ ಪಟ್ಟಣದ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ.ಕಲ್ಲೋಳಿ ಇದರ 2023-24ನೇ ಸಾಲಿನ 22ನೇ ಸರ್ವ ಸಾಮಾನ್ಯ ಸಭೆ ಕಾರ್ಯಕ್ರಮಕ್ಕೆ ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು ಸಶಕ್ತ ಭಾರತದ ನಿರ್ಮಾಣದ ಸಂಕಲ್ಪದೆಡೆಗೆ ಶ್ರೀ ಮಹಾಲಕ್ಷ್ಮಿ ಸೌಹಾರ್ದ ಸಹಕಾರಿ ಸಂಸ್ಥೆಯು ತನ್ನ ಅಳಿಲು ಸೇವೆಯನ್ನು ಸಲ್ಲಿಸಲು ಕಟಿಬದ್ಧವಾಗಿದೆ ಎಂದರು.

ಸಹಕಾರಿಯು ಗ್ರಾಹಕರ ಸಹಕಾರದಿಂದ ಪ್ರಗತಿ ಹೊಂದಿದ್ದು, ಸಂಘದಲ್ಲಿ 12254 ಸದಸ್ಯರಿದ್ದು, ರೂ 20.12 ಲಕ್ಷ ಶೇರು ಬಂಡವಾಳ ಹಾಗೂ ರೂ 6.96 ಕೋಟಿ ಕಾಯ್ದಿಟ್ಟ ನಿಧಿಯಿದೆ. ಹಣಕಾಸು ವರ್ಷದಲ್ಲಿ ರೂ 71.10 ಕೋಟಿ ಠೇವು ಸಂಗ್ರವಾಗಿದೆ.

ಸಹಕಾರಿಯಿಂದ ಇದುವರೆಗೆ ಮಹಿಳೆಯರಿಗೆ ಕಿರು ಸಾಲ, ಗ್ರಾಹಕರಿಗೆ ಪಿಗ್ಮಿ ಸಾಲ ಸೇರಿದಂತೆ ರೂ 66.71 ಕೋಟಿ ಸಾಲ ವಿತರಿಸಲಾಗಿದೆ. 8.89 ಕೋಟಿ ರೂಗಳನ್ನು ಬ್ಯಾಂಕ ಮತ್ತು ಇನ್ನಿತರ ಸಂಘಗಳಲ್ಲಿ ಗುಂತಾವಣೆ ಮಾಡಲಾಗಿದ್ದು, ರೂ 78.26 ಕೋಟಿ ದುಡಿಯುವ ಬಂಡವಾಳ ಹೊಂದಿದೆ, ರೂ 318 ಕೋಟಿ ವಹಿವಾಟು ಹೊಂದಿದ್ದು, ಸಹಕಾರಿಯ ಸದಸ್ಯರಿಗೆ ಶೇ 20 ರಷ್ಟು ಲಾಭಾಂಶ ವಿತರಿಸಲಾಗಿದೆ ಎಂದರು.

ಸಹಕಾರಿಯ ಗ್ರಾಹಕರಿಗೆ ಮಹಾಲಕ್ಷ್ಮೀ ಕಿರು ಸಾಲ ಯೋಜನೆ ಸೇ-ರಿದಂತೆ ಅನೇಕ ಸೌಲಭ್ಯಗಳನ್ನು ನೀಡಲಾಗಿದೆ ಎಂದರಲ್ಲದೇ ಕಲ್ಲೋಳಿಯಲ್ಲಿ ನಿರ್ಮಿಸುತ್ತಿರುವ ಪ್ರಧಾನ ಕಛೇರಿಯ ಕಟ್ಟಡವು ಮುಕ್ತಾಯ ಹಂತಕ್ಕೆ ತಲುಪಿದ್ದು ಶೀಘ್ರದಲ್ಲಿಯೇ ಲೋಕಾರ್ಪಣೆಗೊಳ್ಳಲಿದೆ ಹಾಗೂ ಯಾದವಾಡ ಗ್ರಾಮದಲ್ಲಿ ಸಹಕಾರಿಯ ನೂತನ 3ನೇ ಶಾಖೆಯು ಶೀಘ್ರದಲ್ಲಿ ಪ್ರಾರಂಭವಾಗಲಿದೆ ಎಂದರು. ಸಹಕಾರಿಯ ಉಪಾಧ್ಯಕ್ಷ ಶ್ರೀಶೈಲ ತುಪ್ಪದ ಅಧ್ಯಕ್ಷತೆ ವಹಿಸಿದ್ದರು.

ನಿರ್ದೇಶಕರಾದ ಬಾಳಪ್ಪ ಸಂಗಟಿ, ಪರಪ್ಪ ಮಳವಾಡ, ಸಹದೇವ ಹೆಬ್ಬಾಳ, ಶಿವಪ್ಪ ಗೊಸಬಾಳ, ಸಿದ್ದಪ್ಪ ಹೆಬ್ಬಾಳ, ಮಲ್ಲಿಕಾರ್ಜುನ ಹುಲೆನ್ನವರ, ಸೋಮಲಿಂಗ ಹಡಿಗನಾಳ, ಸಲಹಾ ಸಮಿತಿ ಅಧ್ಯಕ್ಷರಾದ ಈರಪ್ಪ ದೇಯನ್ನವರ, ರಾಜು ಕತ್ತಿ, ಮಾಯಪ್ಪ ಬಾನಸಿ, ನಿಂಗಪ್ಪ ನೀಲನ್ನವರ, ಶ್ರೀಕಾಂತ ಕರೆಪ್ಪಗೋಳ, ಗಣೇಶ ಗಾಣಿಗ, ರಾಮಚಂದ್ರ ಕೊಡ್ಲಿ, ಹಿರಿಯ ವ್ಯವಸ್ಥಾಪಕ ಹಣಮಂತ ಕಲಕುಟ್ರಿ ಸೇರಿದಂತೆ ಅನೇಕ ಸಹಕಾರಿಗಳು ಭಾಗವಹಿಸಿದ್ದರು.

ಹಿರಿಯ ವ್ಯವಸ್ಥಾಪಕ ಪರಪ್ಪ ಗಿರೆಣ್ಣವರ ಸ್ವಾಗತಿಸಿ, ನಿರೂಪಿಸಿದರು, ಸುರೇಶ ಮಠದ ವಾರ್ಷಿಕ ವರದಿ ಓದಿದರು. ಶಿವಾನಂದ ಕುಂಬಾರ ವಂದಿಸಿದರು.



**ಶಿವಮೊಗ್ಗ** : ಶಾರದ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ಶಿವಮೊಗ್ಗ ಇವರ 2023-24ನೇ ಸಾಲಿನ 19ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ25-08-2024ರಂದು ಶ್ರೀ ಮಾತಾ ಮಾಂಗಲ್ಯ ಮಂದಿರದಲ್ಲಿ ನಡೆದಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಸಹಕಾರಿಯು ಒಟ್ಟು 96,10,509 ನಿವ್ವಳ ಲಾಭವನ್ನು ಗಳಿಸಿ ಶೇಕಡಾ 11 ರಂತೆ ಸದಸ್ಯರಿಗೆ ಲಾಭಾಂಶವನ್ನು ಘೋಷಿಸಲಾಗಿದೆ.

**ಪ್ರಸಕ್ತ ಸಾಲಿನ ಸಹಕಾರಿಯ ಒಟ್ಟು ವಿವರ :**

ವರ್ಷಾಂತ್ಯಕ್ಕೆ ಇರುವ ಒಟ್ಟು ಸದಸ್ಯರ ಸಂಖ್ಯೆ 5345, ದುಡಿಯುವ ಬಂಡವಾಳ 85.41ಕೋಟಿ, ಒಟ್ಟು ಸದಸ್ಯರ ಠೇವಣಿ 69.96 ಕೋಟಿ, ನೀಡಲಾದ ಸಾಲದ ಮೊತ್ತ 51.94 ಕೋಟಿ, ಎನ್.ಪಿ.ಎ 2.72%, ಒಟ್ಟು ಶಾಖೆಗಳು 05.



**ಹೊಸಪೇಟೆ** : ನವಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಪ್ರಧಾನ ಕಚೇರಿ, ಹೊಸಪೇಟೆ, ಇದರ 2023-24 ನೇ ಸಾಲಿನ 22 ನೇ ವಾರ್ಷಿಕ ಮಹಾಸಭೆಯು ತಾ॥ 14-09-2024 ನೇ ಶನಿವಾರ ಮಧ್ಯಾಹ್ನ 12.00 ಘಂಟೆಗೆ # 504, "ನವಕರ್ನಾಟಕ" ಬಿಲ್ಡಿಂಗ್, ಪಟೇಲ ನಗರ, 4 ನೇ ವಾರ್ಡ, ಹೊಸಪೇಟೆಯಲ್ಲಿ ಶ್ರೀ ಕೆ. ವೀರಪ್ಪ, ಅಧ್ಯಕ್ಷರು, ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮಹಾಸಭೆಯ ಪ್ರಾರಂಭದಲ್ಲಿ ಅಗಲಿದ ಸದಸ್ಯರ ಆತ್ಮಕ್ಕೆ ಶಾಂತಿ ದಯಪಾಲಿಸಲು 2 ನಿಮಿಷ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶ್ರೀಮತಿ ವಿಜಯಲಕ್ಷ್ಮೀ ತಡಸ ಇವರು ಪ್ರಾರ್ಥನೆ ಮಾಡಿದರು. ಶ್ರೀ ಕಲ್ಲಯ್ಯಾ ಬ. ಶಿವಪೂಜಿ, ಪ್ರಧಾನ ವ್ಯವಸ್ಥಾಪಕರು, ಸ್ವಾಗತ ಭಾಷಣ ಮಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ. ವೀರಪ್ಪ, ಇವರು 2023-24 ನೇ ಸಾಲಿನ ಆಡಳಿತ ವರದಿಯನ್ನು ಓದಿ, ಸದರಿ ಸಹಕಾರಿಯು 2023-24 ನೇ ಸಾಲಿನಲ್ಲಿ ರೂ.31,06,326.19 ಲಾಭ ಗಳಿಸಿದ್ದು, ಸದಸ್ಯರಿಗೆ 9% ಲಾಭಾಂಶ ಘೋಷಿಸಲಾಗಿದೆ ಎಂದು ತಿಳಿಸಿದರು. SSLC ಮತ್ತು PUC ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದ ಸದಸ್ಯರ ಮೂರು ಮಕ್ಕಳಿಗೆ ನಗದು ರೂಪದಲ್ಲಿ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು, ಶ್ರೀಮತಿ ವಿಜಯಲಕ್ಷ್ಮೀ ತಡಸ ಇವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು. ಮಹಾಸಭೆಯ ನಂತರ ಭೋಜನ ವ್ಯವಸ್ಥೆ ಮಾಡಲಾಗಿತ್ತು.



**ಮೈಸೂರು** : ದಿನಾಂಕ : 16.09.2024ರಂದು ಕೌಸ್ತುಭ ವಿವಿಧ್ದೋದೇಶ ಸೌಹಾರ್ದ ಸಹಕಾರಿ ಸಂಘ ನಿ., 11ನೇ ವರ್ಷದ ವಾರ್ಷಿಕ ಮಹಾಸಭೆಯನ್ನು ಏರ್ಪಡಿಸಲಾಗಿದ್ದು, ಅಧ್ಯಕ್ಷರಾದ ಜಿ.ವಿ. ಕೃಷ್ಣ ರವರ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಯಿತು ಹಾಗೂ ಮುಖ್ಯ ಅತಿಥಿಗಳಾಗಿ ಪವನ್ ಕುಮಾರ್ ಆರ್ ರವರು ಆಗಮಿಸಿದ್ದರು ಮತ್ತು ಎಲ್ಲಾ ನಿರ್ದೇಶಕರು, ಮುಖ್ಯ ಕಾರ್ಯ ನಿರ್ವಾಹಕರು ಹಾಗೂ ಸದಸ್ಯರು ಸೇರಿದ್ದರು ಹಾಗೂ ನಮ್ಮ ಸೌಹಾರ್ದದಲ್ಲಿ 10 ವರ್ಷಗಳಿಂದ ಎಫ್.ಡಿ. ಇಟ್ಟಿರುವ ಹಿರಿಯ ನಾಗರೀಕರಿಗೆ ಸನ್ಮಾನಿಸಲಾಯಿತು.



**ಪಾಂಡವಪುರ** : ಪಾಂಡವಪುರ ಗಾಣಿಗರ ಸೌಹಾರ್ದ ಸಹಕಾರಿಯ 4ನೇಯ ವಾರ್ಷಿಕ ಮಹಾಸಭೆಯನ್ನು ದಿನಾಂಕ 22-09-2024 ರಂದು ಸಹಕಾರಿ ಅಧ್ಯಕ್ಷರಾದ ಶ್ರೀ ಎಂ. ಹೇಮಂತ್ ಕುಮಾರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು. ಮಹಾಸಭೆಯ ನಿರೂಪಣೆಯನ್ನು ಶ್ರೀಮತಿ ಸೌಮ್ಯಲತ ಹೇಮಂತ್ ಕುಮಾರ್ ರರವರು ಪ್ರಾರ್ಥನೆಯನ್ನು ಕುಮಾರಿ ಸಾಧನ ರವರು, ಸ್ವಾಗತ ಭಾಷಣವನ್ನು ಶ್ರೀ. ದಿಲೀಪ್ ಅವರು ನೆರವೇರಿಸಿಕೊಟ್ಟರು. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರ ಹಾಗೂ ಪಾರಿತೋಷಕ ಗಳನ್ನು ನೀಡಿ ಗೌರವಿಸಲಾಯಿತು.



**ಚಾಮರಾಜನಗರ** : ದಿನಾಂಕ: 08.09.2024ರಂದು ಓಬಳಿ ಸೌಹಾರ್ದ ಸಹಕಾರಿ ಸಂಘದ ವಾರ್ಷಿಕ ಸಾಮಾನ್ಯ ಸಭೆಯು ಕೂಡಲೂರು, ಹನೂರು ಇಲ್ಲಿ ಜರುಗಿದ್ದು ಈ ಸಭೆಯಲ್ಲಿ ಭಾಗವಹಿಸಿ ಸದಸ್ಯರ ಹಕ್ಕು & ಜವಾಬ್ದಾರಿಯ ಕುರಿತು ಹಾಗೂ ಸಹಕಾರಿಯಿಂದ ಸದಸ್ಯರಿಗೆ ಸಿಗುವ ಆರ್ಥಿಕ ಅನುಕೂಲತೆಗಳ ಮಹತ್ವ, ಸಹಕಾರಿಯ ಬೆಳವಣಿಗೆಯಲ್ಲಿ ಸದಸ್ಯರ ಭಾಗವಹಿಸುವಿಕೆ ಬಗ್ಗೆ ಮಾಹಿತಿಯನ್ನು ನೀಡಿದರು.



**ಚಾಮರಾಜನಗರ** : ದಿನಾಂಕ : 09.09.2024ರಂದು ಶ್ರೀ ವೀರಭದ್ರೇಶ್ವರ ಭದ್ರಕಾಳಮ್ಮ(ವಿಭ) ಸೌಹಾರ್ದ ಸಹಕಾರಿ ಸಂಘ ದ 4ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು ಕಾಗಲವಾಡಿ, ಚಾಮರಾಜನಗರ ಜಿಲ್ಲೆ ಇಲ್ಲಿ ಜರುಗಿದ್ದು ಸದರಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆದ ಶ್ರೀ ಬಲರಾಮ್ ಎನ್. ರವರು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು.



**ಮಂಡ್ಯ** : ದಿನಾಂಕ : 12.09.2024ರಂದು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ನೂತನ ಕಛೇರಿಯನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ ಇವರು ಉದ್ಘಾಟಿಸಿದರು ಒಕ್ಕೂಟದ ಅಧ್ಯಕ್ಷರಾದ ಶ್ರೀ ಗುರುರಾಜ್ ಹಾಗೂ ಉಪಾಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯ ಹಾಗೂ ಒಕ್ಕೂಟದ ಎಲ್ಲಾ ನಿರ್ದೇಶಕರುಗಳು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ ರವರು ಭಾಗವಹಿಸಿದ್ದರು.



**ಚಾಮರಾಜನಗರ** : ದಿನಾಂಕ : 08.09.2024ರಂದು ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಬಸನದೊಡ್ಡಿ ಗ್ರಾಮದಲ್ಲಿ ನೂತನ ಸಹಕಾರಿಯ ರಚನೆ ಮಾಡುವ ಕುರಿತು ಪ್ರವರ್ತಕರ ಸಭೆಯನ್ನು ಮಾಡಿ ಸೌಹಾರ್ದ ಕಾಯ್ದೆಯ ಬಗ್ಗೆ ಮತ್ತು ಗ್ರಾಮದಲ್ಲಿ ಸಹಕಾರಿಯ ಮಹತ್ವದ ಬಗ್ಗೆ ಮಾಹಿತಿಯನ್ನು ನೀಡಿದರು.



**ಮೈಸೂರು** : ದಿನಾಂಕ : 10.09.2024ರಂದು ಭೂಮಿ ವ್ಯವಸಾಯ ಹಾಗೂ ಗ್ರಾಮೀಣ ಅಭಿವೃದ್ಧಿ ಸೌಹಾರ್ದ ಸಹಕಾರಿ ಸಂಘ, ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆದ ಶ್ರೀ ಸುರೇಶ್ ಆರ್ .ಎಸ್ ರವರು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು.



**ಮಂಡ್ಯ** : ದಿನಾಂಕ : 12.09.2024ರಂದು ಭೈರವ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಸಹಕಾರಿಗೆ ಪ್ರಾಂತೀಯ ಅಧಿಕಾರಿ ಆದ ಶ್ರೀ ಗುರುಪ್ರಸಾದ ಬಂಗೇರ ರವರು ಭೇಟಿ ನೀಡಿ ಸೌಹಾರ್ದ ಸಹಕಾರಿ ಕಾಯಿದೆ ಹಾಗೂ ಸಹಕಾರಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳಿಗೆ ಮಾಹಿತಿಯನ್ನು ನೀಡಿದರು.



**ಮಂಡ್ಯ** : ದಿನಾಂಕ : 12.09.2024ರಂದು ಕ್ರಾಂತಿಯೋಗಿ ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಸಹಕಾರಿಗೆ ಪ್ರಾಂತೀಯ ಅಧಿಕಾರಿ ಆದ ಶ್ರೀ ಗುರುಪ್ರಸಾದ ಬಂಗೇರ ರವರು ಭೇಟಿ ನೀಡಿ ಸೌಹಾರ್ದ ಸಹಕಾರಿ ಕಾಯಿದೆ ಹಾಗೂ ಸಹಕಾರಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳಿಗೆ ಮಾಹಿತಿಯನ್ನು ನೀಡಿದರು.



**ದಕ್ಷಿಣ ಕನ್ನಡ** : ದಿನಾಂಕ 16.09.24 ರಂದು ಶ್ರೀ ಗುರುಶಕ್ತಿ ಸೌಹಾರ್ದ ಕೋ-ಆಪರೇಟಿವ್ ಲಿ. ಮಂಗಳೂರು ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಅವರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು



**ಮೈಸೂರು** : ದಿನಾಂಕ 17.09.24ರಂದು ಹೀಲ್ ಸೌಹಾರ್ದ ವಿವಿದೋದ್ದೇಶ ಸಹಕಾರಿ ಸಂಘ ನಿ., ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆದ ಶ್ರೀ ಸುರೇಶ್ ಆರ್ .ಎಸ್ ರವರು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು.



**ಮೈಸೂರು** : ದಿನಾಂಕ 14.09.24ರಂದು ಇಂದು ಕರ್ನಾಟಕ ಶ್ರೇಷ್ಠ ಸೌಹಾರ್ದ ಸಹಕಾರಿ ಸಂಘ ನಿಯಮಿತ ಕೆ ಆರ್ ನಗರ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆದ ಶ್ರೀ ಸುರೇಶ್ ಆರ್ .ಎಸ್ ರವರು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು.




**ಮೈಸೂರು** : ದಿನಾಂಕ 16.09.24 ರಂದು ಸ್ಪಟಿಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ಟಿ ನರಸೀಪುರ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆದ ಶ್ರೀ ಸುರೇಶ್ ಆರ್ .ಎಸ್ ರವರು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು.



**ಚಾಮರಾಜನಗರ** : ದಿನಾಂಕ : 17.09.2024ರಂದು ಶ್ರೀ ಮುರುಘರಾಜೇಂದ್ರಸ್ವಾಮಿ ಸೌಹಾರ್ದ ಸಹಕಾರಿ ಸಂಘ ನಿ.,ಇದರ ವಾರ್ಷಿಕ ಸಾಮಾನ್ಯ ಸಭೆಯು ಬಸವ ಮಹಾ ಮನೆಯ ಆವರಣ, ಶ್ರೀಮಠ, ಮರಿಯಾಲ ಇಲ್ಲಿ ನಡೆಯಿತು ಈ ಸಭೆಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರಾ, ಪ್ರಾಂತೀಯ ಅಧಿಕಾರಿ ಇವರು ಭಾಗವಹಿಸಿ ಸದಸ್ಯರುಗಳಿಗೆ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಹಕಾರಿಯಲ್ಲಿ ಸದಸ್ಯರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಿದರು.



**ಮೈಸೂರು** : ದಿನಾಂಕ 21.09.24ರಂದು ಭವಿಷ್ಯ ನಿಧಿ ಸೌಹಾರ್ದ ಸಹಕಾರಿ ಸಂಘ ನಿ., ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆದ ಶ್ರೀ ಸುರೇಶ್ ಆರ್ .ಎಸ್ ರವರು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು.



**ಬೆಂಗಳೂರು:** ದಿನಾಂಕ 21–09–2024ರಂದು ಜರುಗಿದ ಹೊಂಬಾಳೆ ಗ್ರಾಮೀಣ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಬೆಂಗಳೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು,ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಹಕಾರಿ ಸದಸ್ಯರು ಭಾಗವಹಿಸಿದ್ದರು.



**ಬೆಂಗಳೂರು:** ದಿನಾಂಕ 22–09–2024ರಂದು ಜರುಗಿದ ಸಮುದಾಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಬೆಂಗಳೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಹಾಗೂ ಸಂಯುಕ್ತ ಸಹಕಾರಿಯು ಪ್ರಾರಂಭಿಸಿರುವ ಡಿಸಿಬಿಎಮ್ ಕೋರ್ಸ್‌ಗೆ ಸಂಬಂಧಿಸಿದಂತೆ ಮಾಹಿತಿ ನೀಡಿದರು.



**ಚಾಮರಾಜನಗರ** : ದಿನಾಂಕ 21.09.24ರಂದು ಶ್ರೀಮಾತೆ ಆರ್ಯಕೆದಾರರ ಸೌಹಾರ್ದ ಸಹಕಾರಿ ಸಂಘ ನಿ.,ಇದರ 2ನೇ ವಾರ್ಷಿಕ ಸಾಮಾನ್ಯ ಸಭೆಯು ಇಂದು ಮಹಾಮನೆ, ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ, ಇಲ್ಲಿ ನಡೆಯಿತು ಈ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆದ ಶ್ರೀ ಬಲರಾಮ್ ಎನ್ ರವರು ಭಾಗವಹಿಸಿ ಸದಸ್ಯರುಗಳಿಗೆ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಹಕಾರಿಯಲ್ಲಿ ಸದಸ್ಯರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಿದರು.



**ಹಾಸನ** : ದಿನಾಂಕ 21.09.2024 ರಂದು ವೀರಶೈವ ಲಿಂಗಾಯತ ಜನೋಪಯೋಗಿ ಸೌಹಾರ್ದ ಕೋ–ಆಪರೇಟಿವ್ ಲಿ. ಅರಕಲಗೂಡು ಹಾಸನ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ, ಅವಕಾಶ, ಸಹಕಾರಿಯಿಂದ ಸದಸ್ಯರಿಗೆ ಆಗುವ ಪ್ರಯೋಜನಗಳ ಬಗ್ಗೆ ಕುರಿತು ಮಾಹಿತಿ ನೀಡಿದರು.



**ಮೈಸೂರು** : ದಿನಾಂಕ 22.09.2024ರಂದು ರಾಷ್ಟ್ರೀಯ ಸಮೃದ್ಧಿ ಸೌಹಾರ್ದ ಸಹಕಾರಿ ಸಂಘ ನಿ., ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆದ ಶ್ರೀ ಸುರೇಶ್ ಆರ್ .ಎಸ್ ರವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು.



**ಚಾಮರಾಜನಗರ** : ದಿನಾಂಕ 22.09.2024ರಂದು ಶ್ರೀ ಅಕ್ಷಯಶ್ರೀ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಲಿಮಿಟೆಡ್. ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ್ ಎನ್ ರವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು.



**ಮೈಸೂರು** : ದಿನಾಂಕ 14.09.2024ರಂದು ಗಾಯತ್ರಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು, ಸಹಕಾರಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ದಕ್ಷಿಣಕನ್ನಡ** : ದಿನಾಂಕ : 01.09.2024ರಂದು ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಒಡೆಯೂರು ಶ್ರೀ ವಿವಿದೊದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು.



**ಮೈಸೂರು** : ದಿನಾಂಕ : 14.09.2024ರಂದು ಆದ್ಯ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು, ಸಹಕಾರಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಚಿಕ್ಕಮಗಳೂರು** : ದಿನಾಂಕ : 04.09.2024ರಂದು ಯಡೆಗೆರೆ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಸೌಹಾರ್ದ ಸಹಕಾರಿ ಕಾಯ್ದೆಯ ಮುಖ್ಯ ಆಶಯ ಕುರಿತು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು, ಸಹಕಾರಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಪಾಂಡವಪುರ** : ದಿನಾಂಕ 15–08–2024 ರಂದು ಪಾಂಡವಪುರ ಗಾಣಿಗರ ಸೌಹಾರ್ದ ಸಹಕಾರಿಯ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿ 78ನೆಯ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ನೆರವೇರಿಸಲಾಯಿತು.



ಗದಗ, ಸೆ. 21 : ಮಧ್ಯಮ ವರ್ಗದ ಜನರ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಗೆ ಪೂರಕ ಸೇವೆಯಲ್ಲಿ ತನ್ನನ್ನು ಸಮರ್ಪಿಸಿಕೊಂಡಿರುವ ಗದುಗಿನ ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ. ಪ್ರಸಕ್ತ ವರ್ಷ 40 ಲಕ್ಷ 40 ಸಾವಿರ ರೂ.ಗಳ ನಿವ್ವಳ ಲಾಭ ಹೊಂದಿದ್ದು ಶೇರುದಾರರಿಗೆ ಶೇ. 12 ರಷ್ಟು ಡಿವ್ಹಿಡೆಂಡ್ ನೀಡಲಿದೆ ಎಂದು ಸಂಘದ ಸಂಸ್ಥಾಪಕ ಅಧ್ಯಕ್ಷ ಜಿ.ಎಂ.ಪಲ್ಲೇದ ಹೇಳಿದರು.

ಅವರು ಶನಿವಾರ ನಗರದ ಉಷಾದೇವಿ ಗೋವಿಂದರಾಜ ಕುಷ್ಟಗಿ ರೋಟರಿ ಕಮ್ಯೂನಿಟಿ ಕೇರ್ಸೆಂಟರ್ನಲ್ಲಿ ಏರ್ಪಡಿಸಿದ್ದ ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ಸಂಘದ 10ನೇ ವಾರ್ಷಿಕ ಸರ್ವಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಂಘದ ವರದಿ ವರ್ಷದಲ್ಲಿ 112 ಕೋಟಿ 52 ಲಕ್ಷ 52 ಸಾವಿರ ರೂ.ಗಳಷ್ಟು ವಹಿವಾಟು ನಡೆಸಿದ್ದು ಕಳೆದ ಸಾಲಿನ ಅಂತ್ಯಕ್ಕೆ ದುಡಿಯುವ ಬಂಡವಾಳ 28 ಕೋಟಿ 62 ಲಕ್ಷ 68 ಸಾವಿರ ರೂ.ಗಳಿದ್ದು ವರದಿ ವರ್ಷದ ಅಂತ್ಯಕ್ಕೆ 30 ಕೋಟಿ 70 ಲಕ್ಷ 51 ಸಾವಿರ ರೂ.ಗಳಷ್ಟಾಗಿದೆ ಎಂದ ಅವರು ನಿರ್ದೇಶಕರು ಮತ್ತು ಆಡಳಿತ ಸಿಬ್ಬಂದಿಯವರು ಕಟ್ಟುನಿಟ್ಟಿನ ಕ್ರಮ, ದಕ್ಷ ಮತ್ತು ಪ್ರಾಮಾಣಿಕ ಕಾರ್ಯಗಳಿಂದಾಗಿ ಸಂಘವು ಸಾರ್ವನಿಕರ ವಿಶ್ವಾಸದೊಂದಿಗೆ ಪ್ರಗತಿಯಲ್ಲಿ ಮುನ್ನಡೆದಿದೆ ಎಂದರು.

ಸಂಘದ ಅಧ್ಯಕ್ಷ ವ್ಹಿ.ಎಸ್.ಶಿವಕಾಳಿಮಠ ಅವರು ಮಾತನಾಡಿ ಠೇವಣಿದಾರರ, ಶೇರುದಾರರ ಅಪಾರವಾದ ವಿಶ್ವಾಸದೊಂದಿಗೆ ಸಂಘವು 10 ವರ್ಷದ ತನ್ನ ಸೇವೆಯ ಅವಧಿಯಲ್ಲಿ ಜನಮನ್ನಣೆಗೆ ಪಾತ್ರವಾಗಿದೆ. ಜನಮುಖಿ ಸಮಾಜಮುಖಿಯಾಗಿ ಕಾರ್ಯ ಮಾಡುತ್ತಿದೆ. ರಕ್ತದಾನ, ನೇತ್ರದಾನ, ಶಾಲಾ ಮಕ್ಕಳಿಗೆ ನೋಟ್ಬುಸ್ತಕ ವಿತರಣೆ, ಸಾಧಕರಿಗೆ ಸನ್ಮಾನ, ಬೀದಿಬದಿ ವ್ಯಾಪಾರಸ್ಥರಿಗೆ ಮತ್ತು ಹಿರಿಯ ನಾಗರಿಕರಿಗೆ ಸಹಾಯ, ಮುನ್ನುರಕ್ಕೂ ನಿರುದ್ಯೋಗಿ ಪಧವಿದರರಿಗೆ ಉದ್ಯೋಗ ಅವಕಾಶ ಸೃಷ್ಟಿ ಮಾಡಲಾಗಿದೆ ಎಂದರು.

ಗಾಯಕಿ ಸಂಗೀತಾ ಭರಮಗೌಡ್ರ ಪ್ರಾಥಿಸಿದರು. ಬಿ.ಎಮ್ ಹಳ್ಳಿಕೇರಿ ಸ್ವಾಗತಿಸಿದರು. ಅಥಾವೆ ಪತ್ರಿಕೆಯನ್ನು ಟಿ.ವ್ಹಿ ಸಂಶಿ ಮಂಡಿಸಿದರು. ಜಗದೀಶ ಹುಡೇದ 2024–25ನೇ ಅಂದಾಜು ಆಯ–ವ್ಯಯ ಪತ್ರಿಕೆ ಮಂಡಿಸಿದರು. ಎಸ್.ಎಮ್ ಸರ್ವಿ ಲಾಭ ವಿಂಗಡಣೆ ವಿವರಿಸಿದರು. ಬಸವರಾಜ ಹಳ್ಳಿಕೇರಿ ನಿರೂಪಿಸಿದರು. ಮಲ್ಲು ಬಡಿಗೇರ ವಂದಿಸಿದರು.

ವೇದಿಕೆಯ ಮೇಲೆ ಲೆಕ್ಕಪರಿಶೋಧಕರಾದ ಕೆ.ಎಸ್.ಚಟ್ಟಿ, ನಿರ್ದೇಶಕರಾದ ಮಹೇಶ ಗಾಣಿಗೇರ, ಎಮ್.ಬಿ.ಲಿಂಗದಾಳ, ಪ್ರಶಾಂತ ದೇಸಾಯಿಮಠ, ಗಿರಿಯಪ್ಪ ಗಾಣಿಗೇರ, ಕಳಕಪ್ಪ ನಾಗರಾಳ, ಸುರೇಶ ಸರ್ವಿ, ಗೀತಾ ಪಲ್ಲೇದ, ಸರೋಜಾ ಲಿಂಗದಾಳ, ಶೋಭಾ ಶಿವಕಾಳಿಮಠ, ಕವಿತಾ ದೇಸಾಯಿಮಠ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಗಣ್ಯಮಹನೀಯರು ಪಾಲ್ಗೊಂಡಿದ್ದರು.



**ಶಿವಮೊಗ್ಗ:** ದಿನಾಂಕ 19–09–2024ರಂದು ಶ್ರೀ ಶಿವಪಾರ್ವತಿ ಸೌಹಾರ್ದ ಸಹಕಾರಿ ಸಂಘ ನಿ, ಮಳವಳ್ಳಿ, ಶಿಕಾರಿಪುರ ಈ ಸಹಕಾರಿಯ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜು ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು,ಉಪಾದ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಹಕಾರಿ ಸದಸ್ಯರು ಭಾಗವಹಿಸಿದ್ದರು.



**ಶಿವಮೊಗ್ಗ** : ದಿನಾಂಕ 19–09–2024ರಂದು ಮಡಿಲು ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ, ಶಿಕಾರಿಪುರ ಈ ಸಹಕಾರಿಯ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಪೂಜಾ ಕಾರ್ಯಕ್ರಮದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜು ರವರು ಭಾಗವಹಿಸಿದರು. ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಹಕಾರಿ ಸದಸ್ಯರು ಭಾಗವಹಿಸಿದ್ದರು.

**ಗದಗ :** ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ ಸಹಕಾರಿಯ ಸದಸ್ಯರಿಗೆ ತಿಳಿಸುವುದೇನೆಂದರೆ ನಮ್ಮ ಸಹಕಾ–ರಿಯ ಸನ್ 2023–24ನೇಯ ಸಾಲಿನ 28ನೇ ವಾರ್ಷಿಕ ಸರ್ವ ಸಾಧಾರಣ ಮಹಾಸಭೆಯನ್ನು ದಿನಾಂಕ 15–09–2024 ನೇಯ ಇಸ್ವಿಯ ರವಿವಾರ ದಿವಸ ಮದ್ಯಾಹ್ನ 12–00 ಘಂಟೆಗೆ ಸ್ಥಳ ನಮ್ಮ ಸಹಕಾರಿಯ ಆಪೀಸಿನ ಆವರಣ ದಲ್ಲಿ, ಸ್ಟೇಟ ಬ್ಯಾಂಕ ಎದುರಿಗೆ, ಎಪಿಎಮ್ ಸಿ ಯಾರ್ಡ, ಗದಗ. – 582101 ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಎಂ ಪಾಟೀಲ ಸಾ॥ ಮಲ್ಲಸಮುದ್ರ ಇದರ ಅಧ್ಯಕ್ಷತೆಯಲ್ಲಿ ಜರುಗುತು.

ಸಹಕಾರಿಯ ಸಂಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ ಎಸ್ ಸಂಕಣ್ಣವರ ಇವರು ಸಂಘದ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಆಡಳಿತ ಮಂಡಳಿಯ ಸದಸ್ಯರಿಗೆ ಮತ್ತು ಸಿಬ್ಬಂದಿವರ್ಗದವರಿಗೆ ಪಿಗ್ಮಿ ಸಂಗ್ರಹಕಾರ–ರಿಗೆ ಹಾಗೂ ಹಾಜರಿದ್ದ ಸಕಲ ಎಲ್ಲಾ ಸದಸ್ಯರಿಗೆ ಠೇವುದಾರಿಗೆ ಹಿತೈಷಿಗಳಿಗೆ ಸ್ವಾಗತ ಕೋರಿದರು. ಸಭೆಯ ಪ್ರಾರಂಭದ ಮೊದಲು ನಮ್ಮ ಸಹಕಾರಿಯ ಸದಸ್ಯರು ನಿಧನದ ನಿಮಿತ್ಯ 2 ನಿಮಿಷ ಮೌನ ಆಚರಿಸಲಾಯಿತು ಆ ಮೇಲೆ ಸಹಕಾರಿಯ ಮ್ಯಾನೇಜರ ಶ್ರೀ ಸಿ ವ್ಹಿ ಪಾಟೀಲ ಇವರು ಅಜೆಂಡದ ಪ್ರಕಾರ ಸಹಕಾರಿಯ 1 ರಿಂದಾ 24 ರವರೆಗೆ ಎಲ್ಲಾ ವಿಷಯಗಳು ಚರ್ಚಿಸಿ ಸರ್ವಾನುಮತದಿಂದ ಸಭೆಯಲ್ಲಿ ಅನುಮೋದಿಸಿದರು ಸಹಕಾ–ರಿಯ ಅಡಿಟ್ ಮಾಡಿದ ಜಮಾ–ಖರ್ಚು ಲಾಭ ಹಾನಿ ಮತ್ತು ಅಢಾವೆ ಪತ್ರಿಕೆಗಳನ್ನು ಮತ್ತು ಅಡಿಟ್ ವರದಿಗೆ ಅನುಪಾಲನಾ ವರದಿಯನ್ನು ಓದಿ ಸಹಕಾರಿಯ ಸಂಪೂರ್ಣ ಮಾಹಿತಿಯನ್ನು ಹಾಜರಿದ್ದ ಸದಸ್ಯರ ಸಭೆಯಲ್ಲಿ ಓದಿ ಹೇಳಿದರು ಮಾಹಿತಿಯನ್ನು ಹಾಜರಿದ್ದ ಸದಸ್ಯರ ಸಭೆಯಲ್ಲಿ ಓದಿ ಹೇಳಿದರು



**ಶ್ರೀಕೋಣಂದೂರು :** ಮಲೆನಾಡು ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ಕೋಣಂದೂರು ಇದರ 14ನೇ ವರ್ಷದ ಸರ್ವಸದಸ್ಯರ ಮಹಾಸಭೆ ದಿನಾಂಕ 21–09–2024ರಂದು ಶ್ರೀ ಶಿವಲಿಂಗೇಶ್ವರ ಸಮುದಾಯ ಭವನದಲ್ಲಿ ಯಶಸ್ವಿಯಾಗಿ ಜರುಗಿತು. ಸಹಕಾರಿಯ ಸದಸ್ಯರಾದ ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ದಿವ್ಯಸಾನಿಧ್ಯವಹಿಸಿ ಆಶೀರ್ವಚನ ನೀಡುತ್ತ ವ್ಯವಹಾರಿಕವಾಗಿ ಅಲ್ಲದೇ ಸಮಾಜಮುಖಿಯಾಗಿ ಕಾರ್ಯನಿರ್ವಹಿಸಿ, ಆರ್ಥಿಕವಾಗಿ ಹಿಂದುಳಿದ ಮಧ್ಯಮ ಹಾಗೂ ರೈತವರ್ಗದ ಜನರಿಗೆ ಸಹಕಾರ ನೀಡುತ್ತ 14 ವರ್ಷದಿಂದ ಉತ್ತಮ ದಾರಿಯಲ್ಲಿ ನಡೆಯುತ್ತಿದೆ ಎಂದರು. ಹಿರಿಯ ಷೇರುದಾರರಾದ ಪಾರ್ವತಮ್ಮನವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಶುಭ ಕೋರಿದರು. ಅಧ್ಯಕ್ಷತೆ ವಹಿಸಿದ್ದ ಸಹಕಾರಿಯ ಅಧ್ಯಕ್ಷರಾದ ಕೆ.ಆರ್.ಪ್ರಸಾದ್ ರವರು ಸಂಸ್ಥೆ ನಡೆದು ಬಂದ ದಾರಿ ತಿಳಿಸಿ, ಈ ವರ್ಷ ನಿವ್ವಳ ಲಾಭ 11,27,935=00ರೂಗಳಾಗಿದ್ದು, 11% ಡಿವಿಡೆಂಡ್ ಘೋಷಿಸಿ, ಸರ್ವರ ಪ್ರೋತ್ಸಾಹಕ್ಕೆ ಕೃತಜ್ಞತೆಗಳನ್ನು ತಿಳಿಸಿದರು. ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಜರುಗಿತು. ಮೊದಲಿಗೆ ಕು॥ ಪ್ರೀತಿ.ಕೆ.ಎಸ್ ಪ್ರಾರ್ಥಿಸಿ, ಉಪಾಧ್ಯಕ್ಷ ಕೆ.ಆರ್. ಪ್ರಶಾಂತ್ ಸ್ವಾಗತಿಸಿದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ಸತೀಶ.ಎಸ್ 2022–23ನೇ ಸಾಲಿನ ವರದಿ ಮಂಡಿಸಿದರು. ನಿರ್ದೇಶಕರಾದ ಪ್ರಸನ್ನ.ಕೆ.ಆರ್ ವಂದಿಸಿದರು. ವೇದಿಕೆಯಲ್ಲಿ ಆಡಳಿತ ಮಂಡಳಿಯ ನಿರ್ದೇಶಕರಾದ ಕೆ.ಆರ್.ಪ್ರಕಾಶ, ಯೋಗೀಶ್‌ಭಗತ್.ಎಸ್ ರವಿ.ಎನ್, ಮಾಲತೇಶ.ಹೆಚ್.ಪಿ, ಸುಬ್ರಾಯಶೆಟ್ಟಿ, ನಟರಾಜ.ಬಿ.ಎಸ್, ಗಿರೀಶ್.ಡಿ.ಆರ್, ಉಮೇಶ.ಎಸ್.ಐ, ಲತಾಪ್ರಕಾಶ, ವಾಣಿ ಬಿ.ಟಿ, ಜಂಬಣ್ಣ.ವಿ.ಎಸ್ ಮತ್ತು ದಿನೇಶ.ಕೆ.ವೈ ಉಪಸ್ಥಿತರಿದ್ದರು.




**ಚಾಮರಾಜನಗರ :** ಜೈ ಭೀಮ್ ಬಿಜಿನೆಸ್ ಸೌಹಾರ್ದ ಸಹಕಾರಿ ಸಂಘ ನಿಯಮಿತದ 3ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು ದಿನಾಂಕ:22.09.2024 ಭಾನುವಾರ ಸಮಯ 10:30 ಗಂಟೆಗೆ ಕಾರ್ಯಕ್ರಮ ಉದ್ಘಾಟನೆ ಶ್ರೀಯುತ ಆರ್ ಬಸವರಾಜುರವರು ಅಧ್ಯಕ್ಷರು ಬಿ.ಎಸ್.ಐ ಜಿಲ್ಲಾ ಶಾಖೆ ಚಾಮರಾಜನಗರ ಮತ್ತು ನಿರ್ದೇಶಕರು ಜೈ ಭೀಮ್ ಬಿಜಿನೆಸ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಸಭೆಯ ಅಧ್ಯಕ್ಷತೆಯನ್ನು ಶ್ರೀಯುತ ಮಲ್ಲಿಕಾರ್ಜುನ ಸ್ವಾಮಿರವರು ಅಧ್ಯಕ್ಷರು ಜೈ ಭೀಮ್ ಬಿಜಿನೆಸ್ ಸೌಹಾರ್ದ ಸಹಕಾರಿ ಸಂಘ ನಿ ಇವರು ವಹಿಸಿದ್ದರು. ಈ ಸಭೆಯಲ್ಲಿ ಸಹಕಾರಿ ಆಡಳಿತ ಮಂಡಳಿಯ ನಿರ್ದೇಶಕರುಗಳು ಹಾಗೂ ಸದಸ್ಯರು ಭಾಗವಹಿಸಿದ್ದರು. ಈ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಯಾದ ಶ್ರೀ ಬಲರಾಮ್ ಎನ್ ರವರು ಭಾಗವಹಿಸಿ ಸಹಕಾರಿಯಲ್ಲಿ ಸದಸ್ಯರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಿದರು.



**ಬೆಂಗಳೂರು:** ದಿನಾಂಕ 01–09–2024ರಂದು ಜರುಗಿದ ಸಂಕ್ರಾಂತಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಬೆಂಗಳೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು,ಉಪಾದ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಹಕಾರಿ ಸದಸ್ಯರು ಭಾಗವಹಿಸಿದ್ದರು.



**ಬೆಂಗಳೂರು:** ಶ್ರೀ ನಗರೇಶ್ವರ ಸೌಹಾರ್ದ ಸಹಕಾರಿಯ 12ನೇ ಸಾಮಾನ್ಯ ಸಭೆಯು ದಿನಾಂಕ 01–09–2024ರಂದು ಗಾಂಧಿಬಜಾರ್‌ನ ಶ್ರೀ ನಗರೇಶ್ವರಸ್ವಾಮಿ ಕಲ್ಯಾಣ ಮಂಟಪದಲ್ಲಿ ಯಶಸ್ವಿಯಾಗಿ ನೆರವೇ–ರಿತು. ಈ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು. ಸಹಕಾರಿಯು ಕಳೆದ ಸಾಲಿನಲ್ಲಿ ಸ್ವಂತ ಕಟ್ಟಡ ಖರೀದಿಸಿರುವ ಬಗ್ಗೆ ಹಾಗೂ ಶೇ.10 ರಷ್ಟು ಲಾಭಾಂಶವನ್ನು ನೀಡುವ ಮೂಲಕ ದಾಖಲೆಯನ್ನು ಮಾಡಿರುತ್ತದೆ.



**ದಾವಣಗೆರೆ:** ದಿನಾಂಕ 01–09–2024ರಂದು ಜರುಗಿದ ಶ್ರೀ ನಂದಿ ಸೌಹಾರ್ದ ಸಹಕಾರಿ ಸಂಘ ನಿ, ಮಲೆಬೆನ್ನೂರು, ದಾವಣಗೆರೆ ಸಹಕಾರಿಯ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾದ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಹಕಾರಿ ಸದಸ್ಯರು ಭಾಗವಹಿಸಿದ್ದರು.



**ಶಿವಮೊಗ್ಗ:** ದಿನಾಂಕ 13–09–2024ರಂದು ಸಹ್ಯಾದ್ರಿ ಸೌಹಾರ್ದ ಸಹಕಾರಿ ಸಂಘ ನಿ, ಶಿಕಾರಿಪುರ ಈ ಸಹಕಾರಿಯ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜು ರವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾದ್ಯಕ್ಷರು, ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಹಕಾರಿ ಸದಸ್ಯರು ಭಾಗವಹಿಸಿದ್ದರು.



ಶ್ರೀ ಕೆ ಪಿ ಮಗೆಣ್ಣವರ ಲಕ್ಷ್ಮಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಲಿ ಮಾಂಜರಿ ಇದರ 35ನೇ ವಾರ್ಷಿಕ ಸರ್ವ ಸಾಧಾರಣ ಸಭೆ ದಿನಾಂಕ 20/09/2024 ರಂದು ಬೆಳಿಗ್ಗೆ 10:30 ಕ್ಕೆ ಜರುಗಿತು. ಸಹಕಾರಿ ವತಿಯಿಂದ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು ಶಿಬಿರದಲ್ಲಿ 108 ಜನರು ರಕ್ತದಾನ ಮಾಡಿರುತ್ತಾರೆ ಹಾಗೂ ರೋಗಿಗಳಿಗೆ ಹಣ್ಣು ಹಂಪಲ ವಿತರಣೆ ಮಾಡಲಾಯಿತು.



**ಚಾಮರಾಜನಗರ** : ದಿನಾಂಕ 24.09.2024ರಂದು ರೇನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ವಾರ್ಷಿಕ ಸಭೆಯು ಸಹಕಾರಿಯ ಆವರಣದಲ್ಲಿ ಜರುಗಿತು ಈ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆದ ಶ್ರೀ ಬಲರಾಮ್ ಎನ್ ರವರು ಭಾಗವಹಿಸಿ ಸದಸ್ಯರುಗಳಿಗೆ ಸಹಕಾರಿಯಿಂದ ಸಿಗುವ ಆರ್ಥಿಕ ಸೌಲಭ್ಯಗಳ ಬಗ್ಗೆ ಹಾಗೂ ಸಹಕಾರಿಯಲ್ಲಿ ಸದಸ್ಯರ ಹಕ್ಕು & ಜವಾಬ್ದಾರಿಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು.



**ಕೊಡಗು** : ಕೊಡವ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿ ಲಿ., ವತಿಯಿಂದ ದಿನಾಂಕ : 13.09.2024ರಂದು ಅಮ್ಮಾತ್ತ ಶಾಖೆಯಲ್ಲಿ ಹಾಗೂ ದಿನಾಂಕ : 14.09.2024ರಂದು ವಿರಾಜಪೇಟೆ ಸಹಕಾರಿಯ ಕಛೇರಿಯಲ್ಲಿ ಉಚಿತ ನೇತ್ರ ತಪಾಸಣಾ ಶಿಭಿರ ವನ್ನು ಏರ್ಪಡಿಸಲಾಗಿತ್ತು. ಸಹಕಾರಿಯ ಸದಸ್ಯರು ಹಾಗೂ ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದರು ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು** : ದಿನಾಂಕ 24.09.24 ರಂದು ಹೆಬ್ಬಾಳ್ ಕೈಗಾರಿಕಾ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮೈಸೂರು ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಅವರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.



**ಮೈಸೂರು** : ದಿನಾಂಕ 22.09.2024 ರಂದು ರಾಷ್ಟ್ರೀಯ ಸಮೃದ್ಧಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ್ ಆರ್ ಎಸ್ ರವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು.



**ಮೈಸೂರು** : ದಿನಾಂಕ 22.09.2024 ರಂದು ಶ್ರೀ ಭುವನೇಶ್ವರಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ್ ಆರ್ ಎಸ್ ರವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು.



**ಮೈಸೂರು** : ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರ ಸಂಘದ ಹೊಸ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ : 04.09.2024ರಂದು ಜರುಗಿದ್ದು, ಪದಾಧಿಕಾರಿಗಳ ಚುನಾವಣೆ ದಿನಾಂಕ : 04.09.2024ರಂದು ಜರುಗಿದ್ದು ಅಧ್ಯಕ್ಷರಾಗಿ ಶ್ರೀ.ಎಮ್.ಎಸ್.ರಾಜೇಂದ್ರಕುಮಾರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಸಿ. ಅಭಿನಂದನ್ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



**ತುಮಕೂರು** : ದಿನಾಂಕ 26–09–2024ರಂದು ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ವೀರಶೈವ ಪತ್ತಿ ಸವಹಾರ್ದ ಸಹಕಾರಿ ನಿ, ಕುಣಿಗಲ್ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ವಿವಿಧ ಇಲಾಖೆಗಳಿಗೆ ಕಲಂ 34ರ ಪ್ರಕಾರ ಶಾಸನಬದ್ಧ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಸಲ್ಲಿಕೆ ಬಗ್ಗೆ ಮಾಹಿತಿ ನೀಡಿದರು. 7 ಸೌಹಾರ್ದ ಸಹಕಾರಿಗಳಿಂದ 8 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.



**ತುಮಕೂರು** : ದಿನಾಂಕ 28–09–2024ರಂದು ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶಿರಾ ವಾಸವಿ ಸೌಹಾರ್ದ ಸಹಕಾರಿ ಸಂಘ ನಿ, ಶಿರಾ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜುನಾಥ್ ಬಿ. ರವರು ಉದ್ಘಾಟಿಸಿದರು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ವಿವಿಧ ಇಲಾಖೆಗಳಿಗೆ ಕಲಂ 34ರ ಪ್ರಕಾರ ಶಾಸನಬದ್ಧ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಸಲ್ಲಿಕೆ ಬಗ್ಗೆ ಮಾಹಿತಿ ನೀಡಿದರು. 6 ಸೌಹಾರ್ದ ಸಹಕಾರಿಗಳಿಂದ 9 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.



**ತುಮಕೂರು** : ದಿನಾಂಕ 27–09–2024ರಂದು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಬೃಂದಾವನ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಗುಬ್ಬಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಗೋಸಲ ಚನ್ನಬಸವೇಶ್ವರ ಸೌಹಾರ್ದ ಸಹಕಾರಿ ನಿ, ಗುಬ್ಬಿ ಇದರ ಅಧ್ಯಕ್ಷರಾದ ಶ್ರೀ ಗಿರೀಶ್ ರವರು ಉದ್ಘಾಟಿಸಿದರು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ವಿವಿಧ ಇಲಾಖೆಗಳಿಗೆ ಕಲಂ 34ರ ಪ್ರಕಾರ ಶಾಸನಬದ್ಧ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಸಲ್ಲಿಕೆ ಬಗ್ಗೆ ಮಾಹಿತಿ ನೀಡಿದರು. 7 ಸೌಹಾರ್ದ ಸಹಕಾರಿಗಳಿಂದ 11 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.



ದಿನಾಂಕ 19–09–2024 ನೇ ಗುರುವಾರ ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 25ನೇ ಸರ್ವಸದಸ್ಯರ ಸಭೆಯು ಕೊಪ್ಪದ ಗಾಯತ್ರಿ ಮಂದಿರದಲ್ಲಿ ಸಹಕಾರಿಯ ಅಧ್ಯಕ್ಷರಾದ ಮಂಗಳಾ ಕೆ.ಸಿ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಸಕ್ತ ಸಾಲಿನಲ್ಲಿ ಸಹಕಾರಿಯು ರೂ 39.86 ಲಕ್ಷ ಲಾಭಗಳಿಸಿದ್ದು ಸದಸ್ಯರಿಗೆ 11% ಡಿವಿಡೆಂಡ್ ನೀಡಲು ತೀರ್ಮಾನಿಸಲಾಯಿತು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀಯುತ ದಿವಾಕರ ಎ ಇವರು ಸರ್ವ ಸದಸ್ಯರನ್ನು ಹಾಗೂ ಗಣ್ಯರನ್ನು ಸ್ವಾಗತಿಸಿದರು. ಸಹಕಾರಿಯ ಎಲ್ಲಾ ನಿರ್ದೇಶಕರು, ಲೆಕ್ಕಪರಿಶೋಧಕರು, ಸಹಕಾರಿಯ ನ್ಯಾಯವಾದಿಗಳು ಮುಖ್ಯಕಾರ್ಯನಿರ್ವಾಹಕ ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು ಶ್ರೀ ಕೆ.ಶಶಿಶೇಖರ್ ಇವರು ವಂದಿಸಿದರು.



**ಮಣಿಪಾಲ :** ಸಾರಸ್ವತ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮಣಿಪಾಲ ಇದರ ಮಹಾಸಭೆಯು 24.08.2024ರಂದು ಮಣಿಪಾಲದ ಆರ್.ಎಸ್.ಬಿ ಭವನದ ಮೊದಲನೇ ಮಹಡಿಯಲ್ಲಿ ಸಹಕಾರಿಯ ಅಧ್ಯಕ್ಷರಾದ ವಾಸುದೇವ ಕೃಷ್ಣ ನಾಯಕ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಂದರ್ಭ ದೇವರ ಸ್ತುತಿಯೊಂದಿಗೆ ಪ್ರಾರ್ಥನೆಯನ್ನು ನಿರ್ದೇಶಕರಾಗಿರುವ ಶ್ರೀಮತಿ ಜ್ಯೋತಿ ಡಿ ಕಾಮತ್ ಮತ್ತು ಸುಮಂಗಳಾ ಪಿ. ನಾಯಕ್ ಇವರು ನೆರವೇರಿಸಿದರು. ಕಾರ್ಯಕ್ರಮಕ್ಕೆ ಉಪಾಧ್ಯಕ್ಷರಾದ ಮನೋಹರ ಮರಾಠೆ ಇವರು ಸ್ವಾಗತಿಸಿದರು, ಲೆಕ್ಕ ಪರಿಶೋಧನಾ ವರದಿ ವಾಚನೆ ಮತ್ತು ನಿರೂಪಣೆಯನ್ನು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಭುವನೇಶ್ ಪ್ರಭು ಇವರು ನೆರವೇರಿಸಿದರು. ಈ ಸಂದರ್ಭ ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮಾಜದ ವಿಶೇಷ ಸಾಧಕರಾದ ಶ್ರೀ ಸದಾಶಿವ ಪ್ರಭು ಎಳ್ಳಾರೆ (ವಾಯುಸೇನೆ), ಶ್ರೀ ರವೀಂದ್ರ ಕಾಮತ್ ಎಳ್ಳಾರೆ (ಭೂಸೇನೆ), ಶ್ರೀ ರಾಜೇಂದ್ರ ಪಾಟ್ಕರ್, ಕೋಡುಗುಡ್ಡೆ (ಭೂಸೇನೆ), ಶ್ರೀ ದೇವದಾಸ್ ಪಾಟ್ಕರ್ ಮುದರಂಗಡಿ (ರಕ್ತದಾನಿ), ಶ್ರೀ ರಾಮದಾಸ್ ಪ್ರಭು 92 ಹೇರೂರು (ಉಪನ್ಯಾಸಕರು), ಶ್ರೀ ಲಕ್ಷ್ಮೀನಾರಾಯಣ ಪ್ರಭು ಕೊಡಿಬೆಟ್ಟು (ಸಮಾಜ ಸೇವೆ), ಇವರೆಲ್ಲರನ್ನೂ ಸನ್ಮಾನಿಸಲಾಯಿತು. ಒಟ್ಟಾರೆ ಮೂವರು ಯೋಧರನ್ನು, ಒಬ್ಬರು ರಕ್ತದಾನಿ, ಒಬ್ಬರು ನಿವೃತ್ತ ಪ್ರಾಂಶುಪಾಲರು ಮತ್ತು ಒಬ್ಬರು ಸಮಾಜ ಸೇವಕರನ್ನು ಸನ್ಮಾನಿಸಿದಂತಾಯಿತು. ತದನಂತರ ಅಧ್ಯಕ್ಷೀಯ ಭಾಷಣ ಮಾಡಿದ ಸಹಕಾರಿಯ ಅಧ್ಯಕ್ಷರಾದ ವಾಸುದೇವ ಕೃಷ್ಣ ನಾಯಕ್ ನಮ್ಮ ಸಹಕಾ–ರಿಯು ಅಭಿವೃದ್ಧಿ ಹೊಂದುತ್ತಿದ್ದು ತಮ್ಮೆಲ್ಲರ ಸಹಕಾರದಿಂದ ಈ ಮಟ್ಟಕ್ಕೆ ಬೆಳೆದಿದೆ ಎನ್ನಲು ನಮಗೆ ಸಂತೋಷವಾಗುತ್ತದೆ ಎಂದು ತಿಳಿಸಿದರು ಕಳೆದ 4.5 ವರ್ಷದಲ್ಲಿ ರೂ. 31,32,595/– ರಷ್ಟು ಲಾಭಗಳಿಸಿ 11% ದಷ್ಟು ಡಿವಿಡೆಂಡ್ ಘೋಷಣೆ ಮಾಡಿರುತ್ತೇವೆ ಎಂದರು. ಈ ಅಕ್ಟೋಬರ್ ತಿಂಗಳ ನವರಾತ್ರಿ ಸಂದರ್ಭ ಮುದರಂಗಡಿ ಶಾಖೆ ತೆರೆಯುವ ಮಾಹಿತಿಯನ್ನು ಸಭೆಗೆ ನೀಡಿದರು. ಮತ್ತು ಸದಸ್ಯರ ಸಂಪೂರ್ಣ ಸಹಕಾರ ಇನ್ನೂ ಹೆಚ್ಚು ನೀಡಿದಲ್ಲಿ ನಮ್ಮ ಸಹಕಾರಿಯು ಇನ್ನಷ್ಟು ಅಭಿವೃದ್ಧಿ ಹೊಂದಲು ಸಹಕಾರಿಯಾಗುವುದು ಎಂದು ತಿಳಿಸಿದರು. ಉಪಾಧ್ಯಕ್ಷರಾದ ಮನೋಹರ ಮರಾಠೆ, ನಿರ್ದೇಶಕರುಗಳಾದ ಪಾಂಡುರಂಗ ನಾಯಕ್, ದೇವೇಂದ್ರ ನಾಯಕ್, ರಾಮದಾಸ್ ನಾಯಕ್, ಗಣಪತಿ ನಾಯಕ್, ದೇವೇಂದ್ರ ವಾಗ್ಲೆ, ಶ್ರೀಮತಿ ಜ್ಯೋತಿ ಡಿ. ಪ್ರಭು, ಶ್ರೀಮತಿ ಗೀತಾ ಎಸ್. ಪ್ರಭು, ಶ್ರೀಮತಿ ಸುಮಂಗಳ ಪಿ. ನಾಯಕ್, ಮುಖ್ಯ ಕಾರ್ಯನಿರ್ವಾಹಕರಾದ ಭುವನೇಶ್ ಪ್ರಭು, ಸಿಬ್ಬಂದಿ ವರ್ಗದವರು ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು. ಧನ್ಯವಾದವನ್ನು ನಿರ್ದೇಶಕರಾದ ಶ್ರೀ ಪಾಂಡುರಂಗ ನಾಯಕ್ ಇವರು ಸಲ್ಲಿಸಿದರು.



## ಮಹಿಳೆ ಸದೃಢವಾದರೆ ಕುಟುಂಬ, ಸಮಾಜದ ಉನ್ನತಿ : ಕಾಗೇರಿ

**ಶಿರಸಿ:** ಮಹಿಳೆಯರು ಸುಶಿಕ್ಷಿತರಾಗಿ, ಆರ್ಥಿಕವಾಗಿ ಸದೃಢರಾದಾಗ ಆ ಕುಟುಂಬ, ಸಮಾಜದ ಉನ್ನತಿ ಸಾಧ್ಯವಾಗುತ್ತದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಪ್ರಾಯಪಟ್ಟರು.

ನಗರದ ನೆಮ್ಮದಿ ರಂಗಧಾಮದಲ್ಲಿ ಭಾನುವಾರ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ಸಂಘದ ಸಾಮಾನ್ಯ ಸಭೆಯ ಅಂಗವಾಗಿ ಆಯೋಜಿಸಿದ್ದ ಮಹಿಳಾ ಸಮಾವೇಶ, ಸನ್ಮಾನ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಇಂತಹ ಸಂಸ್ಥೆಗಳ ಕಾರಣದಿಂದ ಮಹಿಳೆಯರು ಸಂಘಗಳ ಚಟುವಟಿಕೆಯಲ್ಲಿ ಹೆಚ್ಚೆಚ್ಚು ತೊಡಗಿದ್ದಾರೆ. ಇದರಿಂದ ಮಹಿಳೆಯರು ಸಾಕಷ್ಟು ಜಾಗೃತರಾಗಿದ್ದಾರೆ. ಶ್ರಮಿಕ ಮಹಿಳೆಯರು ಸೇರಿ ತಮಗಾಗಿ ಕಟ್ಟಿಕೊಂಡ ಸ್ಕೊಡವೆಸ್ ಮಹಿಳಾ ಸೌಹಾರ್ದ ಸಹಕಾರಿಯ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಶ್ರಮಿಕ ಮಹಿಳೆಯರು ಸಹಕಾರಿ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವಂತೆ ಆಗಿರುವುದು ಶ್ಲಾಘನೀಯ. ಉತ್ತರ ಕನ್ನಡ ಜಿಲ್ಲೆಯ ಸಹಕಾರಿ ಕ್ಷೇತ್ರದಲ್ಲಿ ಈಗಾಗಲೇ ಹೆಜ್ಜೆ ಗುರುತು ಮೂಡಿಸಿರುವ ಸ್ಕೊಡವೆಸ್ ಮಹಿಳಾ ಸೌಹಾರ್ದ ಸಹಕಾರಿ ಇನ್ನೂ ಹಲವಾರು ಮೈಲಿಗಲ್ಲುಗಳನ್ನು ತಲುಪಲಿ ಎಂದು ಹಾರೈಸಿದರು.

ಮಹಿಳೆಯರು ಇಂದು ಕೇವಲ ಅಡುಗೆ ಮನೆಗೆ ಸೀಮಿತರಾಗದೇ ಸಮಾಜದ, ಸರಕಾರ ಜತೆಯಲ್ಲಿ ಕೆಲಸ ಮಾಡಲು ಸಮರ್ಥರಿದ್ದೇವೆ ಎಂಬುದನ್ನು ತೋರಿಸುತ್ತಿದ್ದಾರೆ. ಇದರ ಪರಿಣಾಮ ಪ್ರಧಾನಿ ನರೇಂದ್ರ ಮೋದಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಮಾಡುವಂತಾಯಿತು ಎಂದು ಶ್ಲಾಘಿಸಿದರು.

ಮಹಿಳೆಯರು ಗ್ರಾಮ, ತಾಲೂಕು, ಜಿಲ್ಲಾ ಪಂಚಾಯಿತಿ ಸದಸ್ಯರಾಗಿ, ಎಂಎಲ್‌ಎ ಹಾಗೂ ಎಂಪಿಗಳಾಗಿ ಯಾವ ಪುರುಷರಿಗೂ ಕಡಿಮೆ ಇಲ್ಲದಂತೆ ಕೆಲಸ ಮಾಡುತ್ತಿದ್ದಾರೆ ಎಂದು ಕಾಗೇರಿ ಮೆಚ್ಚುಗೆ ವ್ಯಕ್ತಪಡಿಸಿದರು.

ಅಕ್ಟೋಬರ್ 2ರಂದು ಜನಾಂದೋಲನ ರೂಪದಲ್ಲಿ ಸ್ವಚ್ಛತಾ ಅಭಿಯಾನ ನಡೆಯಬೇಕು. ಇದಕ್ಕೆ ಸ್ವ ಸಹಾಯ ಸಂಘಗಳು ಕೈಜೋಡಿಸಬೇಕು ಎಂದು ಸಂಸದ ಕಾಗೇರಿ ಮನವಿ ಮಾಡಿದರು.

ಇದೊಂದು ವಾರ್ಷಿಕ ಮಹಾಸಭೆ ಆಗಿದ್ದರೂ ಮಹಾಸಭೆಯೊಂದಿಗೆ ಇದನ್ನೊಂದು ಮಹಿಳಾ ಸಮಾವೇಶವಾಗಿ ಮಾಡಿ ಎಲ್ಲ ಸದಸ್ಯರು ಸಂಭ್ರಮದಿಂದ ಪಾಲ್ಗೊಳ್ಳುವ ಹೊಸ ರೀತಿಯ ಕಾರ್ಯಕ್ರಮವಾಗಿ ರೂಪಿಸಿದ ಸರಸ್ವತಿ ಎನ್ ರವಿ ಅವರನ್ನು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ಸಂಘದ ಸ್ಥಾಪನೆಗೆ ಪ್ರೇರಕ ಶಕ್ತಿಯಾಗಿ, ಪ್ರಾರಂಭದಿಂದಲೂ ಸಂಘದ ಬೆಳವಣಿಗೆಗೆ ಸಹಕರಿಸಿದ ಸ್ಕೊಡ್‌ವೆಸ್ ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕ ಡಾ.ವೆಂಕಟೇಶ ನಾಯ್ಕರವರನ್ನು ಸಂಸದ ಕಾಗೇರಿಯವರು ಸನ್ಮಾನಿಸಿದರು.

ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷೆ ಸರಸ್ವತಿ ಎನ್.ರವಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘ ನಡೆದು ಬಂದ ಹಾದಿಯ ಕುರಿತು ವಿವರಿಸಿದರು.

ರೋಟರಿ ಕ್ಲಬ್ ಅಧ್ಯಕ್ಷ ಡಾ.ಸುಮನ್ ಹೆಗಡೆ, ನಗರಸಭೆ ಅಧ್ಯಕ್ಷೆ ಶರ್ಮಿಳಾ ಮಾದನಗೇರಿ ಹಾಗೂ ಸ್ಕೊಡ್‌ವೆಸ್ ಸಂಸ್ಥೆ ನಿರ್ದೇಶಕ ಪ್ರೊ.ಕೆ. ಎನ್.ಹೊಸ್ಮನಿ ಸಂದರ್ಭೋಚಿತವಾಗಿ ಮಾತನಾಡಿದರು. ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ಉಪಾಧ್ಯಕ್ಷೆ ಹೇಮಲತಾ ಚೌಗಲೆ ಹಾಗೂ ಎಲ್ಲ ನಿರ್ದೇಶಕರು ಉಪಸ್ಥಿತರಿದ್ದರು. ವಸುಧಾ ಹೆಗಡೆ, ನಾದಶ್ರೀ ಮತ್ತು ಪ್ರತಿಭಾ ಪ್ರಾರ್ಥಿಸಿದರು. ಮೇಘನಾ ಮತ್ತು ಉಮೇಶ ನಿರೂಪಿಸಿದರು. ಮುಖ್ಯ ಕಾರ್ಯನಿರ್ವಾಹಕ ಗಣಪತಿ ನಾಯ್ಕ ವಂದಿಸಿದರು.

ಸಭೆಯಲ್ಲಿ ಉತ್ತರಕನ್ನಡ ಜಿಲ್ಲೆ ಹಾಗು ಹಾವೇರಿಯಿಂದ 650ಕ್ಕೂ ಮಹಿಳಾ ಸದಸ್ಯೆಯರು ಪಾಲ್ಗೊಂಡರು.

ಈ ಸಂದರ್ಭದಲ್ಲಿ ಸ್ವಸಹಾಯ ಸಂಘದಲ್ಲಿ ವಿಶೇಷ ಸಾಧನೆ ಮಾಡಿದ ಮಹಿಳಾ ಸದಸ್ಯೆಯರಿಗೆ, ಪಿಗ್ಮಿ ಸಂಗ್ರಹಕರಾರರು ಹಾಗೂ ಸಹಕಾರಿ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

---



ದಿನಾಂಕ 22/09/2024 ರಂದು ಶ್ರೀ ಮಾತಾಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆಯ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ,ವಿ. ಶಾಸ್ತ್ರಿಯವರು ಮಾಡಿದರು. ಎಸ್.ಎಸ್.ಎಲ್.ಸಿ ಮತ್ತು ಪಿ ಯು ಸಿ ಯಲ್ಲಿ 85% ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸಹಕಾರಿಯ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಪ್ರೊತ್ಸಾಹಕ ಧನವನ್ನು ವಿತರಿಸುತ್ತಿರುವುದು. 75 ವರ್ಷಕ್ಕಿಂತ ಮೆಲ್ಪಟ್ಟ ಸಹಕಾರಿಯ ಸದಸ್ಯರಿಗೆ ಫಲ ತಾಂಂಬೂಲ ಕೊಟ್ಟು ಸನ್ಮಾನ ಮಾಡುತ್ತಿರುವುದು.

ಸಹಕಾರಿಯು 2023–24ನೇ ಆರ್ಥಿಕ ವರ್ಷದಲ್ಲಿ ನಮ್ಮ ಸಹಕಾರಿಯ ಎಸಿಸಿಯಿಂದ ರೂ.12,17,56,508/ ಮೌಲ್ಯದ ಇ–ಸ್ಟಾಂಪ್ ವ್ಯವಹಾರವನ್ನು ಮಾಡಿದ್ದು ಸದರಿ ಸಾಲಿನಲ್ಲಿ ನಮ್ಮ ಸಹಕಾರಿಯು ಅತೀ ಹೆಚ್ಚು ಇ–ಸ್ಟಾಂಪ್ ವ್ಯವಹಾರ ಮಾಡಿದ ಸೌಹಾರ್ದ ಸಹಕಾರಿಗಳ ಪೈಕಿ ರಾಜ್ಯದಲ್ಲಿ ಮೂರನೇ ಸ್ಥಾನದಲ್ಲಿರುತ್ತದೆ.

---



ನಗರದ ಶ್ರೀ ರಾಚೋಟಿ ವೀರಣ್ಣ ಸೌಹಾರ್ದ ಸಹಕಾರಿ ಸಂಘ ಯಾದಗಿರಿ ಸಹಕಾರಿಯ 2023–24ನೇ ಸಾಲಿನ ವಾರ್ಷಿಕ 6ನೇ ಸಾಮಾನ್ಯ ಸಭೆಯನ್ನು ಆರ್.ವಿ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀಮತಿ ಕಮಲಾ ಎನ್. ದೇವರಕಲ್ ರವರು ಜ್ಯೋತಿ ಬೆಳಗುವುದರೊಂದಿಗೆ ಸಮಾರಂಭಕ್ಕೆ ಚಾಲನೆ ನೀಡಿ. ಸೌಹಾರ್ದ ಸಹಕಾರಿ ಸಂಘದ ಬೆಳವಣಿಗೆ, ಸೌಲಭ್ಯಗಳು, ಅದರ ರೂಪರೇಷಗಳನ್ನು ಕುರಿತು ಮಾತನಾಡಿದರು.

ಆರ್.ವಿ ವಿದ್ಯಾ ಸಂಸ್ಥೆಯ ಖಜಾಂಚಿಗಳಾದ ಶ್ರೀ ಸುರೇಶ್ ನೀಲಂಗಿರವರು 2023–24 ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪ–ರಿಶೋಧನೆ ಕುರಿತು ಸಮಾಲೋಚಿಸಿದರು. 2024–25 ನೇ ಸಾಲಿನ ಸಂಘದ ಕ್ರಿಯಾ ಯೋಜನೆಯ ವರದಿಯನ್ನು ವಿವರಿಸಿ, ಇತ್ತೀಚಿನ ದಿನಗಳಲ್ಲಿ ನಿಗದಿತ ದಿನಗಳಲ್ಲಿ ಸಾಲ ಮರುಪಾವತಿ ಮಾಡುತ್ತಿಲ್ಲ. ಬಾಕಿದಾರರು ಸಾಲ ಮರುಪಾವತಿ ಮಾಡಿ ಸಂಘದ ಅಭಿವೃದ್ಧಿಗೆ ಸಹಕ–ರಿಸಬೇಕೆಂದು ವಿನಂತಿಸಿದರು.

ಸಮಾರಂಭದ ಮುಖ್ಯ ಅತಿಥಿಗಳಾದ ಶ್ರೀ ಶೌಲಜಾ ತಪಲಿ, ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಸಂಯುಕ್ತ ಕಲಬುರ್ಗಿ ಇವರು ಸಹಕಾರಿ ಸಂಘಗಳ ಉಗಮ, ಕಾರ್ಯ, ಬೆಳವಣಿಗೆ, ಅವುಗಳ ಚಟುವಟಿಕೆ, ಸಮಾಜವು ಆರ್ಥಿಕವಾಗಿ ಸುಭದ್ರವಾಗಲು ಸೌಹಾರ್ದ ಸಹಕಾರಿ ಸಂಘಗಳ ಪಾತ್ರ ಮಹತ್ವದ್ದಾಗಿದೆ. ಬಾಪು ಸುಬೇದಾರ್ ಹಿರಿಯ ಅಧಿಕಾರಿಗಳು ಕರ್ನಾಟಕ ಗ್ರಾಮೀಣ ಬ್ಯಾಂಕ್,

ಪ್ರಾದೇಶಿಕ ಕಛೇರಿ ಯಾದಗಿರಿ ಇವರು ಸೌಹಾರ್ದ ಸಂಘದ ಕಾರ್ಯಕ್ಷಮತೆ ಮತ್ತು ಸಾಲ ಮರು ಪಾವತಿ ಹಾಗೂ ಇತರ ಚಟುವಟಿಕೆಗಳ ಕುರಿತ ಪದಾಧಿಕಾರಿಗಳಿಗೆ ತಿಳಿಸಿದರು. ಶ್ರೀ ರಾಚೋಟಿ ವೀರಣ್ಣ ಸೌಹಾರ್ದ ಸಹಕಾರಿ ಸಂಘ ಯಾದಗಿರಿ, ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಅಕ್ಕಿ ಸಂಘದ ಕಾರ್ಯವೈಖರಿ, ಲೇವಾದೇವಿ ವ್ಯವಹಾರ, ಕೈಗೊಳ್ಳಬೇಕಾದ ಯೋಜನೆಗಳ ಬಗ್ಗೆ ಮಾತನಾಡಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಸಂಯುಕ್ತ ಕಲಬುರ್ಗಿಯ ವಿಭಾಗೀಯ ಅಧಿಕಾರಿ ಶ್ರೀ ಸೂರ್ಯಕಾಂತ್, ಅಭಿವೃದ್ಧಿ ಅಧಿಕಾರಿ ಶ್ರೀ ಪವನ್ ಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪವನ್ ಕುಮಾರ್ ಚಂದಾಪೂರ ಮತ್ತು ನಿರ್ದೇಶಕರಾದ ಶ್ರೀಮತಿ ಈರಮ್ಮ ಪ. ಚಂದಾಪೂರ, ಶ್ರೀ ರಾಚೋಟಿ ವೀರಣ್ಣ ಸೌಹಾರ್ದ ಸಹಕಾರಿ ಸಂಘ ಶ್ರೀಮತಿ ಉಮಾ ಸುರೇಶ್ ನೀಲಂಗಿ, ಶ್ರೀ ಅನಿಲ್ ಚಂದ್ರಶೇಖರ ನೀಲಂಗಿ, ಶ್ರೀ ಮಲ್ಲಕಾರ್ಜುನ್ ಸಂಗಾಪೂರ, ರವಿ ಹಾಗೂ ಸಹಕಾರಿ ಸಂಘದ ಪದಾಧಿಕಾರಿಗಳು ಮತ್ತು ಷೇರುದಾರರು ಉಪಸ್ಥಿತರಿದ್ದರು.

## 58ನೇ ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಬಿಸ್‌ನೆಸ್ ಮ್ಯಾನೇಜ್‌ಮೆಂಟ್ (PGDCBM) ಕೋರ್ಸಿನ ಕುರಿತು.

ವೈಕುಂಟ ಮೆಹತಾ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ (VAMNICOM) ಪುಣೆ, ಇವರ ವತಿಯಿಂದ 58ನೇ Post Graduate Diploma in Cooperative Business Management (PGDCBM) ಕೋರ್ಸಿನ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ವಿವರಗಳು | |
|---|---|
| ಕೋರ್ಸಿನ ಹೆಸರು | Post Graduate Diploma in Cooperative Business Management (PGDCBM) |
| ಅವಧಿ | 18ನೇ ನವೆಂಬರ್ 2024 ರಿಂದ 11ನೇ ಆಗಸ್ಟ್ 2025ರ ವರೆಗೆ |
| ಉಪನ್ಯಾಸ ವಿಧಾನ | 1. ಪ್ರತಿ ದಿನ ಮಧ್ಯಾಹ್ನ 02.30ರಿಂದ 05.30ರ ವರೆಗೆ ಆನ್‌ಲೈನ್‌ಮೂಲಕ ಉಪನ್ಯಾಸ |
| ಕೋರ್ಸಿನ ಶುಲ್ಕ | ತಲಾ ರೂ. 50,000/– |
| **ಹೆಚ್ಚಿನ ವಿವರಗಳಿಗಾಗಿ ಶ್ರೀ ಶಿವಾಜಿ ವಾಲ್ಕೆ (8830164039) ಇವರನ್ನು ಸಂಪರ್ಕಿಸುವುದು.** | |

## 29ನೇ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಎಜುಕೇಷನ್ ಅಂಡ್ ಡೆವಲಪ್‌ಮೆಂಟ್ ಕೋರ್ಸಿನ ಕುರಿತು.

ರಾಷ್ಟ್ರೀಯ ಸಹಕಾರಿ ಶಿಕ್ಷಣ ಕೇಂದ್ರ ನವದೆಹಲಿ (NCCE) ಇವರ ವತಿಯಿಂದ 29ನೇ Diploma in Cooperative Education and Development ಕೋರ್ಸಿನ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ವಿವರಗಳು | |
|---|---|
| ಕೋರ್ಸಿನ ಹೆಸರು | Diploma in Cooperative Education and Development |
| ಅವಧಿ | 7ನೇ ಅಕ್ಟೋಬರ್‌ನಿಂದ 22ನೇ ಡಿಸೆಂಬರ್ 2024ರ ವರೆಗೆ |
| ಉಪನ್ಯಾಸ ವಿಧಾನ | 1. 12 ವಾರಗಳ ವರೆಗೆ ಆನ್‌ಲೈನ್ ಮೂಲಕ ಉಪನ್ಯಾಸ<br>2. 10 ದಿನಗಳು ನವದೆಹಲಿಯಲ್ಲಿ ಭೌತಿಕ ಉಪನ್ಯಾಸ |
| ವಸತಿ & ಪ್ರಯಾಣ ವೆಚ್ಚ | ದಿನಾಂಕ 11ರಿಂದ 23ನೇ ಡಿಸೆಂಬರ್ 2024ರ ವರೆಗೆ ನಡೆಯಲಿರುವ ಭೌತಿಕ ಉಪನ್ಯಾಸಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ, ರಾಷ್ಟ್ರೀಯ ಸಕಾರಿ ಶಿಕ್ಷಣ ಕೇಂದ್ರ ನವದೆಹಲಿ ಇವರ ವತಿಯಿಂದ ವಸತಿ, ತಿಂಡಿ ಹಾಗೂ ಊಟದ ವ್ಯವಸ್ಥೆ ನೀಡಲಾಗುವುದು ಹಾಗೂ 3ಎಸಿ ರೈಲ್ವೆಯ/ ಬಸ್ ಪ್ರಯಾಣದ ವೆಚ್ಚವನ್ನು ನೀಡಲಾಗುವುದು. |
| ಕೋರ್ಸಿನ ಶುಲ್ಕ | ತಲಾ ರೂ. 3000/– |
| **ಹೆಚ್ಚಿನ ವಿವರಗಳಿಗಾಗಿ ಶ್ರೀಮತಿ ಇಂದ್ರಪ್ರಿತ್ ಕೌರ್ (8800833523) ಇವರನ್ನು ಸಂಪರ್ಕಿಸುವುದು.** | |

# ದುಷ್ಟಶಕ್ತಿಗಳ ವಿರುದ್ಧ ಗೆಲುವು ಸಾಧಿಸಿದ ದ್ಯೋತಕವಾಗಿ 'ವಿಜಯದಶಮಿ'

– ಶ್ರೀ ಶಿವಕುಮಾರ ಬಿರಾದಾರ, ತರಬೇತಿ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು



ವಿಜಯದಶಮಿ ನವರಾತ್ರಿ ಉತ್ಸವದ ಕೊನೆಯ ದಿನ. ಪಾಂಡವರು ಶತ್ರುಗಳ ಮೇಲೆ ಜಯ ಸಾಧಿಸಿದ ದಿನ. ರಾವಣನನ್ನು ಶ್ರೀರಾಮನು ಸಂಹರಿಸಿದ ವಿಜಯೋತ್ಸವದ ದಿನ. ಒಟ್ಟಾರೆ ದುಷ್ಟಶಕ್ತಿಗಳ ವಿರುದ್ಧ ಒಳ್ಳೆಯದು ಗೆಲುವು ಸಾಧಿಸಿದ ದಿನವೇ ವಿಜಯದಶಮಿ.

ದಸರಾ ಎಂದರೆ ಹೆಸರೇ ಹೇಳುವಂತೆ ಇದು ದಶಮಿ–ಹತ್ತನೆಯ ದಿನ. ಅಂದರೆ ದಸರಾ ಉತ್ಸವದ ಹತ್ತನೆಯ ದಿನ. 'ದಶ ಅಹರ್'–ದಶಹರ–ದಶರಾ–ದಸರಾ ಎಂದೇ ಪ್ರಸಿದ್ಧವಾಗಿರುವ ಶಕ್ತಿ ಪೂಜೆಯ ಶರನ್ನವರಾತ್ರಿಗಳ ನಂತರದ ವಿಜಯೋತ್ಸವ ದಿನ. ಒಂಭತ್ತು ದಿನಗಳ ಕಾಲ ನಡೆಯುವ ನವರಾತ್ರಿ ಹಬ್ಬದ ಕೊನೆಯ ದಿನವೇ ದಶಮಿ, ವಿಜಯದಶಮಿ ಎಂದೂ ಈ ದಿನವನ್ನು ಕರೆಯಲಾಗುತ್ತದೆ. ದಶಮಿ ತಿಥಿ ಅಥವಾ ಅಶ್ವಯುಜ ತಿಂಗಳ ಹತ್ತನೇ ದಿನದಂದು ವಿಶಯದಶಮಿಯನ್ನು ಆಚರಿಸಲಾಗುತ್ತದೆ.

ಶುಭ ಮುಹೂರ್ತದಲ್ಲಿ ದೇವಿಯನ್ನು ಆರಾಧನೆ ಮಾಡಬೇಕು. ಒಂಭತ್ತು ದಿನಗಳ ಕಾಲ ದೇವಿಯ ವಿವಿಧ ಅವತಾರಗಳಿಗೆ ಪೂಜೆ ಮಾಡಿ ವಿಜಯದಶಮಿಯ ದಿನ ಭಕ್ತಿ ಭಾವದಿಂದ ಬೀಳ್ಕೊಡಲಾಗುತ್ತದೆ. ಈ ವೈಭವದ ವಿಜಯದಶಮಿಯ ಹಿಂದೆ ಪುರಾಣದ ಪ್ರಕಾರ ಶಕ್ತಿ ಸ್ವರೂಪಿಣಿಯಾದ ದುರ್ಗಾಮಾತೆಯು ರಾಕ್ಷಸರನ್ನು ಸಂಹಾರ ಮಾಡಲು ಅವತಾರವೆತ್ತಿ, ರಾಕ್ಷಸರನ್ನು ಸಂಹರಿಸಿ ಲೋಕವನ್ನು ಕಾಪಾಡಿ, ಶಿಷ್ಟರಿಗೆ ಜಯ ನೀಡಿದ ದಿನ ವಿಜಯದಶಮಿ. ಒಂಭತ್ತು ದಿನಗಳ ಯುದ್ಧದ ನಂತರ ದಶಮಿಯ ದಿನ ದುರ್ಗೆಯು ಮಹಿಷಾಸುರನನ್ನು ಸಂಹಾರ ಮಾಡಿದಳು. ಅಂದಿನಿಂದ ದಶಮಿಯಂದು ಮಹಿಷಾಸುರನನ್ನು ಕೊಂದು ವಿಜಯ ಸಿಕ್ಕಿದ್ದಕ್ಕೆ 'ವಿಜಯದಶಮಿ' ಎಂದು ಎಲ್ಲೆಡೆ ಸಂಭ್ರಮದಿಂದ ಆಚರಿಸಲಾಗುತ್ತದೆ. 'ದಶಹರ'ದಂದು ದಶಕಂಠನಾಗಿದ್ದ ರಾವಣನನ್ನು ಶ್ರೀರಾಮನು ಸಂಹರಿಸಿದ ಬಳಿಕ ವಿಜಯೋತ್ಸವ ನಡೆಯಿತು ಎನ್ನುವ ಪ್ರತೀತಿ ಇದೆ. ನವರಾತ್ರಿ ಹಬ್ಬ ಮುಗಿಸಿ ದಶಮಿಯಂದು ಕುರುಸೇನೆಯನ್ನು ವಿರಾಟ ಸೇನೆ ಸೋಲಿಸುತ್ತದೆ. ಈ ವಿಜಯದ ಕುರುಹಾಗಿ ಒಂಭತ್ತನೇ ದಿನ ಆಯುಧ ಪೂಜೆಯನ್ನು ಆಚರಿಸಲಾಗುತ್ತದೆ.

### ಕಲಿಯುಗದಲ್ಲಿ ವಿಜಯದಶಮಿ

ಅರಸರ ಆಡಳಿತ ಕಾಲದಲ್ಲಿ ನವಮಿಯಂದು ಆಯುಧಗಳಿಗೆ ಪೂಜೆ ಮಾಡಿ ದಶಮಿಯಂದು ದಂಡಯಾತ್ರೆಗೆ ಹೊರಟರೆ ವಿಜಯ ದೊರೆಯುತ್ತದೆ ಎಂಬ ನಂಬಿಕೆ ಇತ್ತು. ಹೀಗಾಗಿ ದಶಮಿಯಂದು ಪೂಜೆ ಸಲ್ಲಿಸಿ ದಂಡಯಾತ್ರೆಗೆ ಹೊರಡುತ್ತಿದ್ದರು. ಈ ಪದ್ಧತಿ ಈಗಲೂ ಉಳಿದುಕೊಂಡಿದ್ದು, ಸಾಂಕೇತಿಕವಾಗಿ ಕೆಲವು ರಾಜವಂಶಸ್ಥರು ಸಾಂಕೇತಿಕವಾಗಿ ತಮ್ಮ ರಾಜ್ಯದ ಗಡಿಯನ್ನು ದಾಟಿ ಮತ್ತೆ ಹಿಂದಿರುಗುತ್ತಾರೆ.

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಆರಂಭವಾದ ಈ ಸೀಮೋಲ್ಲಂಘನ ಪದ್ಧತಿಯು ಮೈಸೂರು ಒಡೆಯರ ಕಾಲದಲ್ಲೂ ಮುಂದುವರಿದಿದೆ ವಿಜಯದಶಮಿ ಆಚರಣೆ. ಆಶ್ವಯುಜ ಶುಕ್ಲ ದಶಮಿಗೆ ವಿಜಯದಶಮಿ ಎನ್ನುವ ಹೆಸರಿದೆ. ಇದು ನವರಾತ್ರಿಯ ನಂತರದ ದಿನವಾಗಿದ್ದು ಹಾಗಾಗಿ ಇದನ್ನು ನವರಾತ್ರಿಯ ಸಮಾಪ್ತಿ ದಿನವೆಂದು ಪರಿಗಣಿಸುತ್ತಾರೆ. ಈ ದಿನ ಸೀಮೋಲ್ಲಂಘನ, ಶಮೀ ಪೂಜೆ, ಅಪರಾಜಿತಾ ಪೂಜೆ ಮತ್ತು ಆಯುಧ ಪೂಜೆ ಮಾಡಲಾಗುತ್ತದೆ.

ಸೀಮೋಲ್ಲಂಘನ: ಅಪರಾಹ್ನ ಕಾಲದಲ್ಲಿ ಊರಿನ ಗಡಿಯಾಚೆ ಈಶಾನ್ಯ ದಿಕ್ಕಿನ ಕಡೆ ಸೀಮೋಲ್ಲಂಘನಕ್ಕಾಗಿ ಹೋಗುತ್ತಾರೆ ಮತ್ತು ಶಮೀ ವೃಕ್ಷ ಹಾಗೂ ಮಂದಾರ ವೃಕ್ಷವಿರುವಲ್ಲಿ ನಿಲ್ಲುತ್ತಾರೆ. ನಂತರ ಶಮೀ ಪೂಜೆಯನ್ನು ಮಾಡಿ, ಆ ವೃಕ್ಷದ ಬುಡದಲ್ಲಿ ಅಕ್ಕಿ, ಅಡಿಕೆ ಮತ್ತು ಬಂಗಾರದ ನಾಣ್ಯಗಳನ್ನು ಇಡುತ್ತಾರೆ. ನಂತರ ವೃಕ್ಷಕ್ಕೆ ಪ್ರದಕ್ಷಿಣೆ ಹಾಕಿ ಅದರ ಬುಡದಲ್ಲಿನ ಸ್ವಲ್ಪ ಮಣ್ಣು ಮತ್ತು ಮರದ ಎಲೆಗಳನ್ನು ಮನೆಗೆ ತರುತ್ತಾರೆ. ಶಮಿಯ ಎಲೆಗಳನ್ನಲ್ಲದೇ ಮಂದಾರದ ಎಲೆಗಳನ್ನು ಬಂಗಾರವೆಂದು ದೇವರಿಗೆ ಅರ್ಪಿಸುತ್ತಾರೆ ಮತ್ತು ಆಪ್ತರಿಗೆ ನೀಡುತ್ತಾರೆ. ಈ ಬಂಗಾರವನ್ನು ಕಿರಿಯರು ಹಿರಿಯರಿಗೆ ಕೊಡಬೇಕೆನ್ನುವ ನಿಯಮವಿದೆ.

ಆಯುಧ ಪೂಜೆ: ವಿಜಯದಶಮಿಯಂದು ರಾಜರು, ಸಾಮಂತರು ತಮ್ಮ ಶಸ್ತ್ರಾಸ್ತ್ರಗಳನ್ನು ಸ್ವಚ್ಛಗೊಳಿಸಿ, ಸಾಲಾಗಿ ಇಟ್ಟು ಪೂಜೆ ನಡೆಸುತ್ತಾರೆ. ಹಾಗೆಯೇ ರೈತರು ಮತ್ತು ಕುಶಲ ಕರ್ಮಿಗಳು ತಮ್ಮ ಶಸ್ತ್ರಗಳ ಪೂಜೆ ಮಾಡುತ್ತಾರೆ. ಕೆಲವರು ಆಯುಧ ಪೂಜೆಯನ್ನು ನವಮಿಯಂದೂ ಆಚರಿಸುತ್ತಾರೆ.

### ನಾಡಹಬ್ಬ "ಮೈಸೂರು ದಸರಾ ಎಷ್ಟೊಂದು ಸುಂದರ"
### ಮೈಮನಸೆಳೆಯುವ ದಸರಾ... ಸಂಭ್ರಮದ ದಸರಾ...

ಮನಸ್ಸಿಗೆ ಮುದ ಕೊಡುವ... ಕಣ್ಣುಗಳಿಗೆ ವೈಭವದ ನೋಟ ನೀಡುವ, ಮನಸೆಳೆಯುವ ವಿಶ್ವವಿಖ್ಯಾತ ಮೈಸೂರು ದಸರಾ ತನ್ನೂರಿನ ಜನರ ಜೊತೆಗೆ ದೇಶದಾದ್ಯಂತ ಪ್ರವಾಸಿಗರನ್ನು ಆಕರ್ಷಿಸುತ್ತದೆ. ನವರಾತ್ರಿಯ

ದಿನಗಳಲ್ಲಿ ಸಾಂಸ್ಕೃತಿಕ ನಗರಿ ಮೈಸೂರನ್ನು ನೋಡುವುದೇ ಅಂದ. ಮದುವಣಗಿತ್ತಿಯಂತೆ ಸಿಂಗಾರಗೊಳ್ಳುವ ಮೈಸೂರನ್ನು ನೋಡಲು ಮಿತ್ರರೊಂದಿಗೆ, ಕುಟುಂಬದವರೊಂದಿಗೆ ಒಂದು ಸುತ್ತು ಹೊರಟರೆ ಸಾಕು ಆ ಅನುಭವ ಪದಗಳಲ್ಲಿ ವರ್ಣಿಸಲಾಗದು. ಕಂಗಳಲ್ಲಿ ಮಿನುಗುವ ವಿದ್ಯುತ್ ದೀಪಗಳ ಅಲಂಕಾರ, ರುಚಿ ಸವಿಯಲು ಆಹಾರ ಮೇಳ, ಬೆರಗು ಮೂಡಿಸುವ ಫಲಪುಷ್ಪ ಪ್ರದರ್ಶನ, ಕುಣಿದು ಕುಪ್ಪಳಿಸಲು ಯುವ ಸಂಭ್ರಮ, ಕಥೆ ಹೇಳಲು ಬರುವ ಬೊಂಬೆಗಳ ಪ್ರದರ್ಶನ, ಒಂದಾ ಎರಡಾ... ಇಂಥ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಇದನ್ನೆಲ್ಲಾ ನೋಡಿ ಸಂಭ್ರಮಿಸಲು ಎರಡು ಕಣ್ಣು ಸಾಲದು. ಅದಕ್ಕೆ ಹೇಳೋದು ಮೈಸೂರು ದಸರಾ ಅಂದ್ರೆ ಅಲ್ಲಿ ಸಡಗರ, ಸಂಭ್ರಮಕ್ಕೆ ಕೊರತೆಯೇ ಇಲ್ಲ ಅಂತಾ. ದಸರಾದ ಬಹುದೊಡ್ಡ ಆಕರ್ಷಣೆ ಎಂದರೆ ವಿಶ್ವವಿಖ್ಯಾತ ಜಂಬೂಸವಾರಿ. ಕ್ಯಾಪ್ಟನ್ ಅಭಿಮನ್ಯು ವಿಜಯದಶಮಿಯ ದಿನ ನಾಡದೇವತೆ ತಾಯಿ ಚಾಮುಂಡೇಶ್ವರಿಯ ಮೂರ್ತಿಯನ್ನು ಚಿನ್ನದ ಅಂಬಾರಿಯಲ್ಲಿ ಹೊತ್ತು ಸಾಗುವ ದೃಶ್ಯ ನೋಡುವುದೆಂದರೆ ಭಾಗ್ಯವೇ ಸರಿ. ಅದಕ್ಕಾಗಿ ಕ್ಯಾಪ್ಟನ್ ಅಭಿಮನ್ಯು ಸೇರಿದಂತೆ ದಸರೆಯಲ್ಲಿ ಭಾಗಿಯಾಗುವ ಬೇರೆ ಆನೆಗಳೂ ತಾಲಿಮನ್ನು ನಡೆಸುತ್ತವೆ. ಸುದೀರ್ಘ ಇತಿಹಾಸವಿರುವ ದಸರೆಯು ಕರ್ನಾಟಕ ಸರ್ಕಾರ ನಡೆಸಿಕೊಂಡು ಬರುತ್ತಿರುವ ನಾಡಹಬ್ಬವಾಗಿದೆ. ಮೈಸೂರು ಅಂಬಾವಿಲಾಸ ಅರಮನೆಯಲ್ಲೂ ನವರಾತ್ರಿ ಪ್ರಯುಕ್ತ ಸಾಕಷ್ಟು ಕಾರ್ಯಕ್ರಮಗಳು ವಿಶೇಷ ಪೂಜೆಗಳು ನಡೆಯುತ್ತವೆ. ಮೈಸೂರು ರಾಜವಂಶಸ್ಥರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ದರ್ಬಾರ್ ನಡೆಸುತ್ತಾರೆ. ಅದಕ್ಕಾಗಿಯೇ ವಿಶೇಷವಾಗಿ ಸಿಂಹಾಸನ ಜೋಡಣೆಯನ್ನು ಮಾಡಲಾಗುತ್ತದೆ. ಅರಮನೆಯಲ್ಲಿಯೂ ವಿಶೇಷವಾಗಿ ಸರಸ್ವತಿ ಪೂಜೆ, ಆಯುಧ ಪೂಜೆ, ಬನ್ನಿ ಮರದ ಪೂಜೆಗಳನ್ನು ನೆರವೇರಿಸಲಾಗುತ್ತದೆ. ಚಾಮುಂಡಿ ಬೆಟ್ಟದಲ್ಲಿಯೂ ವಿಶೇಷ ಪೂಜಾ ಪುನಸ್ಕಾರಗಳು ನವರಾತ್ರಿಯ ಅಷ್ಟೂ ದಿನ ನಡೆಯುತ್ತದೆ. ಚಾಮುಂಡೇಶ್ವರಿ ದೇವಿಯನ್ನು ಮೈಸೂರು ರಾಜವಂಶದ ರಕ್ಷಕ ದೈವವಾಗಿ ಪೂಜಿಸಲಾಗುತ್ತದೆ.

ವಿಜಯದಶಮಿ ದಿನದಂದು ಅರಮನೆ ಮೈದಾನದಲ್ಲಿ ವಜ್ರಮುಷ್ಟಿ ಕಾಳಗ, ನಂದಿ ಧ್ವಜ ಪೂಜೆ ನೆರವೇರುತ್ತೆ. ನಂತರ ಅಂಬಾರಿಯಲ್ಲಿ ವಿರಾಜಮಾನಳಾಗಿ ಕೂರುವ ನಾಡದೇವಿಗೆ ಪುಷ್ಪಾರ್ಚನೆ ನೆರವೇರಿಸಿದ ಬಳಿಕ ಜಂಬೂಸವಾರಿ ಸಾಗುತ್ತದೆ. ಈ ಅದ್ಭುತ ದೃಶ್ಯವನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಜನರು ವಿವಿಧೆಡೆಯಿಂದ ಆಗಮಿಸುತ್ತಾರೆ. ಅಂತರರಾಷ್ಟ್ರೀಯ ಖ್ಯಾತಿ ಪಡೆದಿರುವ ಮೈಸೂರು ದಸರಾ ಕನ್ನಡಿಗರ ಹೆಮ್ಮೆಯ ನಾಡಹಬ್ಬವಾಗಿದ್ದು, ಕರ್ನಾಟಕದ ಸಾಂಸ್ಕೃತಿಕ ವೈಭವವನ್ನು ಪ್ರತಿಬಿಂಬಿಸುತ್ತದೆ. ಮೈಸೂರು ದಸರಾ ಎಂದರೇ ಆಕರ್ಷಣೆ... ಅದ್ಭುತ... ಅದಕ್ಕಾಗಿಯೇ ಹೇಳುವುದು "ಮೈಸೂರು ದಸರಾ ಎಷ್ಟೊಂದು ಸುಂದರ" ಎಂದು.

## ರಾಮಾಯಣ ಮಹಾಕಾವ್ಯದ ಮಹಾಕವಿ ಮಹರ್ಷಿ ವಾಲ್ಮೀಕಿ

**ಬೇಡರ ಕುಲದಲ್ಲಿ ಜನಿಸಿ**
**ನಾರದಮುನಿಯಿಂದ ದೀಕ್ಷ ಪಡೆದು**
**ರಾಮ ಜಪದಿಂದ ವಾಲ್ಮೀಕಿಯಾಗಿ ಪರಿವರ್ತನೆಗೊಂಡು**
**ಶ್ರೀರಾಮನಲ್ಲಿ ಉತ್ತಮ ಗುಣಗಳನ್ನು ಸೃಷ್ಟಿಸಿ**
**ರಾವಣನ ಕೆಟ್ಟ ಗುಣಗಳನ್ನು ಸಂಹರಿಸಿ**
**ಜಗಕ್ಕೆಲ್ಲ ಶ್ರೇಷ್ಠ 'ರಾಮಾಯಣ'ವನ್ನು ನೀಡಿದ**
**ಆದಿಕವಿ ಶ್ರೀವಾಲ್ಮೀಕಿಗೆ ನಮನಗಳು...**



ಮಹಾಕವಿ ಮಹರ್ಷಿ ವಾಲ್ಮೀಕಿಯವರು ರಾಮಾಯಣ ಮಹಾಕಾವ್ಯದ ಕವಿಯಾಗಿ ಪ್ರಸಿದ್ಧರಾಗಿದ್ದಾರೆ ಮತ್ತು ಅವರನ್ನು ಸಂಸ್ಕೃತ ಸಾಹಿತ್ಯದ ಪಿತಾಮಹರೆಂದು ಕರೆಯಲಾಗಿದೆ. ವಾಲ್ಮೀಕಿಯವರು ಮೊದಲಿಗೆ ರತ್ನಾಕರನೆಂಬ ಕಳ್ಳನಾಗಿ ಬದುಕು ಆರಂಭಿಸಿದರೂ, ಸಾಧುಗಳ ಒಡನಾಟದಿಂದ ಮನಸ್ಸು ಶುದ್ಧಗೊಂಡು, ಮಹರ್ಷಿಯಾಗಿ ಪರಿವರ್ತನೆಗೊಂಡರು. ವಾಲ್ಮೀಕಿಯವರು "ಆದಿಕವಿ"ಯೆಂದೂ ಪ್ರಸಿದ್ಧರಾಗಿದ್ದು, ಅವರು ಸಂಸ್ಕೃತದಲ್ಲಿ ರಾಮಾಯಣವನ್ನು ಬರೆದು ಅದರ ಸೃಷ್ಟಿಕರ್ತರಾಗಿದ್ದಾರೆ. ರಾಮಾಯಣವು ಭಾರತೀಯ ಸಂಸ್ಕೃತಿಯ ಮೇಲೆ ಅಪಾರ ಪ್ರಭಾವ ಬೀರಿದೆ. ರಾಮಾಯಣದ ಮೂಲಕ ವಾಲ್ಮೀಕಿಯವರು ಧರ್ಮ, ನೀತಿ, ಸತ್ಯಸಂಧತೆ, ಮತ್ತು ಸತ್ಕಾರ್ಯಗಳನ್ನು ಎತ್ತಿಹಿಡಿದರು. ರಾಮನಂತಹ ಪರಿಪೂರ್ಣ ವ್ಯಕ್ತಿತ್ವವನ್ನು ಪರಿಚಯಿಸುವ ಮೂಲಕ ಅವರು ಮಾನವೀಯ ತತ್ವಗಳನ್ನು ಬೋಧಿಸಿದರು.

ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಪ್ರತಿ ವರ್ಷ ಆಶ್ವಯುಜ ಮಾಸದ ಪೂರ್ಣಿಮೆಯ ದಿನದಲ್ಲಿ ಆಚರಿಸಲಾಗುತ್ತದೆ, ಇದು ಶರದ್ ಪೂರ್ಣಿಮೆ ಎಂದೂ ಕರೆಯಲ್ಪಡುತ್ತದೆ. ಈ ದಿನವನ್ನು ಸಂಸ್ಕೃತಿಯ, ಸಾಹಿತ್ಯದ, ಧರ್ಮದ ಮಹತ್ವವನ್ನು ಒತ್ತಿ ಹೇಳುವ ಹಬ್ಬವನ್ನಾಗಿ ಆಚರಿಸಲಾಗುತ್ತದೆ. ವಾಲ್ಮೀಕಿ ದೇವರ ದೇವಸ್ಥಾನಗಳಲ್ಲಿ ವಿಶೇಷ ಪೂಜಾ ವಿಧಿಗಳು ಮತ್ತು ಹೋಮ–ಹವನಗಳನ್ನು, ವಾಲ್ಮೀಕಿಯವರ ಕವಿತೆ, ರಾಮಾಯಣದ ಭಾಗಗಳು ಮತ್ತು ಧಾರ್ಮಿಕ ಪಠಣ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಭಕ್ತ ಜನ ಸಮೂಹವು ಸಹಬಾಳ್ವೆಯನ್ನು ಒತ್ತಿ ಹೇಳುವ ಜಾಗೃತಿ ಮತ್ತು ಧರ್ಮ ಸಂಬಂಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಮಹರ್ಷಿ ವಾಲ್ಮೀಕಿ ಜಯಂತಿ ನಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಧಾರ್ಮಿಕ ನೆಲೆಗಳನ್ನು ಸ್ಮರಿಸುವ ದಿನವಾಗಿದೆ.

# ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರ ಭಾಗವಹಿಸುವಿಕೆ

## ಸದಸ್ಯರ ಸೇವೆಗಳ ಬಲವರ್ಧನೆಯೇ ಸಹಕಾರಿಗಳ ಶಕ್ತಿ

– ಶ್ರೀಮತಿ ಸವಿತ ಎಸ್. ಇ. ಕರಾಸೌಸಂಸನಿ., ಬೆಂಗಳೂರು

**ಹಿನ್ನೆಲೆ:**

ಸಹಕಾರ ಆಂದೋಲನವು ನೂರಾರು ವರ್ಷಗಳಷ್ಟು ಹಳೆಯದು, ಇದು ಭಾರತದಲ್ಲಿ ಜಾಗತಿಕವಾಗಿ ಯಶಸ್ವಿಯಾಗಿದೆ. ಸಹಕಾರವು ತಮ್ಮ ಆರ್ಥಿಕ ಗುರಿಗಳನ್ನು ಸಾಧಿಸಲು ಸಾಮೂಹಿಕವಾಗಿ ಕಾರ್ಯನಿರ್ವಹಿಸಲು ತಮ್ಮ ಸೀಮಿತ ಸಂಪನ್ಮೂಲಗಳನ್ನು ಸಂಗ್ರಹಿಸುವ ಸದಸ್ಯರ ಸ್ವಯಂಪ್ರೇರಿತ ಸಂಘವನ್ನು ಸೂಚಿಸುತ್ತದೆ. ಪ್ರಮುಖ ಪ್ರೇರಕ ಶಕ್ತಿಯು ಪರಸ್ಪರ ಸಹಾಯ ಮತ್ತು ಸಾಮೂಹಿಕವಾಗಿರುವಂತಹದ್ದು. "ಪ್ರತಿಯೊಬ್ಬರಿಗೂ ಎಲ್ಲರಿಗೂ, ಎಲ್ಲರಿಗೂ".–"each for all, all for each".

ಸಾಮಾನ್ಯ ಸದಸ್ಯರು ತಮ್ಮ ಸ್ವಂತ ಚುನಾಯಿತ ಪದಾಧಿಕಾರಿಗಳು ಮತ್ತು ಉದ್ಯೋಗಿಗಳೊಂದಿಗೆ ತಮ್ಮ ಕಾರ್ಯಾಚರಣೆಗಳನ್ನು ಸಂಘಟಿಸುವ ಸಹಕಾರಿ ಸಂಘದ ನಿಜವಾದ ಮಾಲೀಕರು. ಆದ್ದರಿಂದ, ಸದಸ್ಯರು ಎಚ್ಚರಿಕೆಯಿಂದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಸದಸ್ಯರು ತಮ್ಮ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಅರಿತುಕೊಳ್ಳುವುದು ಅತ್ಯಗತ್ಯ, ಇದರಿಂದಾಗಿ ತಮ್ಮದೇ ಆದ ಸಹಕಾರಿ ಸಂಘವು ಬೆಳೆಯಲು ಅನುವು ಮಾಡಿಕೊಡುತ್ತದೆ, ಇದನ್ನು ಸದಸ್ಯ ಶಿಕ್ಷಣದ ಮೇಲೆ ಕೇಂದ್ರೀಕರಿಸುವ ಮೂಲಕ ಸಾಧಿಸಬಹುದಾಗಿದೆ.

ಪ್ರಾಯೋಗಿಕವಾಗಿ, ಸಹಕಾರಿ ಸಂಸ್ಥೆಗಳು ರಾಜ್ಯ ನಿಯಂತ್ರಿತ, ಆರ್ಥಿಕವಾಗಿ ಅಸಮರ್ಥ ಮತ್ತು ಸಾಮಾಜಿಕವಾಗಿ ಅಸಮರ್ಪಕ ಸಂಸ್ಥೆಗಳಾಗಿವೆ, ಅಲ್ಲಿ ಸದಸ್ಯರು ತೃಪ್ತಿ ಹೊಂದಿಲ್ಲ ಮತ್ತು ಸಹಕಾರದ ಉತ್ಸಾಹದಲ್ಲಿ ಅಪನಂಬಿಕೆಯ ಭಾವನೆಯು ಹರಿದಾಡುತ್ತಿದೆ. ಆದ್ದರಿಂದ, ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಸದಸ್ಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ತುರ್ತು ಕ್ರಮಗಳನ್ನು ಬಲಪಡಿಸುವ ಅಗತ್ಯವಿದೆ.

**ಸದಸ್ಯರ ಭಾಗವಹಿಸುವಿಕೆಯ ಸನ್ನಿವೇಶಗಳು**

- ಸಹಕಾರ ಸಂಘದ ಶಕ್ತಿಯು ಸಮಾಜದ ಕಾರ್ಯಾಚರಣೆಗಳಲ್ಲಿ ಸದಸ್ಯರ ಭಾಗವಹಿಸುವಿಕೆಯ ಮಟ್ಟವನ್ನು ಅವಲಂಬಿಸಿರುತ್ತದೆ. 1989 ರಲ್ಲಿ ಆರ್‌ಬಿಐ ಸ್ಥಾಪಿಸಿದ ಕೃಷಿ ಸಾಲ ಪರಿಶೀಲನಾ ಸಮಿತಿಯ ವರದಿಯ ಪ್ರಕಾರ, ಪಿಎಸಿಎಸ್‌ನಲ್ಲಿ ಸದಸ್ಯರ ಭಾಗವಹಿಸುವಿಕೆ ಶೇಕಡಾ 23 ರಷ್ಟಿದೆ.
- ನಬಾರ್ಡ್ ಸ್ಥಾಪಿಸಿದ ಗ್ರಾಮೀಣ ಸಾಲದ ತಜ್ಞರ ಸಮಿತಿಯ ವರದಿಯು ಕೇವಲ 44 ಪ್ರತಿಶತ ಸದಸ್ಯರು ಮಾತ್ರ ಕ್ರೆಡಿಟ್ ಸಹಕಾರಿಗಳಿಂದ ಸಾಲವನ್ನು ಪಡೆಯುತ್ತಿದ್ದಾರೆ ಎಂದು ಬಹಿರಂಗಪಡಿಸಿದೆ.
- ಭಾರತದಲ್ಲಿ, 240 ಮಿಲಿಯನ್‌ಗಿಂತಲೂ ಹೆಚ್ಚಿನ ಸದಸ್ಯತ್ವವನ್ನು ಹೊಂದಿರುವ 6 ಲಕ್ಷಕ್ಕೂ ಹೆಚ್ಚು ಸಹಕಾರಿಗಳಿವೆ, ಅಲ್ಲಿ ಸದಸ್ಯರ ಸಕ್ರಿಯ ಭಾಗವಹಿಸುವಿಕೆ ತುಂಬಾ ಕಳಪೆಯಾಗಿದೆ (30%).

**ಸಹಕಾರಿ ಸಂಘಗಳಲ್ಲಿ ಸದಸ್ಯರ ಕಳಪೆ ಭಾಗವಹಿಸುವಿಕೆಗೆ ಕಾರಣಗಳು:**

- ಸಹಕಾರ ಸಂಘಗಳಲ್ಲಿ ಸೀಮಿತ ಸೇವೆಗಳು ಮಾತ್ರ.
- ಮುಂದಿನ ಸಾಲಕ್ಕೆ ಅರ್ಹರಾಗಲು ಸಾಲವನ್ನು ಮರುಪಾವತಿಸಲು ಸದಸ್ಯರ ಅಸಮರ್ಥ್ಯತೆ.
- ಸಮಾಜದ ವ್ಯವಹಾರದಲ್ಲಿ ಸದಸ್ಯರ ಪಾತ್ರದ ಬಗ್ಗೆ ಅರಿವಿನ ಕೊರತೆ – ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು.
- ಸದಸ್ಯತ್ವ ಅಭಿಯಾನ ಕೊರತೆ.
- ನಿಷ್ಕ್ರಿಯ ಸದಸ್ಯರು ಸೇರಿದಂತೆ ಎಲ್ಲಾ ಸದಸ್ಯರು ಮತ ಚಲಾಯಿಸಲು ಅನುಮತಿಸಲಾಗಿದೆ.
- ಕೆಲವೇ ಕೈಯಲ್ಲಿ ಅಧಿಕಾರದ ಕೇಂದ್ರೀಕರಣ – Feudalism.
- ಶ್ರೀಮಂತ ಮತ್ತು ರಾಜಕೀಯ ವರ್ಗದ ಪ್ರಾಬಲ್ಯ.

**ಸದಸ್ಯರ ಭಾಗವಹಿಸುವಿಕೆ ಪ್ರಕ್ರಿಯೆ**

- ಸಹಕಾರ ಸಂಘಗಳನ್ನು ಅಭಿವೃದ್ಧಿಪಡಿಸಲು, ಅವುಗಳು ಸುಗಮವಾಗಿ ಕಾರ್ಯನಿರ್ವಹಿಸುವುದು ಮತ್ತು ಅವರ ಸದಸ್ಯರ ಅಗತ್ಯಗಳನ್ನು ಪೂರೈಸುವುದು ಅತ್ಯಂತ ಅವಶ್ಯಕವಾಗಿದೆ. ಸದಸ್ಯರು ತಮ್ಮ ಸಹಕಾರಿ ಸಂಘದ ವ್ಯವಹಾರ ಚಟುವಟಿಕೆಗಳ ಬಗ್ಗೆ ತಿಳಿದಿರಬೇಕು ಮತ್ತು ಅದರ ಎಲ್ಲಾ ಸಾಂಸ್ಥಿಕ ವ್ಯವಹಾರಗಳಲ್ಲಿ ಭಾಗವಹಿಸಬೇಕು, ಅದರ ಅಭಿವೃದ್ಧಿ ಮತ್ತು ಸುಧಾರಣೆಗೆ ಸದಸ್ಯರು ತಮ್ಮ ಸಲಹೆ ಮತ್ತು ಅಭಿಪ್ರಾಯಗಳನ್ನು ನೀಡಬೇಕು.
- ಸದಸ್ಯರು ತಮ್ಮ ಸಹಕಾರಿ ಸೊಸೈಟಿಯ ನಿಜವಾದ ಷೇರುದಾರರು/ ಮಾಲೀಕರು, ಅವರು ಸಹಕಾರಿಗಳ ನಿರ್ವಹಣೆಗಾಗಿ ನಿರ್ದೇಶಕರ ಮಂಡಳಿಯನ್ನು ಆಯ್ಕೆ ಮಾಡುತ್ತಾರೆ.
- ಸಹಕಾರಿಯು ಸರ್ಕಾರದ ಅಂಗವಲ್ಲ ಆದರೆ ಸ್ವಾಯತ್ತ ಸಂಸ್ಥೆಯಾಗಿದೆ ಮತ್ತು ಸ್ವಾಯತ್ತತೆ ಮತ್ತು ಸ್ವಾತಂತ್ರ್ಯದೊಂದಿಗೆ ತನ್ನ ಚಟುವಟಿಕೆಗಳನ್ನು ನಿರ್ವಹಿಸುತ್ತದೆ. ಸಹಕಾರಿ ವ್ಯವಸ್ಥೆಯ ಯಶಸ್ಸು ಸದಸ್ಯರ ಭಾಗವಹಿಸುವಿಕೆ ಮತ್ತು ನಿರ್ದೇಶಕರ ಮಂಡಳಿಯ ಕಾರ್ಯಾಚರಣೆಗಳ ನಡುವಿನ ಸರಿಯಾದ ಸಂವಹನ ಮತ್ತು ಏಕೀಕರಣದ ಮೇಲೆ ಅವಲಂಬಿತವಾಗಿದೆ. ಅಂತಿಮವಾಗಿ, ಸಹಕಾರಿ ಕಾರ್ಯವಿಧಾನವು ಮಾನವೀಯ, ನೈತಿಕ ಮತ್ತು ಸದಸ್ಯರ

ಕೇಂದ್ರಿತವಾಗಿರುತ್ತದೆ.

**ಪುನರುಜ್ಜೀವನಗೊಳ್ಳುತ್ತಿರುವ ಸದಸ್ಯರ ಭಾಗವಹಿಸುವಿಕೆಗೆ – ನಿರೀಕ್ಷೆಗಳು**

- ಬದಲಾಗುತ್ತಿರುವ ಪರಿಸ್ಥಿತಿಗಳಲ್ಲಿ ಕಾರ್ಯನಿರ್ವಹಿಸಲು ಸಹಕಾರಿಗಳನ್ನು ಸದಸ್ಯರ ಶಿಕ್ಷಣ ಮತ್ತು ವೃತ್ತಿಪರ ನಿರ್ವಹಣೆಯ ಮೂಲಕ ಕೇಂದ್ರೀಕರಿಸಬೇಕು ಎಂದು ನಿರೀಕ್ಷಿಸಲಾಗಿದೆ.
- ಸದಸ್ಯರು ತಮ್ಮ ಸಂಸ್ಥೆಯನ್ನು ಸಂಪೂರ್ಣವಾಗಿ ಹೊಂದುವ, ನಿರ್ವಹಿಸುವ ಮತ್ತು ಸಾಮಾನ್ಯ ಗುರಿಯನ್ನು ಸಾಧಿಸಲು ಬಳಸುವ ಸದಸ್ಯರ ಒಟ್ಟು ಭಾಗವಹಿಸುವಿಕೆಯನ್ನು ಹೈಲೈಟ್ ಮಾಡಲು ಮತ್ತು ತುಂಬಲು ಸಹಕಾರಿಗಳಲ್ಲಿ ಅನುಕೂಲಕರ ವಾತಾವರಣವಿರಬೇಕು.
- ಸಹಕಾರಿ ಸಮಾಜದ ಬೆಳವಣಿಗೆ ಮತ್ತು ಅಭಿವೃದ್ಧಿಯು ಸದಸ್ಯರ ಸಕ್ರಿಯ ಮತ್ತು ಭಾವನಾತ್ಮಕ ಭಾಗವಹಿಸುವಿಕೆಯ ಮಟ್ಟವನ್ನು ಅವಲಂಬಿಸಿರುತ್ತದೆ ಮತ್ತು ಎಲ್ಲಾ ಸದಸ್ಯರು ತಮ್ಮ ಉದ್ದೇಶಗಳನ್ನು ಸಾಧಿಸಲು ಒಗ್ಗೂಡಿದ್ದಾರೆ ಮತ್ತು ಏಕೀಕರಿಸಿದ್ದಾರೆ ಎಂದು ಚಿತ್ರಿಸುತ್ತದೆ.
- ಸಹಕಾರಿಗಳಲ್ಲಿ ಭಾಗವಹಿಸುವಿಕೆಯನ್ನು ಬಲಪಡಿಸಲು ಸದಸ್ಯರ ನಿರೀಕ್ಷಿತ ಗುಣಲಕ್ಷಣಗಳು:
- ಜಾಗೃತಿ– Awareness
- ಉಪಕ್ರಮ– Initiative
- ಒಳಗೊಳ್ಳುವಿಕೆ– Involvement
- ನಿಷ್ಠೆ – Loyalty
- ಬದ್ಧತೆ– Commitment
- ಹಣಕಾಸಿನ ಭಾಗವಹಿಸುವಿಕೆ– Financial participation
- ಪ್ರೊ–ಕ್ರಿಯಾಶೀಲತೆ Prof-activeness
- ಭಾವನಾತ್ಮಕ ಸೇರುವಿಕೆ– Emotional belongingness

ಸದಸ್ಯರ ಭಾಗವಹಿಸುವಿಕೆಯನ್ನು ಸಕ್ರಿಯಗೊಳಿಸಲು, ವ್ಯವಸ್ಥಾಪಕ ಸಮಿತಿಯ ಸದಸ್ಯರು/ನಿರ್ದೇಶಕರ ಮಂಡಳಿಯು ನಾಯಕತ್ವ, ದೂರದೃಷ್ಟಿ, ಶೀಘ್ರ, ನಿರ್ಧಾರ ತೆಗೆದುಕೊಳ್ಳುವುದು, ಪರಿಣಾಮಕಾರಿ ಆಡಳಿತ ಮುಂತಾದ ಕೆಲವು ಗುಣಗಳನ್ನು ಹೊಂದಿರಬೇಕು ಎಂದು ನಿರೀಕ್ಷಿಸಲಾಗಿದೆ.

**ಸದಸ್ಯರ ಭಾಗವಹಿಸುವಿಕೆಯನ್ನು ಬಲಪಡಿಸಲು ತಂತ್ರಗಳು**

- ಪ್ರತಿಯೊಂದು ಸಹಕಾರಿ ಸಂಘವು ಭೌಗೋಳಿಕ ಮತ್ತು ಸಾಮಾಜಿಕ ಪರಿಸರದ ಆಧಾರದ ಮೇಲೆ ಕೆಲವು ಕಾರ್ಯತಂತ್ರಗಳನ್ನು ವಿಕಸನಗೊಳಿಸಬೇಕು, ನಿಷ್ಕ್ರಿಯ ಸದಸ್ಯರನ್ನು ಸಕ್ರಿಯಗೊಳಿಸಲು ಮತ್ತು ನಂಬಿಕೆ ಮತ್ತು ವಿಶ್ವಾಸದ ಮೂಲಕ ಸಮಾಜದ ಎಲ್ಲಾ ಸದಸ್ಯರ ನಡುವೆ ಸಾಮರಸ್ಯ ಮತ್ತು ಏಕೀಕರಣವನ್ನು ಸೃಷ್ಟಿಸಬೇಕು.
- ಸಹಕಾರಿ ಸಂಘದ ವ್ಯವಸ್ಥಾಪಕ ಸಮಿತಿಯು ಕೆಲವು ಕಾರ್ಯತಂತ್ರಗಳನ್ನು ಅನುಸರಿಸುವ ಮೂಲಕ ಸಹಕಾರಿ ವ್ಯವಸ್ಥೆಗಳು ಮತ್ತು 'ಸದಸ್ಯರು' ಕೇಂದ್ರಿತವಾಗಿ ಕೇಂದ್ರೀಕರಿಸುವ ಪರ–ಸಕ್ರಿಯವಾಗಿರಬೇಕು.
- ಸದಸ್ಯರ ಭಾಗವಹಿಸುವಿಕೆಯನ್ನು ಬಲಪಡಿಸಲು 'ಕ್ರಿಯ ಯೋಜನೆ'ಯನ್ನು ವಿನ್ಯಾಸಗೊಳಿಸಿ.
- ಅಗತ್ಯ ಆಧಾರಿತ ಸದಸ್ಯರ ಇಂಡಕ್ಷನ್.
- ಸಹಕಾರಿ ನಾಯಕತ್ವದ ಉಪಸ್ಥಿತಿ(ಸ್ವಯಂ–ಕಡಿಮೆ, ನೈತಿಕ, ಬದ್ಧ)
- ವೃತ್ತಿಪರ ತರಬೇತುದಾರರ ಮೂಲಕ ಸದಸ್ಯರಿಗೆ ನಿಯಮಿತ ಸಹಕಾರ ಶಿಕ್ಷಣ.
- ಸದಸ್ಯರ ಪಾತ್ರ – ಅವರ ಹಕ್ಕುಗಳು ಮತ್ತು ಕರ್ತವ್ಯಗಳ ನಡುವೆ ಜಾಗೃತಿ ಮೂಡಿಸುವುದು.
- ಸಹಕಾರಿ ಸಂಘದ ಯಶಸ್ಸಿಗೆ ಸದಸ್ಯರ ಪಾಲ್ಗೊಳ್ಳುವಿಕೆಯ ಮಹತ್ವವನ್ನು ಚುಚ್ಚುವುದು.
- ಸದಸ್ಯರ ಅಗತ್ಯತೆಗಳು ಮತ್ತು ನಿರೀಕ್ಷೆಗಳನ್ನು ಪೂರೈಸುವುದು.
- "ಬಹುಪಯೋಗಿ ಸಹಕಾರಿ ಸಂಘ"ದ ಮೂಲಕ ವ್ಯಾಪಾರದ ಸುದ್ದಿ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವುದು.
- ಸದಸ್ಯರೊಂದಿಗೆ ನಿರಂತರ ಸಂಪರ್ಕವನ್ನು ಇಟ್ಟುಕೊಳ್ಳುವುದು.
- ದೈನಂದಿನ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆ, ದಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಪ್ರದರ್ಶಿಸುವುದು.
- ಸದಸ್ಯರ ಭಾಗವಹಿಸುವಿಕೆಯ ಮೇಲೆ ಕೇಂದ್ರೀಕರಿಸಲು ವಿಶೇಷ ಸಮಿತಿಯನ್ನು ರಚಿಸುವುದು.
- ಕ್ರಿಯಾ ಯೋಜನೆಯನ್ನು ಕಾರ್ಯಗತಗೊಳಿಸಲು ಸದಸ್ಯರ ಭಾಗವಹಿಸುವಿಕೆಗಾಗಿ ವಿಶೇಷ ನಿಧಿಯನ್ನು ರಚಿಸಲಾಗಿದೆ.

**ಉಪಸಂಹಾರ :**


ಸಹಕಾರಿ ವ್ಯವಸ್ಥೆಯಲ್ಲಿ ಯಶಸ್ವಿಯಾಗಲು, ಕೆಲವು ಅಂಶಗಳನ್ನು ಅಳವಡಿಸಿಕೊಳ್ಳಬೇಕಿದೆ. ಬದ್ಧತೆ ಮತ್ತು ನಿಸ್ವಾರ್ಥ ಸಹಕಾರಿ ನಾಯಕತ್ವ, ಅತ್ಯುತ್ತಮ ನಿರ್ವಹಣೆ ಮತ್ತು ಸದಸ್ಯರಿಗೆ ಸ್ಪಂದಿಸುವಿಕೆ ಇರಬೇಕು. ಸಹಕಾರಿ ವ್ಯವಸ್ಥೆಯಲ್ಲಿ ದಕ್ಷತೆ ಮತ್ತು ಹೆಚ್ಚಿನ ಉತ್ಪಾದಕತೆಯೊಂದಿಗೆ ಸ್ಪರ್ಧಾತ್ಮಕ ವ್ಯಾಪಾರ ವಾತಾವರಣವನ್ನು ಸೃಷ್ಟಿಸಲು, ಪ್ರಕ್ರಿಯೆಯು "ಸದಸ್ಯರ ಭಾಗವಹಿಸುವಿಕೆ"ಯಲ್ಲಿ ಶಾಶ್ವತವಾಗಿ ಸುತ್ತುತ್ತಿರಬೇಕು. ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರ ವ್ಯವಹಾರವನ್ನು ಉತ್ತೇಜಿಸಲು ಮಾಧ್ಯಮ ಚಾನೆಲ್‌ಗಳ ವ್ಯಾಪಕ ಬಳಕೆಯನ್ನು ಬಳಸಿಕೊಳ್ಳಬೇಕು, ಇದರಿಂದಾಗಿ ಬ್ರ್ಯಾಂಡ್ ಇಮೇಜ್ ಅನ್ನು ರಚಿಸಲು ಮತ್ತು ಸಮಾಜದ ಖ್ಯಾತಿಯನ್ನು ಹೆಚ್ಚಿಸಲು ಇದು ಸದಸ್ಯರಿಗೆ ವಿಶ್ವಾಸವನ್ನು ನೀಡುತ್ತದೆ ಮತ್ತು ಸದಸ್ಯರ ಭಾಗವಹಿಸುವಿಕೆಯನ್ನು ಬಲಪಡಿಸುತ್ತದೆ.

# ಪ್ರಾತಃ ಸ್ಮರಣೀಯರಾದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜಯಂತಿ

– ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಪ್ರತಿವರ್ಷ ಅಕ್ಟೋಬರ್ 2 ರಂದು ದೇಶದ ಜನತೆ ಇಬ್ಬರು ಮಹಾನ್ ವ್ಯಕ್ತಿಗಳ ಹುಟ್ಟುಹಬ್ಬವನ್ನು ಆಚರಣೆ ಮಾಡಲಾಗುತ್ತದೆ. ಒಬ್ಬರು ರಾಷ್ಟ್ರಪಿತ ಮಹಾತ್ಮ ಗಾಂಧಿ ಮತ್ತು ಮತ್ತೊಬ್ಬರು ಶ್ರೇಷ್ಠ ಮುತ್ಸದ್ಧಿ ಲಾಲ್ ಬಹದ್ದೂರ್ ಶಾಸ್ತ್ರಿ. ಲಾಲ್ ಬಹದ್ದೂರ್ ಶಾಸ್ತ್ರಿ ಈ ದೇಶ ಕಂಡ ಅಪ್ರತಿಮ ನಾಯಕ. ಸಜ್ಜನ ನೇತಾರ. ಈ ದಿನವನ್ನು ರಾಷ್ಟ್ರದಾದ್ಯಂತ ಸಾರ್ವಜನಿಕ ರಜಾದಿನವನ್ನಾಗಿ ಆಚರಿಸಲಾಗುತ್ತದೆ.

## ಮಹಾತ್ಮ ಗಾಂಧೀಜಿ :



ಭಾರತವು ಪ್ರತಿ ವರ್ಷ ತನ್ನ ಅಪ್ರತಿಮ ಮುಂಚೂಣಿಯ ಓಟಗಾರನ ಜನ್ಮದಿನವನ್ನು ಆಚರಿಸುತ್ತದೆ. ದೇಶಕ್ಕೆ ಅವರು ನೀಡಿದ ಮಹತ್ವದ ಕೊಡುಗೆಗಳಿಗಾಗಿ ಅವರಿಗೆ 'ರಾಷ್ಟ್ರಪಿತ' ಎಂಬ ಬಿರುದನ್ನು ನೀಡಲಾಗಿದೆ. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವಲ್ಲಿ ಅವರು ಅಗಾಧ ಪಾತ್ರ ವಹಿಸಿದರು. ದೇಶದ ಒಳಿತಿಗಾಗಿ ತನ್ನ ಪ್ರಾಣವನ್ನೇ ತ್ಯಾಗ ಮಾಡಿದ ಈ ಮಹಾನ್ ನಾಯಕನಿಗೆ ನಮನ ಸಲ್ಲಿಸಲು ದೇಶವಾಸಿಗಳಿಗೆ ಇದೊಂದು ಉತ್ತಮ ಅವಕಾಶ. ಗಾಂಧೀಜಿಗೆ ದೇಶಾದ್ಯಂತ ಶಾಲೆಗಳು, ಕಾಲೇಜುಗಳು, ಸರ್ಕಾರಿ ಕಚೇರಿಗಳು, ಹಾಗೆಯೇ ಸಾಮಾಜಿಕ, ರಾಜಕೀಯ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸ್ಮರಣಾರ್ಥ ಚಟುವಟಿಕೆಗಳಲ್ಲಿ ಪ್ರಾರ್ಥನಾ ಸಭೆಗಳು, ಅವರ ನೆಚ್ಚಿನ "ರಘುಪತಿ ರಾಘವ ರಾಜ ರಾಮ್ "ಸೇರಿದಂತೆ ಭಕ್ತಿಗೀತೆಗಳು, ಪ್ರಶಸ್ತಿ ಪ್ರದಾನಗಳು ಮತ್ತು ರ್ಯಾಲಿಗಳು ಸೇರಿವೆ.

ಗಾಂಧೀಜಿ ಅವರ ತಂದೆ ಕರಮಚಂದ್ ಗಾಂಧಿ, ಬ್ರಿಟಿಷ್ ಇಂಡಿಯಾದ ಪೋರಬಂದರ್ ರಾಜ್ಯದ ದಿವಾನ್ ಆಗಿದ್ದರು. ಅವರ ತಾಯಿ ಪುಥಲಿಬಾಯಿ, ಹಿಂದೂ ಕುಟುಂಬದಲ್ಲಿ ಜನಿಸಿದ ಗಾಂಧೀಜಿ ಅವರು, ಸ್ವಯಂ ಶುದ್ಧೀಕರಣದ ಸಾಧನವಾಗಿ ಸಸ್ಯಾಹಾರ ಮತ್ತು ಉಪವಾಸವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿದರು. 13ನೇ ವಯಸ್ಸಿನಲ್ಲಿ, ಅವರು ಕಸ್ತೂರಬಾ ಅವರನ್ನು ವಿವಾಹವಾದರು. 1885 ರಲ್ಲಿ, ಕಸ್ತೂರಬಾ ತಮ್ಮ ಮೊದಲ ಮಗುವಿಗೆ ಜನ್ಮ ನೀಡಿದರು, ದಂಪತಿಗೆ ನಾಲ್ಕು ಗಂಡು ಮಕ್ಕಳಿದ್ದರು. ಇನ್ನು ಮಹಾತ್ಮಾಗಾಂಧಿ ತಮ್ಮ ಶಾಲಾ ದಿನಗಳಲ್ಲಿ ಒಬ್ಬ ಸಾಧಾರಣ ವಿದ್ಯಾರ್ಥಿ ಆಗಿದ್ದರು. ಗುಜರಾತ್ ಸಮಲ್ದಾಸ್ ಕಾಲೇಜಿನಲ್ಲಿ ತಮ್ಮ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಮೂರನೇ ದರ್ಜೆಯಲ್ಲಿ ಉತ್ತೀರ್ಣರಾಗಿದ್ದರು. ಸೆಪ್ಟೆಂಬರ್ 4, 1888ರಲ್ಲಿ ಅವರು ಬಾರಿಸ್ಟರ್ ಓದಲು ಇಂಗ್ಲೆಂಡ್ ಪ್ರಯಾಣ ಬೆಳೆಸಿದರು. ಯೂನಿವರ್ಸಿಟಿ ಕಾಲೇಜ್ ಲಂಡನ್‌ನಲ್ಲಿ ಅವರು ಕಾನೂನು ಅಧ್ಯಯನ ನಡೆಸಿದರು.

ದೇಶವಾಸಿಗಳನ್ನು ಪ್ರೇರೇಪಿಸಲು ಮತ್ತು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಹೋರಾಡಲು ಗಾಂಧೀಜಿಯವರು ಭಾರತದ ವಿವಿಧ ಭಾಗಗಳಲ್ಲಿ ಸಂಚರಿಸಿದರು. ಗುಜರಾತ್ ರಾಜಧಾನಿ ಅಹಮದಾಬಾದ್‌ನಲ್ಲಿ 1951 ರಲ್ಲಿ ಅವರು ಆಶ್ರಮವನ್ನು ಸ್ಥಾಪಿಸಿದರು, ಇದು ಎಲ್ಲಾ ಜಾತಿ ಮತ್ತು ಧರ್ಮಗಳಿಗೆ ಸಾಮಾನ್ಯವಾಗಿದೆ. ಅವರು ಈ ಆಶ್ರಮದಲ್ಲಿ ಉತ್ತಮ ಜೀವನವನ್ನು ಕಳೆದರು. 1932 ರಲ್ಲಿ, ಅಸ್ಪೃಶ್ಯರನ್ನು ಪ್ರತ್ಯೇಕಿಸುವ ಬ್ರಿಟಿಷರ ನಿರ್ಧಾರವನ್ನು ರಕ್ಷಿಸಲು ಗಾಂಧೀಜಿಯವರು 6 ದಿನಗಳ ಉಪವಾಸವನ್ನು ಮಾಡಿದರು.

ಬ್ರಿಟಿಷ ವಿರುದ್ಧ ಹೊರಾಡಲು ಮಹಾತ್ಮ ಗಾಂಧೀಜಿ ಅವರು ಭಾರತದ ಜನರಿಗೆ ನೀಡಿದ ದಿವ್ಯಾಸ್ತವೆಂದರೆ, ಸತ್ಯಾಗ್ರಹ. ವಿದೇಶಿವಸ್ತುಗಳಿಗೆ ಬಹಿಷ್ಕಾರ, ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳುವಳಿ, ಆಮರಣ ಉಪವಾಸ ಇವುಗಳನ್ನು ಮುನ್ನೆಡೆಸುವ ಅಹಿಂಸಾ ಚಳುವಳಿಯ ಮೂಲಕ ಮಹಾತ್ಮ ಗಾಂಧಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೆಚ್ಚಿಸಿದ್ದರು.

1942 ರಲ್ಲಿ ಗಾಂಧೀಜಿ ಅವರು ಬ್ರಿಟಿಷರ ವಿರುದ್ಧ ಭಾರತ ಬಿಟ್ಟು ತೊಲಗಿ ಚಳುವಳಿ ಆರಂಭಿಸಿದರು. ಇದೇ ಕೊನೆಯ ಹೋರಾಟ ಎಂದ ಗಾಂಧೀಜಿಯವರು, ಭಾರತೀಯರಿಗೆ ಮಾಡು ಇಲ್ಲವೆ ಮಡಿ ಎನ್ನುವ ಕರೆಯನ್ನು ನೀಡಿದರು. ಈ ಹೋರಾಟದಲ್ಲಿ ಸಾಕಷ್ಟು ಸಾವು, ನೋವುಗಳು ಸಂಭವಿಸಿದರು, ಭಾರತೀಯ ಸ್ವಾತಂತ್ರ್ಯ ಹೋರಾಟಗಾರರ ಛಲ ಬಿಡದ ಹೋರಾಟದಿಂದ 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರಕಿತು. 1948 ಜನವರಿ 30 ರಂದು ಗಾಂಧೀಜಿ ಅವರನ್ನ ಗುಂಡಿಕ್ಕಿ ಹತ್ಯೆ ಮಾಡಲಾಯಿತು

ವಿಶ್ವಸಂಸ್ಥೆಯು ಗಾಂಧಿ ಜಯಂತಿಯನ್ನು 'ಅಂತರಾಷ್ಟ್ರೀಯ ಅಹಿಂಸಾ ದಿನ' ಎಂದು ಆಚರಿಸಲಾಗುತ್ತದೆ. ಸ್ವಾತಂತ್ರ್ಯ ಹೋರಾಟಕ್ಕೆ ಅವರ ಅಮೂಲ್ಯ ಕೊಡುಗೆಗಳನ್ನು ಗೌರವಿಸಲು ಈ ದಿನದಂದು ಗಾಂಧೀಜಿ ಅವರ ಚಿಂತನೆಗಳನ್ನು ಮತ್ತು ತತ್ವಗಳನ್ನು ಪ್ರಚಾರ ಮಾಡುವ ಅನೇಕ ಕಾರ್ಯಕ್ರಮಗಳನ್ನು ದೇಶಾದ್ಯಂತ ಆಯೋಜಿಸಲಾಗುತ್ತದೆ.

**"ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು"** ಎಂದು ತಿಳಿಸಿದ ಗಾಂಧೀಜಿಯವರು ಸಹಕಾರ ಕ್ಷೇತ್ರದ ಮೂಲಕ ನಾವು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಲು ಮುಂದಾಗಬೇಕು ಎಂದು ತಿಳಿಸಿದರು.

# ಲಾಲ್ ಬಹದ್ದೂರ್ ಶಾಸ್ತ್ರೀ



ಲಾಲ್ ಬಹದ್ದೂರ್ ಶಾಸ್ತ್ರಿ ಅವರು ತಮ್ಮ ಸರಳ ಜೀವನ, ಸರಳ ಸ್ವಭಾವ, ಪ್ರಾಮಾಣಿಕತೆ ಮತ್ತು ಅವರ ದೃಢಸಂಕಲ್ಪಕ್ಕೆ ಹೆಸರುವಾಸಿಯಾಗಿದ್ದರು. ಲಾಲ್ ಬಹದ್ದೂರ್ ಶಾಸ್ತ್ರಿ ಜೀವನಚರಿತ್ರೆ ಲಾಲ್ ಬಹದ್ದೂರ್ ಶಾಸ್ತ್ರಿ ಸ್ವಾತಂತ್ರ್ಯ ಹೋರಾಟಗಾರ ಮಾತ್ರವಲ್ಲ ಭಾರತೀಯ ರಾಜಕಾರಣಿಯೂ ಆಗಿದ್ದರು. ಉತ್ತರ ಪ್ರದೇಶದ ವಾರಾಣಸಿಯಿಂದ ಏಳು ಕಿಲೋಮೀಟರ್ ದೂರದಲ್ಲಿರುವ ಪುಟ್ಟ ಹಳ್ಳಿ ಮುಗಲ್ಸರಾಯಿಯಲ್ಲಿ ಅಕ್ಟೋಬರ್ 2, 1904ರಂದು ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ ಜನಿಸಿದರು. ಲಾಲ್ ಬಹಾದ್ದೂರ್ ಶಾಸ್ತ್ರಿಯವರ ತಂದೆ ಒಬ್ಬ ಶಾಲಾ ಶಿಕ್ಷಕರಾಗಿದ್ದರು ಮತ್ತು ಶಾಸ್ತ್ರಿಯವರು ಒಂದೂವರೆ ವರ್ಷದವರಾಗಿರುವಾಗಲೇ ಅವರು ತೀರಿಕೊಂಡರು. ಆಗ ಇಪ್ಪತ್ತು ವಯಸ್ಸಿನ ಅವರ ತಾಯಿ ತಮ್ಮ ಹದಿಮೂರು ಮಕ್ಕಳ ಜತೆ ತವರು ಮನೆ ಸೇರಿ ಅಲ್ಲೇ ಉಳಿದರು.

ಲಾಲ್ ಬಹಾದ್ದೂರ್ ಅವರ ಪುಟ್ಟ ಹಳ್ಳಿಯ ಶಿಕ್ಷಣ ಯಾವ ರೀತಿಯಲ್ಲೂ ಗಮನಾರ್ಹವಾಗಿಲ್ಲಿಲ್ಲ. ಕಿತ್ತು ತಿನ್ನುವ ಬಡತನವೊಂದನ್ನು ಬಿಟ್ಟರೆ ಅವರ ಬಾಲ್ಯ ಸಂತಸಮಯವಾಗಿತ್ತು. ಪ್ರೌಢ ಶಾಲೆಗೆ ದಾಖಲಿಸಲು ಲಾಲ್ ಬಹಾದ್ದೂರ್ ಅವರನ್ನು ಅವರ ಮಾವನೊಡನೆ ವಾರಾಣಸಿಗೆ ಕಳುಹಿಸಲಾಯಿತು. ಉರಿ ಬಿಸಿಲಿನಲ್ಲಿ ಕಾದ ರಸ್ತೆ ಮೇಲೆ ಚಪ್ಪಲಿಗಳಿಲ್ಲದೆ ಮೈಲುಗಟ್ಟಲೆ ನಡೆದು ಲಾಲ್ ಬಹಾದ್ದೂರ್ ಶಾಲೆ ಸೇರಬೇಕಾಗಿತ್ತು. ಬೆಳೆಯುತ್ತಿದ್ದಂತೆ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರಿಗೆ ವಿದೇಶಿಯರ ಹಿಡಿತದಲ್ಲಿರುವ ದೇಶದ ಸ್ವಾತಂತ್ರ್ಯ ಹೋರಾಟದ ಕುರಿತು ಆಸಕ್ತಿ ಹೆಚ್ಚತೊಡಗಿತು. ಭಾರತದಲ್ಲಿ ಬ್ರಿಟಿಷ್ ಆಡಳಿತವನ್ನು ಬೆಂಬಲಿಸಿದ ದೇಶದ ರಾಜರುಗಳ ವಿರುದ್ಧ ಮಹಾತ್ಮಾ ಗಾಂಧೀಜಿ ಅವರ ಖಂಡನೆಯಿಂದ ಲಾಲ್ ಬಹಾದ್ದೂರ್ ಅತ್ಯಂತ ಪ್ರಭಾವಿತರಾದರು. ಈ ವೇಳೆ ಲಾಲ್ ಬಹಾದ್ದೂರ್ ಕೇವಲ ಹನ್ನೊಂದು ವರುಷ ವಯಸ್ಸಿನವರಾಗಿದ್ದರು.

ಗಾಂಧೀಜಿ ತನ್ನ ದೇಶದ ನಾಗರಿಕರನ್ನು ಅಸಹಕಾರ ಚಳುವಳಿಗೆ ಸೇರಲು ಕರೆ ನೀಡಿದ ಸಂದರ್ಭದಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರಿಗೆ ಕೇವಲ ಹದಿನಾರು ವರುಷ ವಯಸ್ಸು. ಮಹಾತ್ಮಾ ಅವರ ಕರೆಗೆ ಪ್ರತಿಕ್ರಿಯೆಯಾಗಿ ತನ್ನ ಓದನ್ನು ಬಿಟ್ಟು ಚಳುವಳಿಗೆ ಸೇರಲು ಶಾಸ್ತ್ರಿ ಅವರು ಒಂದೇ ಬಾರಿಗೆ ನಿರ್ಧರಿಸಿದರು. ಅವರ ನಿರ್ಧಾರ ತಾಯಿಯ ನಿರೀಕ್ಷೆಗಳನ್ನು ನುಚ್ಚುನೂರಾಗಿಸಿತು. ಲಾಲ್ ಬಹಾದ್ದೂರ್ ತನ್ನ ನಿರ್ಣಯವನ್ನು ತೆಗೆದುಕೊಂಡಿದ್ದರು. ಶಾಸ್ತ್ರಿ ಅವರಿಗೆ ಆತ್ಮೀಯರಾದವರಿಗೆಲ್ಲ ಅವರು ಒಮ್ಮೆ ನಿರ್ಣಯ ತೆಗೆದುಕೊಂಡ ಬಳಿಕ ಅವರ ಮನಸ್ಸನ್ನು ಬದಲಾಯಿಸಲು ಸಾಧ್ಯವಿಲ್ಲ, ಅವರ ಮೃದು ಬಾಹ್ಯದ ಒಳಗಿರುವುದು ಕಲ್ಲಿನಂತಹ ದೃಢ ಮನಸ್ಸು ಎಂಬುದರ ಅರಿವಿತ್ತು.

ಬ್ರಿಟಿಷ್ ಆಡಳಿತಕ್ಕೆ ವಿರೋಧವಾಗಿ ಸ್ಥಾಪಿಸಲಾದ ಹಲವಾರು ರಾಷ್ಟ್ರೀಯ ಸಂಸ್ಥೆಗಳಲ್ಲೊಂದಾದ ವಾರಣಾಸಿಯ ಕಾಶಿ ವಿದ್ಯಾ ಪೀಠವನ್ನು ಲಾಲ್ ಬಹಾದ್ದೂರ ಶಾಸ್ತ್ರಿ ಸೇರಿದರು. ಅಲ್ಲಿ ಅವರು ದೇಶದ ಶ್ರೇಷ್ಠ ಬುದ್ಧಿ ಜೀವಿಗಳು ಮತ್ತು ರಾಷ್ಟ್ರೀಯವಾದಿಗಳ ಪ್ರಭಾವಕ್ಕೆ ಒಳಗಾದರು. 'ಶಾಸ್ತ್ರಿ' ಎಂಬುದು ವಿದ್ಯಾಪೀಠದಿಂದ ಲಾಲ್ ಬಹದ್ದೂರರಿಗೆ ನೀಡಿದ ಪದವಿ. ಆದರೆ, ಅದು ಅವರ ಹೆಸರಿನ ಭಾಗವಾಗಿ ಜನಮನದಲ್ಲಿ ಉಳಿದುಕೊಂಡಿದೆ. ಭಾರತದ ರಾಜಕೀಯ ರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಶಾಸ್ತ್ರಿ ಅವರು, ಜೈ ಜವಾನ್, ಜೈ ಕಿಸಾನ್ ಎಂಬ ಘೋಷವಾಕ್ಯದ ಮೂಲಕ ದೇಶದ ಅಭಿವೃದ್ಧಿಗೆ ಹೊಸ ಹೊಳಪು ನೀಡಿದವರು.

ದೇಶದ ಪ್ರಥಮ ಪ್ರಧಾನ ಮಂತ್ರಿ ದಿವಂಗತ ಜವಾಹರಲಾಲ್ ನೆಹರು ಅವರ ಸಚಿವ ಸಂಪುಟದಲ್ಲಿ ರೈಲ್ವೆ ಖಾತೆ ಸಚಿವರಾಗಿದ್ದರು. 1964ರಲ್ಲಿ ನೆಹರು ಅವರು ನಿಧನರಾದ ನಂತರ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ದೇಶದ ಪ್ರಧಾನ ಮಂತ್ರಿಯಾಗಿ ಅತ್ಯಂತ ಧೃಡ ನಿರ್ಧಾರಗಳನ್ನು ತೆಗೆದುಕೊಂಡು 18 ತಿಂಗಳುಗಳ ಕಾಲ ಈ ರಾಷ್ಟ್ರದ ಅತ್ಯಂತ ಉತ್ತಮ ಪ್ರಧಾನಿ ಎನಿಸಿಕೊಂಡರು. ದುರದೃಷ್ಟ ವಶತ್ ರಷ್ಯಾ ಅಧ್ಯಕ್ಷರ ನೇತೃತ್ವದಲ್ಲಿ ಇಂಡೋ–ಪಾಕಿಸ್ತಾನ ಯುದ್ಧವನ್ನು ಕೊನೆಗೊಳಿಸಲು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಒಂದು ದಿನದ ನಂತರ ಉಜ್ಬೇಕಿಸ್ತಾನದ ತಾಷ್ಕೆಂಟ್‌ನಲ್ಲಿ ಹೃದಯಘಾತದಿಂದ ನಿಧನರಾದ್ದರು. ದೇಶ ಕಂಡ ಅತ್ಯಂತ ಉನ್ನತ ನಾಯಕ ಹಾಗೂ ಈದೇಶದ ರೈತರ ಹಾಗೂ ಸೈನಿಕರ ಬಗ್ಗೆ ಹೆಚ್ಚಿನ ಕಾಳಜಿಯನ್ನು ಹೊಂದಿರುವ ಅತ್ಯಂತ ಉನ್ನತ ನಾಯಕರನ್ನು ದೇಶ ಕಳೆದುಕೊಂಡಾಯಿತು.

# ಯಶಸ್ವಿ ಸಹಕಾರ ನಿರ್ವಹಣೆಗೆ ಅತ್ಯುತ್ತಮ ಅಭ್ಯಾಸಗಳು ಅಗತ್ಯ

– ಮೂಲ : ಜಿ.ಹೆಚ್. ಅಮೀನ್, ಅಧ್ಯಕ್ಷರು, ಗುಜರಾತ್ ಸ್ಟೇಟ್ ಕೋಆಪರೇಟಿವ್ ಯೂನಿಯನ್ ಮತ್ತು ಸದಸ್ಯರು, ಎನ್‌ಸಿಯುಐ ಗವರ್ನಿಂಗ್ ಕೌನ್ಸಿಲ್.
– ಅನುವಾದ : ದಿವ್ಯ.ಟಿ., ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.

**ಪೀಠಿಕೆ :**

ಸಹಕಾರಿ ಸಂಸ್ಥೆಗಳು ಪ್ರಜಾಪ್ರಭುತ್ವ ಆಡಳಿತ, ಸದಸ್ಯರ ಭಾಗವಹಿಸುವಿಕೆ ಮತ್ತು ಸಮುದಾಯದ ಅಭಿವೃದ್ಧಿಗೆ ಒತ್ತು ನೀಡುವ ವಿಶಿಷ್ಟವಾದ ಮತ್ತು ಪ್ರಬಲವಾದ ವ್ಯವಹಾರ ಮಾದರಿಯನ್ನು ಪ್ರತಿನಿಧಿಸುತ್ತದೆ. ಪ್ರಾಥಮಿಕವಾಗಿ ಲಾಭವನ್ನು ಗಳಿಸುವ ಮೂಲಕ ನಡೆಸಲ್ಪಡುವ ಸಾಂಪ್ರದಾಯಿಕ ಉದ್ಯಮಗಳಿಗಿಂತ ಭಿನ್ನವಾಗಿ, ಸಹಕಾರಿ ಸಂಸ್ಥೆಗಳು ತಮ್ಮ ಸೇವೆಗಳನ್ನು ಉಪಯೋಗಿಸುವ, ಅಲ್ಲಿ ಕಾರ್ಯನಿರ್ವಹಿಸುವ ಅಥವಾ ಸಂಸ್ಥೆಯೊಂದಿಗೆ ನಿಕಟ ಸಂಪರ್ಕ ಹೊಂದಿರುವ ಅವರ ಸದಸ್ಯರು–ವ್ಯಕ್ತಿಗಳ ಒಡೆತನ ಮತ್ತು ನಿಯಂತ್ರಣದಲ್ಲಿರುತ್ತದೆ. ಈ ಸದಸ್ಯ–ಕೇಂದ್ರಿತ ವಿಧಾನವು ಅಂತರ್ಗತವಾಗಿ ಸಮಾನವಾದ ಮತ್ತು ಸುಸ್ಥಿರವಾದ ವ್ಯವಹಾರವನ್ನು ಉತ್ತೇಜಿಸುತ್ತದೆ, ಆರ್ಥಿಕ ಹಾಗೂ ಸಾಮಾಜಿಕ ಉದ್ದೇಶಗಳನ್ನು ಸಾಧಿಸುತ್ತದೆ.

ಸಹಕಾರದ ಮೂಲತತ್ವಗಳಾದ ಸ್ವಯಂಪ್ರೇರಿತ ಮತ್ತು ಮುಕ್ತ ಸದಸ್ಯತ್ವ, ಪ್ರಜಾಪ್ರಭುತ್ವ ಸದಸ್ಯರ ಹತೋಟಿ, ಸದಸ್ಯರ ಆರ್ಥಿಕ ಭಾಗವಹಿಸುವಿಕೆ, ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ, ಶಿಕ್ಷಣ ಮತ್ತು ತರಬೇತಿ, ಸಹಕಾರಿಗಳ ನಡುವಿನ ಸಹಕಾರ ಮತ್ತು ಸಾಮಾಜಿಕ ಕಳಕಳಿ ಇವುಗಳಲ್ಲಿ ಸಹಕಾರಿ ಸಂಸ್ಥೆಯ ಮೂಲತತ್ವ ಅಡಗಿದೆ. ಈ ತತ್ವಗಳು ಉದ್ಯಮಗಳ ಕಾರ್ಯಾಚರಣೆ ಮತ್ತು ಆರ್ಥಿಕ ಬೇಡಿಕೆಗಳೊಂದಿಗೆ ಸಹಕಾರಿ ಸಂಸ್ಥೆಯ ವೈವಿಧ್ಯಮಯ ಸದಸ್ಯತ್ವದ ಅಗತ್ಯತೆಗಳು ಮತ್ತು ನಿರೀಕ್ಷೆಗಳನ್ನು ಜಾಗರೂಕತೆಯಿಂದ ಸಮತೋಲನಗೊಳಿಸುವ ಮೂಲಕ ನಿರ್ವಹಣಾ ಶೈಲಿಗೆ ವೇದಿಕೆಯನ್ನು ಒದಗಿಸುತ್ತದೆ.

ಸಾಮೂಹಿಕ ಮಾಲೀಕತ್ವದ ಸಂಕೀರ್ಣತೆಗಳನ್ನು ಪರಿಹರಿಸುವುದು ಮತ್ತು ಭಾಗವಹಿಸುವಿಕೆಯ ನಿರ್ಧಾರ ತೆಗೆದುಕೊಳ್ಳುವುದನ್ನು ಸಹಕಾರ ನಿರ್ವಹಣೆಯು ಒಳಗೊಂಡಿರುತ್ತದೆ, ಇದು ಗಮನಾರ್ಹವಾಗಿ ಸಾಂಪ್ರದಾಯಿಕ ಕಾರ್ಪೊರೇಟ್ ನಿರ್ವಹಣಾ ಅಭ್ಯಾಸಗಳಿಂದ ಭಿನ್ನವಾಗಿರುತ್ತದೆ. ಸಹಕಾರಿಯ ಯಶಸ್ಸು ಮತ್ತು ಸುಸ್ಥಿರತೆಯು ಪರಿಣಾಮಕಾರಿ ಆಡಳಿತ, ದೃಢವಾದ ಸದಸ್ಯರ ಒಳಗೊಳ್ಳುವಿಕೆ, ವಿವೇಕಯುತ ಆರ್ಥಿಕ ನಿರ್ವಹಣೆ, ಪ್ರಬಲವಾದ ನಾಯಕತ್ವ, ಸಕ್ರಿಯ ಸಮುದಾಯದ ಒಳಗೊಳ್ಳುವಿಕೆ, ನಿರಂತರ ನಾವೀನ್ಯತೆ ಮತ್ತು ನೈತಿಕ ವ್ಯವಹಾರ ಅಭ್ಯಾಸಗಳ ಅನುಸರಣೆಯ ಮೇಲೆ ಅವಲಂಬಿತವಾಗಿದೆ. ಈ ಪ್ರತಿಯೊಂದು ಅಂಶಗಳು ನೈಜವಾಗಿರುವ ಸಹಕಾರಿ ಸಂಸ್ಥೆಯ ಪ್ರಮುಖ ಮೌಲ್ಯಗಳು ಮತ್ತು ಧ್ಯೇಯಕ್ಕೆ, ಹಾಗೆಯೇ ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವ ಸ್ಥಿತಿಸ್ಥಾಪಕತ್ವ ಸಂಘಟನೆಯನ್ನು ರಚಿಸಲು ಕೊಡುಗೆ ನೀಡುತ್ತವೆ.

ಈ ಲೇಖನವು, ಸಹಕಾರ ನಿರ್ವಹಣೆಯಲ್ಲಿನ ಉತ್ತಮ ಅಭ್ಯಾಸಗಳನ್ನು ಅನ್ವೇಷಿಸುತ್ತದೆ, ಹೆಚ್ಚು ಸ್ಪರ್ಧಾತ್ಮಕ ಮತ್ತು ಕ್ರಿಯಾತ್ಮಕ ಮಾರುಕಟ್ಟೆಯಲ್ಲಿ ಸಹಕಾರಿ ಸಂಸ್ಥೆಗಳು ಅಭಿವೃದ್ಧಿ ಹೊಂದಲು ಸಹಾಯ ಮಾಡುವ ಒಳನೋಟಗಳು ಮತ್ತು ಕಾರ್ಯತಂತ್ರಗಳನ್ನು ನೀಡುತ್ತವೆ. ಈ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಮೂಲಕ, ಸಹಕಾರಿ ಸಂಸ್ಥೆಗಳು ತಮ್ಮ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸಬಹುದು, ಸದಸ್ಯರ ತೃಪ್ತಿಯನ್ನು ಬೆಳೆಸಬಹುದು ಮತ್ತು ಅವರು ಸೇವೆ ಸಲ್ಲಿಸುವ ಸಮುದಾಯಗಳ ಮೇಲೆ ತಮ್ಮ ಧನಾತ್ಮಕ ಪ್ರಭಾವವನ್ನು ವರ್ಧಿಸಬಹುದು. ಸಹಕಾರಿ ನಾಯಕರಾಗಲಿ, ಸದಸ್ಯರಾಗಲಿ ಅಥವಾ ಸಹಕಾರ ಚಳುವಳಿಯಲ್ಲಿ ಆಸಕ್ತಿ ಹೊಂದಿರುವವರಾಗಲಿ, ಯಶಸ್ವಿ ಮತ್ತು ಸುಸ್ಥಿರ ಸಹಕಾರಿ ಉದ್ಯಮವನ್ನು ಬೆಳೆಸಲು ಆ ಉತ್ತಮ ಅಭ್ಯಾಸಗಳನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ.

**ಸಹಕಾರ ನಿರ್ವಹಣೆಯಲ್ಲಿ ಅತ್ಯುತ್ತಮ ಅಭ್ಯಾಸಗಳು :**

ಸಹಕಾರ ನಿರ್ವಹಣೆಯು ಸಹಕಾರಿ ಉದ್ಯಮಗಳ ಯಶಸ್ಸು ಮತ್ತು ಸುಸ್ಥಿರತೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಸಾಂಪ್ರದಾಯಿಕ ವ್ಯವಹಾರಗಳಿಗಿಂತ ಸಹಕಾರಿ ಸಂಸ್ಥೆಗಳು ಸದಸ್ಯ–ಮಾಲೀಕತ್ವ ಮತ್ತು ಸದಸ್ಯ–ಆಡಳಿತವನ್ನು ಹೊಂದಿದ್ದು, ಇದಕ್ಕೆ ಸದಸ್ಯರ ತೃಪ್ತಿ ಮತ್ತು ಸಮುದಾಯದ ಅಭಿವೃದ್ಧಿಯೊಂದಿಗೆ ಆರ್ಥಿಕ ಕಾರ್ಯಕ್ಷಮತೆಯನ್ನು ಸಮತೋಲನಗೊಳಿಸುವ ವಿಶಿಷ್ಟ ನಿರ್ವಹಣಾ ಅಭ್ಯಾಸಗಳ ಅಗತ್ಯವಿರುತ್ತದೆ. ಈ ಉದ್ಯಮಗಳ ಪರಿಣಾಮಕಾರಿತ್ವ ಮತ್ತು ದೀರ್ಘಾಯುಷ್ಯವನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುವ ಸಹಕಾರ ನಿರ್ವಹಣೆಯಲ್ಲಿನ ಕೆಲವು ಉತ್ತಮ ಅಭ್ಯಾಸಗಳು ಇಲ್ಲಿವೆ.

**1. ಪ್ರಜಾಸತ್ತಾತ್ಮಕ ಆಡಳಿತ :** ಸಹಕಾರಿ ಸಂಸ್ಥೆಗಳ ಹೃದಯಭಾಗವು ಪ್ರಜಾಪ್ರಭುತ್ವ ಆಡಳಿತದ ತತ್ವವಾಗಿದೆ, ಪ್ರತಿಯೊಬ್ಬ ಸದಸ್ಯರು ತಮ್ಮ ಹೂಡಿಕೆಯ ಗಾತ್ರವನ್ನು ಲೆಕ್ಕಿಸದೆಯೇ ಒಬ್ಬ ಸದಸ್ಯ–ಒಂದು ಮತವನ್ನು ಹೊಂದಿರುತ್ತಾರೆ, ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಸಮಾನವಾಗಿ ಹಂಚಿಕೆಯಾಗಿದೆ ಎಂಬುದನ್ನು ಖಚಿತಪಡಿಸುತ್ತದೆ. ಪ್ರಜಾಸತ್ತಾತ್ಮಕ ಆಡಳಿತದಲ್ಲಿನ ಅತ್ಯುತ್ತಮ ಅಭ್ಯಾಸಗಳೆಂದರೆ;

- ಅಂತರ್ಗತ ನಿರ್ಧಾರ–ಕೈಗೊಳ್ಳುವಿಕೆ : ಎಲ್ಲಾ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ಪ್ರಮುಖ ವಿಷಯಗಳ ಮೇಲೆ ಮತ ಚಲಾಯಿಸಲು ನಿಯಮಿತವಾಗಿ ಪಾರದರ್ಶಕ ಮತ್ತು ಅಂತರ್ಗತ ಸಭೆಗಳನ್ನು ನಡೆಸುವುದು.
- ಮಂಡಳಿಯ ತರಬೇತಿ : ಮಂಡಳಿಯ ಸದಸ್ಯರು ಸಹಕಾರಿ ತತ್ವಗಳು ಮತ್ತು ಆಡಳಿತ ಪದ್ಧತಿಗಳಲ್ಲಿ ಉತ್ತಮವಾಗಿ ತರಬೇತಿ ಪಡೆದಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು.
- ಸ್ಪಷ್ಟ ಸಂವಹನ : ಸದಸ್ಯರಿಗೆ ಮಾಹಿತಿ ಮತ್ತು ತೊಡಗಿಸಿಕೊಳ್ಳಲು ಮುಕ್ತ ಹಾಗೂ ಪರಿಣಾಮಕಾರಿ ಸಂವಹನ ಮಾರ್ಗಗಳನ್ನು

ನಿರ್ವಹಿಸುವುದು.

**2. ಸದಸ್ಯರ ಒಳಗೊಳ್ಳುವಿಕೆ ಮತ್ತು ಶಿಕ್ಷಣ :** ಸಹಕಾರಿ ಸಂಸ್ಥೆಯ ಯಶಸ್ಸಿಗೆ ಉತ್ತಮ ತಿಳುವಳಿಕೆಯುಳ್ಳ ಮತ್ತು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಸದಸ್ಯತ್ವವು ನಿರ್ಣಾಯಕವಾಗಿದೆ. ಸದಸ್ಯರ ಒಳಗೊಳ್ಳುವಿಕೆಯನ್ನು ಹೆಚ್ಚಿಸುವ ಅಭ್ಯಾಸಗಳೆಂದರೆ:

- ನಿರಂತರ ಶಿಕ್ಷಣ : ಸಹಕಾರ ಮಾದರಿ, ಆರ್ಥಿಕ ಸಾಕ್ಷರತೆ ಮತ್ತು ವ್ಯವಹಾರ ಕಾರ್ಯಾಚರಣೆಗಳ ಕುರಿತು ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಸದಸ್ಯರ ಪ್ರತಿಕ್ರಿಯೆ : ಸೇವೆಗಳನ್ನು ಸುಧಾರಿಸಲು ಮತ್ತು ಕಾಳಜಿಗಳನ್ನು ಹೆಚ್ಚಿಸಲು ಸದಸ್ಯರಿಂದ ಪ್ರತಿಕ್ರಿಯೆಯನ್ನು ನಿಯಮಿತವಾಗಿ ಪಡೆದುಕೊಂಡು ಅದರಂತೆ ಕಾರ್ಯನಿರ್ವಹಿಸುವುದು.
- ಭಾಗವಹಿಸುವಿಕೆಗಾಗಿ ಪ್ರೋತ್ಸಾಹಕಗಳು : ಸಕ್ರಿಯ ಭಾಗವಹಿಸುವಿಕೆಗಾಗಿ ಪ್ರತಿಫಲ ಕಾರ್ಯಕ್ರಮಗಳು ಅಥವಾ ಗುರುತಿಸುವಿಕೆ ಉಪಕ್ರಮಗಳಂತಹ ಪ್ರೋತ್ಸಾಹಕಗಳನ್ನು ರಚಿಸುವುದು.

**3. ಪರಿಣಾಮಕಾರಿ ಆರ್ಥಿಕ ನಿರ್ವಹಣೆ :** ಉತ್ತಮ ಆರ್ಥಿಕ ನಿರ್ವಹಣೆಯು ಸಹಕಾರಿ ಸಂಸ್ಥೆಯ ಸುಸ್ಥಿರತೆ ಮತ್ತು ಬೆಳವಣಿಗೆಯನ್ನು ಖಚಿತಪಡಿಸುತ್ತದೆ. ಪರಿಣಾಮಕಾರಿ ಆರ್ಥಿಕ ನಿರ್ವಹಣೆಯಲ್ಲಿನ ಉತ್ತಮ ಅಭ್ಯಾಸಗಳೆಂದರೆ;

- ಪಾರದರ್ಶಕ ಆರ್ಥಿಕ ವರದಿ : ನಂಬಿಕೆ ಮತ್ತು ಹೊಣೆಗಾರಿಕೆಯನ್ನು ನಿರ್ಮಿಸಲು ವಿವರವಾದ ಆರ್ಥಿಕ ವರದಿಗಳನ್ನು ನಿರ್ವಹಿಸುವುದು ಮತ್ತು ನಿಯಮಿತವಾಗಿ ಸದಸ್ಯರೊಂದಿಗೆ ಹಂಚಿಕೊಳ್ಳುವುದು.
- ವಿವೇಕಯುತ ಅಪಾಯ ನಿರ್ವಹಣೆ : ಸಹಕಾರಿ ಸಂಸ್ಥೆಯ ಆಸ್ತಿಗಳನ್ನು ಮತ್ತು ಕಾರ್ಯಾಚರಣೆಗಳನ್ನು ರಕ್ಷಿಸಲು ದೃಢವಾದ ಅಪಾಯ ನಿರ್ವಹಣೆ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವುದು.
- ಆರ್ಥಿಕ ಯೋಜನೆಯ ಕಾರ್ಯತಂತ್ರ : ಸಹಕಾರದ ಧ್ಯೇಯ ಮತ್ತು ಗುರಿಗಳಿಗೆ ಹೊಂದಿಕೆಯಾಗುವ ದೀರ್ಘಾವಧಿಯ ಆರ್ಥಿಕ ಯೋಜನೆಗಳನ್ನು ಅಭಿವೃದ್ಧಿಪಡಿಸುವುದು.

**4. ಬಲಿಷ್ಠ ನಾಯಕತ್ವ ಮತ್ತು ನಿರ್ವಹಣೆ :** ಸಹಕಾರಿ ಸಂಸ್ಥೆಯನ್ನು ತನ್ನ ಗುರಿಗಳತ್ತ ಮುನ್ನಡೆಸಲು ಪರಿಣಾಮಕಾರಿ ನಾಯಕತ್ವ ಅತ್ಯಗತ್ಯ. ಬಲಿಷ್ಠ ನಾಯಕತ್ವ ಮತ್ತು ನಿರ್ವಹಣೆಯಲ್ಲಿನ ಪ್ರಮುಖ ಅಭ್ಯಾಸಗಳೆಂದರೆ;

- ನಾಯಕತ್ವ ಅಭಿವೃದ್ಧಿ : ಸದಸ್ಯತ್ವದೊಳಗಿಂದ ನುರಿತ ಮತ್ತು ಜ್ಞಾನವುಳ್ಳ ನಾಯಕರು ಹೊರಹೊಮ್ಮಲು ಅನುಕೂಲಕರವಾದ ವಾತಾವರಣವನ್ನು ಒದಗಿಸುವ ನಾಯಕತ್ವದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಸಹಭಾಗಿತ್ವದ ನಾಯಕತ್ವ : ಸದಸ್ಯರು ಮತ್ತು ಉದ್ಯೋಗಿಗಳ ನಡುವೆ ಸಹಯೋಗ ಹಾಗೂ ತಂಡದಲ್ಲಿ ಕಾರ್ಯ ನಿರ್ವಹಣೆಯನ್ನು ಉತ್ತೇಜಿಸುವ ನಾಯಕತ್ವ ಶೈಲಿಯನ್ನು ಪ್ರೋತ್ಸಾಹಿಸುವುದು.
- ಉತ್ತರಾಧಿಕಾರ ಯೋಜನೆ : ನಾಯಕತ್ವ ಮತ್ತು ನಿರ್ವಹಣಾ ಪಾತ್ರಗಳಲ್ಲಿ ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು ಸ್ಪಷ್ಟವಾದ ಉತ್ತರಾಧಿಕಾರ ಯೋಜನೆಯನ್ನು ಅಭಿವೃದ್ಧಿಪಡಿಸುವುದು.

**5. ಸಮುದಾಯದ ಒಳಗೊಳ್ಳುವಿಕೆ ಮತ್ತು ಸಾಮಾಜಿಕ ಜವಾಬ್ದಾರಿ :** ಸಹಕಾರಿ ಸಂಸ್ಥೆಗಳು ತಮ್ಮ ಸಮುದಾಯಗಳು ಮತ್ತು ಸಾಮಾಜಿಕ ಕಾರಣಗಳಿಗೆ ಬಲವಾದ ಬದ್ಧತೆಯನ್ನು ಹೊಂದಿರುತ್ತದೆ. ಈ ವಲಯದಲ್ಲಿನ ಉತ್ತಮ ಅಭ್ಯಾಸಗಳೆಂದರೆ:

- ಸಮುದಾಯ ತೊಡಗಿಸಿಕೊಳ್ಳುವಿಕೆ : ಸಮುದಾಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸ್ಥಳೀಯ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ನಿರ್ಮಿಸುವುದು.
- ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮಗಳು : ವಿಶಾಲವಾದ ಸಾಮಾಜಿಕ ಗುರಿಗಳಿಗೆ ಸಹಕಾರಿ ಬದ್ಧತೆಯನ್ನು ಪ್ರತಿಬಿಂಬಿಸುವ ಸಾಮಾಜಿಕ ಮತ್ತು ಪರಿಸರ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದು.
- ಪರಿಣಾಮವನ್ನು ಅಳೆಯುವುದು : ಸಾಮಾಜಿಕ ಮತ್ತು ಪರಿಸರದ ಮೇಲೆ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಪ್ರಭಾವವನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡುವುದು ಮತ್ತು ವರದಿ ಮಾಡುವುದು.

**6. ನಾವೀನ್ಯತೆ ಮತ್ತು ಅಳವಡಿಕೆ :** ಸ್ಪರ್ಧಾತ್ಮಕವಾಗಿ ಮತ್ತು ಪ್ರಸ್ತುತವಾಗಿ ಉಳಿಯಲು, ಸಹಕಾರಿ ಸಂಸ್ಥೆಗಳು ನಾವೀನ್ಯತೆಯನ್ನು ಅಳವಡಿಸಿಕೊಳ್ಳಬೇಕು ಮತ್ತು ಬದಲಾವಣೆಗೆ ಹೊಂದಿಕೊಳ್ಳಬೇಕು. ಇದಕ್ಕೆ ಉತ್ತಮ ಅಭ್ಯಾಸಗಳೆಂದರೆ;

- ಆವಿಷ್ಕಾರವನ್ನು ಉತ್ತೇಜಿಸುವುದು : ಹೊಸ ಆಲೋಚನೆಗಳು ಮತ್ತು ಪರಿಹಾರಗಳನ್ನು ಪ್ರಸ್ತಾಪಿಸಲು ಸದಸ್ಯರು ಮತ್ತು ಉದ್ಯೋಗಿಗಳನ್ನು ಪ್ರೋತ್ಸಾಹಿಸುವ ನಾವೀನ್ಯತೆಯ ಸಂಸ್ಕೃತಿಯನ್ನು ಪೋಷಿಸುವುದು.
- ನಿರಂತರ ಸುಧಾರಣೆ : ಬದಲಾಗುತ್ತಿರುವ ಸದಸ್ಯರ ಅಗತ್ಯತೆಗಳು ಮತ್ತು ಮಾರುಕಟ್ಟೆ ಪರಿಸ್ಥಿತಿಗಳನ್ನು ಪೂರೈಸಲು ಪ್ರಕ್ರಿಯೆಗಳು, ಉತ್ಪನ್ನಗಳು ಮತ್ತು ಸೇವೆಗಳನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡುವುದು ಮತ್ತು ಸುಧಾರಿಸುವುದು.
- ತಂತ್ರಜ್ಞಾನ ಅಳವಡಿಕೆ : ಕಾರ್ಯಾಚರಣೆಗಳು, ಸದಸ್ಯರ ಒಳಗೊಳ್ಳುವಿಕೆ ಮತ್ತು ಸೇವಾ ವಿತರಣೆಯನ್ನು ಹೆಚ್ಚಿಸಲು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು.

**7. ನೈತಿಕ ವ್ಯವಹಾರ ಅಭ್ಯಾಸಗಳು :** ನೈತಿಕ ಮಾನದಂಡಗಳಿಗೆ ಬದ್ಧವಾಗಿರುವುದು ಸಹಕಾರ ಮಾದರಿಗೆ ಮೂಲಭೂತವಾಗಿದೆ. ನೈತಿಕ ವ್ಯವಹಾರದ ಉತ್ತಮ ಅಭ್ಯಾಸಗಳೆಂದರೆ;

- ಸಮಗ್ರತೆ ಮತ್ತು ಪಾರದರ್ಶಕತೆ : ಅತ್ಯುನ್ನತ ಮಟ್ಟದ ಸಮಗ್ರತೆ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 44
Licensed to post without Prepayment License No. PMG BG/WPP-384/2023-2025.

ಮತ್ತು ಪಾರದರ್ಶಕತೆಯೊಂದಿಗೆ ವ್ಯವಹಾರವನ್ನು ನಡೆಸುವುದು, ಸದಸ್ಯರು ಮತ್ತು ಸಮುದಾಯದ ನಡುವೆ ವಿಶ್ವಾಸವನ್ನು ಬೆಳೆಸುವುದು.

- ನ್ಯಾಯಯುತ ಕಾಳಜಿ : ಎಲ್ಲಾ ಸದಸ್ಯರು, ಉದ್ಯೋಗಿಗಳು ಮತ್ತು ಮಧ್ಯಸ್ಥಗಾರರ ನ್ಯಾಯಯುತ ಕಾಳಜಿಯನ್ನು ಖಚಿತಪಡಿಸಿಕೊಳ್ಳುವುದು.
- ಸುಸ್ಥಿರ ಅಭ್ಯಾಸಗಳು : ಪರಿಸರ ಮತ್ತು ಸಮಾಜದ ಮೇಲಿನ ದೀರ್ಘಕಾಲೀನ ಪರಿಣಾಮವನ್ನು ಪರಿಗಣಿಸುವ ಸುಸ್ಥಿರ ವ್ಯವಹಾರ ಅಭ್ಯಾಸಗಳಿಗೆ ಬದ್ಧರಾಗುವುದು.

**8. ಸದಸ್ಯ-ಕೇಂದ್ರಿತ ಸೇವೆ ಮತ್ತು ಉತ್ಪನ್ನ ಅಭಿವೃದ್ಧಿ :** ಸಹಕಾರಿ ಸಂಸ್ಥೆಗಳಿಗೆ ಸದಸ್ಯರ ಅಗತ್ಯತೆಗಳು ಮತ್ತು ಆದ್ಯತೆಗಳ ಮೇಲೆ ಗಮನ ಕೇಂದ್ರೀಕರಿಸುವುದು ಅತ್ಯಗತ್ಯ. ಇದಕ್ಕೆ ಉತ್ತಮ ಅಭ್ಯಾಸಗಳೆಂದರೆ;

- ಅಗತ್ಯಗಳ ಮೌಲ್ಯಮಾಪನ : ನಿಯಮಿತವಾಗಿ ಸೇವೆಗಳು ಮತ್ತು ಉತ್ಪನ್ನಗಳಿಗೆ ತಕ್ಕಂತೆ ಸದಸ್ಯರ ಅಗತ್ಯತೆಗಳು ಹಾಗೂ ಆದ್ಯತೆಗಳನ್ನು ನಿರ್ಣಯಿಸುವುದು.
- ಗ್ರಾಹಕೀಕರಣ ಮತ್ತು ವೈಯಕ್ತೀಕರಣ : ಸದಸ್ಯರ ತೃಪ್ತಿಯನ್ನು ಹೆಚ್ಚಿಸಲು ಸ್ವತಃ ವಿನ್ಯಾಸಗೊಳಿಸಿದ ಮತ್ತು ವೈಯಕ್ತೀಕರಿಸಿದ ಸೇವೆಗಳನ್ನು ನೀಡುವುದು.
- ಗುಣಮಟ್ಟದ ಭರವಸೆ : ಉತ್ತಮ ಗುಣಮಟ್ಟದ ಸೇವೆ ಮತ್ತು ಉತ್ಪನ್ನ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಕಟ್ಟುನಿಟ್ಟಿನ ಗುಣಮಟ್ಟದ ಭರವಸೆ ಪ್ರಕ್ರಿಯೆಗಳನ್ನು ಅಳವಡಿಸಿಕೊಳ್ಳುವುದು.

**9. ಪರಿಣಾಮಕಾರಿ ಸಂವಹನ ಕಾರ್ಯತಂತ್ರಗಳು :** ಸಹಕಾರಿ ಸಂಸ್ಥೆಯ ಸುಗಮ ಕಾರ್ಯಾಚರಣೆಗೆ ಸ್ಪಷ್ಟ ಮತ್ತು ಪರಿಣಾಮಕಾರಿ ಸಂವಹನ ಅತ್ಯಗತ್ಯ. ಇದಕ್ಕೆ ಅತ್ಯುತ್ತಮ ಅಭ್ಯಾಸಗಳೆಂದರೆ;

- ನಿಯಮಿತ ಮಾಹಿತಿಗಳು : ಸಹಕಾರಿ ಸಂಸ್ಥೆಯ ಕಾರ್ಯನಿರ್ವಹಣೆ, ಹೊಸ ಉಪಕ್ರಮಗಳು ಮತ್ತು ಮುಂಬರುವ ಕಾರ್ಯಕ್ರಮಗಳ ಕುರಿತು ಸದಸ್ಯರಿಗೆ ನಿಯಮಿತವಾಗಿ ಮಾಹಿತಿಗಳನ್ನು ಒದಗಿಸುವುದು.
- ಪ್ರತಿಕ್ರಿಯೆ ಕಾರ್ಯವಿಧಾನ : ಸದಸ್ಯರ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಪಡೆದುಕೊಳ್ಳಲು ದೃಢವಾದ ಪ್ರತಿಕ್ರಿಯೆ ಕಾರ್ಯವಿಧಾನಗಳನ್ನು ಅನುಸರಿಸುವುದು.
- ವಿಷಮ ಸ್ಥಿತಿಯಲ್ಲಿ ಸಂವಹನ : ತುರ್ತು ಪರಿಸ್ಥಿತಿಗಳು ಅಥವಾ ಅನಿರೀಕ್ಷಿತ ಘಟನೆಗಳ ಸಂದರ್ಭಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮತ್ತು ಸಂವಹನ ನಡೆಸಲು ಬಿಕ್ಕಟ್ಟು ಸಂವಹನ ಯೋಜನೆಯನ್ನು ಅಭಿವೃದ್ಧಿಪಡಿಸುವುದು.

**ಉಪ ಸಂಹಾರ :**

ಒಟ್ಟಾರೆಯಾಗಿ, ಅಭಿವೃದ್ಧಿಶೀಲ ಮತ್ತು ಸುಸ್ಥಿರ ಸಹಕಾರಿ ಉದ್ಯಮವನ್ನು ಉತ್ತೇಜಿಸಲು ಸಹಕಾರ ನಿರ್ವಹಣೆಯಲ್ಲಿ ಉತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ. ಪ್ರಜಾಸತ್ತಾತ್ಮಕ ಆಡಳಿತವನ್ನು ಉತ್ತೇಜಿಸುವ ಮೂಲಕ, ಸದಸ್ಯರ ಒಳಗೊಳ್ಳುವಿಕೆಯನ್ನು ಹೆಚ್ಚಿಸುವ ಮೂಲಕ, ಪರಿಣಾಮಕಾರಿ ಆರ್ಥಿಕ ನಿರ್ವಹಣೆಯನ್ನು ಖಾತ್ರಿಪಡಿಸಿಕೊಳ್ಳುವುದು, ಬಲಿಷ್ಠ ನಾಯಕತ್ವವನ್ನು ಬೆಳೆಸುವುದು, ಸಮುದಾಯದ ಒಳಗೊಳ್ಳುವಿಕೆ ಮತ್ತು ಸಾಮಾಜಿಕ ಹೊಣೆಗಾರಿಕೆಗೆ ಬದ್ಧತೆ, ನಾವೀನ್ಯತೆಯನ್ನು ಅಳವಡಿಸಿಕೊಳ್ಳುವುದು ಮತ್ತು ನೈತಿಕ ವ್ಯವಹಾರ ಅಭ್ಯಾಸಗಳಿಗೆ ಬದ್ಧವಾಗಿರುವುದರ ಮೂಲಕ ಸಹಕಾರಿ ಸಂಸ್ಥೆಗಳು ತಮ್ಮ ಧ್ಯೇಯವನ್ನು ಸಾಧಿಸಬಹುದು ಮತ್ತು ಅದರ ಸದಸ್ಯರ ಹಾಗೂ ಸಮುದಾಯಗಳ ಮೇಲೆ ಶಾಶ್ವತವಾದ ಧನಾತ್ಮಕ ಪ್ರಭಾವವನ್ನು ಬೀರಬಹುದು.

ಹಂಚಿಕೆಯ ಮಾಲೀಕತ್ವ ಮತ್ತು ಸಾಮೂಹಿಕ ನಿರ್ಧಾರ-ಕೈಗೊಳ್ಳುವಿಕೆಯ ಮೇಲೆ ಕೇಂದ್ರೀಕೃತವಾಗಿರುವ ಸಹಕಾರಿ ಸಂಸ್ಥೆಗಳ ವಿಶಿಷ್ಟ ರಚನೆಯು ಸ್ಥಿತಿಸ್ಥಾಪಕತ್ವ ಮತ್ತು ಸಾಮಾಜಿಕವಾಗಿ ಜವಾಬ್ದಾರಿಯುತ ವ್ಯವಹಾರ ಮಾದರಿಯನ್ನು ನೀಡುತ್ತದೆ. ಈ ತತ್ವಗಳಿಗೆ ಬದ್ಧವಾಗಿ ಉಳಿಯುವ ಮೂಲಕ ಮತ್ತು ನಿರ್ವಹಣಾ ಅಭ್ಯಾಸಗಳಲ್ಲಿ ಉತ್ಕೃಷ್ಟತೆಗಾಗಿ ನಿರಂತರವಾಗಿ ಶ್ರಮಿಸುವ ಮೂಲಕ, ಸಹಕಾರಿ ಸಂಸ್ಥೆಗಳನ್ನು ಆಧುನಿಕ ವ್ಯವಹಾರ ಪರಿಸರದಲ್ಲಿ ಸಂಕೀರ್ಣತೆಗಳಲ್ಲಿ ಮುನ್ನಡೆಸುವುದು ಮತ್ತು ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಯ ದಾರಿದೀಪಗಳಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರೆಸಬಹುದು. ಸಹಕಾರಿ ನಾಯಕರಾಗಿರಲಿ, ಸದಸ್ಯರಾಗಿರಲಿ ಅಥವಾ ವಕೀಲರಾಗಿರಲಿ, ಈ ಉತ್ತಮ ಅಭ್ಯಾಸಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅನ್ವಯಿಸುವುದರ ಮೂಲಕ ಯಶಸ್ವಿ ಸಹಕಾರಿ ಉದ್ಯಮಗಳನ್ನು ನಿರ್ಮಿಸಲು ಮತ್ತು ಉಳಿಸಿಕೊಳ್ಳಲು ನಿರ್ಣಾಯಕವಾಗಿದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055 ದೂ : 080-23378375-80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080-23449933/34

ಇ-ಸ್ಟ್ಯಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ-ಸ್ಟ್ಯಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055 ದೂ: 080-23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821-2332299

ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ-590015 ದೂರವಾಣಿ: 0831-2401551.

ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ-585102. ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003